ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೦೫
ವಿಚಾರ ಸಾಹಿತ್ಯಮಾಲೆ – ೨೬
ಭಾರತೀಯ ವಿದ್ಯಾ ಭವನದ, ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

ಸಂಪಾದಕರು
**ಡಾ. ಎ.ವಿ. ನರಸಿಂಹಮೂರ್ತಿ**

# ನಮ್ಮ ಧರ್ಮ

## ಭವನದ ಗ್ರಂಥ ವಿಶ್ವವಿದ್ಯಾನಿಲಯ


ಮಾಲೆಯ
ಮೂಲ ಸಂಪಾದಕರು
**ಕೆ.ಎಂ. ಮುನ್ಷಿ**
**ಆರ್.ಆರ್. ದಿವಾಕರ್**

ವ್ಯವಸ್ಥಾಪಕ ಮಂಡಳಿ
**ಲೀಲಾವತಿ ಮುನ್ಷಿ** – ಅಧ್ಯಕ್ಷೆ
**ಕೆ.ಕೆ. ಬಿರ್ಲಾ** – ಸದಸ್ಯರು
**ಎಸ್.ಜಿ. ನೇವಾತಿಯ** – ಸದಸ್ಯರು
**ಜಿ.ಎಚ್. ದವೆ** – ಸದಸ್ಯರು
**ಎಸ್. ರಾಮಕೃಷ್ಣನ್** – ಸದಸ್ಯರು

**ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿ**

**ಎನ್. ರಾಮಾನುಜ** – ಅಧ್ಯಕ್ಷರು
(ಅಧ್ಯಕ್ಷರು, ವಿದ್ಯಾ ಭವನ, ಕರ್ನಾಟಕ)

**ಡಾ. ಮತ್ತೂರು ಕೃಷ್ಣಮೂರ್ತಿ**
(ಕಾರ್ಯಕಾರಿ ನಿರ್ದೇಶಕರು, ವಿದ್ಯಾ ಭವನ, ಬೆಂಗಳೂರು)
**ಎಚ್.ಎನ್. ಸುರೇಶ್**
(ನಿರ್ದೇಶಕರು, ಕಾರ್ಯಕ್ರಮ ಮತ್ತು ಯೋಜನೆಗಳು
ವಿದ್ಯಾ ಭವನ, ಬೆಂಗಳೂರು)
**ಡಾ. ಎ.ವಿ. ನರಸಿಂಹಮೂರ್ತಿ**
(ಅಧ್ಯಕ್ಷರು, ವಿದ್ಯಾ ಭವನ, ಮೈಸೂರು)




# ನಮ್ಮ ಧರ್ಮ

ಆ ನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ
(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)
–ಋಗ್ವೇದ, I. ೮೯–೧


ಮೂಲ
**ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು**

ಸಂಕಲನ
**ಆರ್. ಕೃಷ್ಣಸ್ವಾಮಿ ಅಯ್ಯರ್**

ಅನುವಾದ
**ಹುರಗಲವಾಡಿ ಲಕ್ಷ್ಮೀನರಸಿಂಹಶಾಸ್ತ್ರೀ**



**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ,** ಬೆಂಗಳೂರು
ಮತ್ತು
**ಭಾರತೀಯ ವಿದ್ಯಾ ಭವನ,** ಮೈಸೂರು

**Namma Dharma :** Kannada translation of *Our Duty* by **Sri Chandrasekhara Bharati Swamiji ;** Compiled by R. Krishnaswamy Iyer ; Kannada translation by **Hurgalavadi Lakshminarasimha Sastry ;** Editor-in-Chief: **Dr. Pradhan Gurudatta**; Editor of the series : **Dr. A.V. Narasimha Murthy;** published under the joint auspices of **Kuvempu Bhasha Bharati Pradhikara**, Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore Published by **P. Narayana Swamy,** Registrar, Kuvempu Bhasha Bharathi Pradhikara : 2010; Pp. xxii + 44 ; Price: Rs. 10/-

© ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

ಮುದ್ರಣ : ೨೦೧೦
ಪುಟಗಳು : xxii + ೪೪
ಬೆಲೆ : ರೂ. ೧೦/-

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
**ಮೆ|| ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್‌ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪



**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ : ೫-೮-೨೦೦೯
ಸಿಎಂ/ಪಿಎಸ್/೧೪೭/೦೯

## ಮೊದಲ ಮಾತು

ಕನ್ನಡ ನಾಡಿನ ಹೆಮ್ಮೆಯ ಮಹಾಕವಿ ಶ್ರೀ ಕುವೆಂಪು ಅವರು ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿದ ಮಹಾಚೇತನ. ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸಂಸ್ಥಾಪಿಸಿರುವ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'** ರಾಷ್ಟ್ರೀಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಬೇಕೆಂಬುದು ಸರ್ಕಾರದ ಸದಾಶಯ. ಬೆಂಗಳೂರು **'ಜ್ಞಾನಭಾರತಿ'** ಆವರಣದಲ್ಲಿ ನಿರ್ಮಿಸಲಾಗಿರುವ ಬೃಹತ್ ಭವನದ ಸಮುಚ್ಚಯದಲ್ಲಿ ಶಿಕ್ಷಣ, ತರಬೇತಿ ಮತ್ತು ಪ್ರಕಟಣೆಗಳ ರೂಪದಲ್ಲಿ ಬಹು-ಆಯಾಮದ ಅದರ ಚಟುವಟಿಕೆಗಳು ಅರಳಿನಿಲ್ಲಲಿವೆ.

ಅದು ಆರಂಭಿಸಲಿರುವ ಭಾಷಾಂತರ ಮತ್ತು ತೌಲನಿಕ ಸಾಹಿತ್ಯ ಸಂಬಂಧವಾದ ವಿಶಿಷ್ಟ ಶಿಕ್ಷಣಗಳು ಆಡಳಿತ ಕ್ಷೇತ್ರ, ನ್ಯಾಯಾಂಗ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಪೂರಕವಾಗಿ, ಕನ್ನಡವನ್ನು ಸರ್ವತೋಮುಖವಾಗಿ ಬೆಳೆಸಲು ಸಹಾಯಕವಾಗಲಿವೆ.

ಭಾರತೀಯ ಭಾಷಾ-ಸಾಹಿತ್ಯಗಳ ಉತ್ತಮೋತ್ತಮ ಕೃತಿಗಳನ್ನು ಮಾತ್ರವಲ್ಲದೆ, ವಿಶ್ವಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳನ್ನು ಜಾಗತಿಕ ಸಾಹಿತ್ಯಕ್ಕೆ ಪರಿಚಯಿಸಿಕೊಡುವ ಕರ್ತವ್ಯದ ಜೊತೆಗೆ, ಜ್ಞಾನ-ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ತರ ಕಾರ್ಯವನ್ನೂ ಅದು ಹಮ್ಮಿಕೊಳ್ಳಬೇಕಾದ ಅಗತ್ಯವಿದೆ.

ನಾಡಿನ ಶ್ರೇಷ್ಠ ವಿದ್ವಾಂಸರ ಸಲಹೆ-ಸೂಚನೆ-ಮಾರ್ಗದರ್ಶನಗಳ ಬೆಳಕಿನಲ್ಲಿ ಅದರ ಕೆಲಸ ಕಾರ್ಯಗಳು ಆದರ್ಶಪ್ರಾಯವಾಗಿ ಮೂಡಿಬರಲಿ ಹಾಗೂ ಇದೊಂದು ವಿಶಿಷ್ಟ ಸಂಸ್ಥೆಯಾಗಿ ದೇಶ-ವಿದೇಶಗಳ ಗಮನವನ್ನೂ ಸೆಳೆಯುವಂತಾಗಲಿ ಎಂದು ಹಾರೈಸುತ್ತೇನೆ.

ಕುವೆಂಪು ಭಾಷಾ ಭಾರತಿ ಪ್ರಧಿಕಾರದ ಕಾರ್ಯಚಟುವಟಿಕೆಗಳಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬೇಕೆಂಬ, ಇದರ ಪ್ರಕಟಣೆಗಳನ್ನು ಜನಸಮುದಾಯ ಆದರ-ವಿಶ್ವಾಸಗಳಿಂದ ಸ್ವೀಕರಿಸುವರೆಂಬ ಆಶಯ ನಮ್ಮದಾಗಿದೆ.

ಭರತೀಯು ವಿದ್ಯಾಭವನದಂದ ರಾಷ್ಟ್ರೀಯು ಮಹತ್ವದ ಸಂಸ್ಥೆಯು ಸಹಯೋಗದೊಂದಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾಲಯು ಮಾಲೆಯು ಪುಸ್ತಕಗಳನ್ನು ಹೊರತರುವ ಯೋಜನೆಯನ್ನು ಹಾಕಿಕೊಂಡಿರುವುದು ಸಂತೋಷದ ಬೆಳವಣಿಗೆಯೇ ಆಗಿದೆ. ಈ ಮಾಲೆಯ ಪುಸ್ತಕಗಳು ಕುವೆಂಪು ಭಾಷಾ ಭಾರತಿ ಮತ್ತು ಭಾರತೀಯ ವಿದ್ಯಾಭವನದ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದೂ ಸಂತೋಷದ ಸಂಗತಿಯೇ ಆಗಿದೆ.

(ಬಿ.ಎಸ್.ಯಡಿಯೂರಪ್ಪ)

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ, ಸಣ್ಣ ನೀರಾವರಿ ಹಾಗೂ
ಜವಳಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

## ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿಸುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

**ಗೋವಿಂದ ಎಂ. ಕಾರಜೋಳ**



ಕರ್ನಾಟಕ ಸರ್ಕಾರ

**ರಮೇಶ್ ಬಿ.ಝಳಕಿ,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಕಾಸ ಸೌಧ
ಬೆಂಗಳೂರು – ೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ನಮ್ಮ ನಾಡಿನ ಜನಸಮುದಾಯದ ಗಮನವನ್ನು ಸೆಳೆಯುವ ದಿಕ್ಕಿನಲ್ಲಿ ಮುನ್ನಡೆಯುತ್ತಿರುವುದು ತುಂಬ ಸಂತೋಷದ ಸಂಗತಿಯೇ ಆಗಿದೆ. ಪ್ರಾಧಿಕಾರದ ಒಂದು ಭಾಗವೇ ಆಗಿ ಕಲ್ಪಿಸಿಕೊಳ್ಳಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಹೊರತರಲಾಗಿದ್ದ ಸುಮಾರು ೬೦ ಗ್ರಂಥಗಳ ಜೊತೆಗೆ, ಪ್ರಾಧಿಕಾರ ಮತ್ತಷ್ಟು ಮಹತ್ವಪೂರ್ಣ ಗ್ರಂಥಗಳನ್ನು ಹೊರತರುತ್ತಿದ್ದು, ಸದ್ಯದಲ್ಲಿಯೇ ಈ ಸಂಖ್ಯೆ ನೂರರ ಗಡಿಯನ್ನು ದಾಟಲಿದೆ. 'ಭಾರತೀಯ ವಿದ್ಯಾಭವನ'ದಂಥ ರಾಷ್ಟ್ರೀಯ ಸಂಸ್ಥೆಯೊಂದಿಗೆ ಸಂಯುಕ್ತ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಪ್ರಾಧಿಕಾರ ಮುನ್ನಡೆಯಲಿರುವುದು ಪ್ರಾಧಿಕಾರದ ಚಟುವಟಿಕೆಗಳಿಗೆ ಹೊಸ ಆಯಾಮವನ್ನೇ ನೀಡಲಿದೆ ಎಂದು ನಂಬಿದ್ದೇನೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ೧೪ ಸಂಪುಟಗಳ ಕನ್ನಡ ಅನುವಾದದ ಪರಿಷ್ಕರಣ, ೧೫ ರಿಂದ ಮುಂದಿನ ಸಂಪುಟಗಳ ಅನುವಾದ ಕಾರ್ಯ, ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡ ಅನುವಾದದ ಪ್ರಕಟಣೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರ ಸಂಚಯಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳ ಪ್ರಕಟಣೆ – ಇವೇ ಮೊದಲಾದ ಮಹತ್ವದ ಕಾರ್ಯಕ್ರಮಗಳನ್ನು ಈ ಪ್ರಾಧಿಕಾರ ಹಮ್ಮಿಕೊಂಡಿರುವುದು ಸ್ತುತ್ಯರ್ಹವಾದ ಸಂಗತಿಯೇ ಆಗಿದೆ. 'ಕಾವೇರಿ ನ್ಯಾಯಾಧಿಕರಣ'ದ ತೀರ್ಪಿನ ಕನ್ನಡ ಆವೃತ್ತಿಯೂ ಸದ್ಯದಲ್ಲಿಯೇ ಹೊರಬರಲಿದೆ. ವೈಜ್ಞಾನಿಕ, ತಾಂತ್ರಿಕ ಮತ್ತು ವೈದ್ಯಕೀಯ ಸಾಹಿತ್ಯ ಪ್ರಕಟಣೆಯತ್ತಲೂ ಪ್ರಾಧಿಕಾರ ಗಮನಹರಿಸಿದೆ. ಪ್ರಾಧಿಕಾರದ ಮುನ್ನಡೆಗೆ ಕರ್ನಾಟಕ ಸರ್ಕಾರದ ಎಲ್ಲ ಬಗೆಯ ನೆರವೂ ಲಭಿಸಲಿದೆ.

ಈ ಎಲ್ಲ ಚಟುವಟಿಕೆಗಳು ಕನ್ನಡಿಗರ ಆದರ, ಮೆಚ್ಚಿಕೆ, ಸಂತೋಷಗಳಿಗೆ ಪಾತ್ರವಾಗುತ್ತದೆಂದು ನಂಬಿದ್ದೇನೆ.

(ರಮೇಶ್ ಬಿ.ಝಳಕಿ)

ಕರ್ನಾಟಕ ಸರ್ಕಾರ

**ಮನು ಬಳಿಗಾರ್**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ದಿನಾಂಕ : ೦೭.೦೮.೨೦೦೯

# ಪ್ರಾಸ್ತಾವಿಕ ನುಡಿ

ಕುವೆಂಪು ಭಾಷಾ ಭಾರತಿ ಅಂಗವಾಗಿ ಕರ್ನಾಟಕ ಸರ್ಕಾರ ೨೦೦೫ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕೇವಲ ಮೂರು ವರ್ಷಗಳಲ್ಲಿ ಮಾಡಿರುವ ವೈವಿಧ್ಯಮಯವಾದ ಕಾರ್ಯವನ್ನು ನಾನು ಗಮನಿಸಿದ್ದೇನೆ. ಕುವೆಂಪು ಭಾಷಾ ಭಾರತಿಯ ಕಟ್ಟಡ ಸಮುಚ್ಚಯದ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಅದರ ಉದ್ಘಾಟನ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ. ವೈವಿಧ್ಯಮಯವಾದ ಮತ್ತು ವ್ಯಾಪಕವಾದ ಕಾರ್ಯಯೋಜನೆಗಳನ್ನು, ಧ್ಯೇಯೋದ್ದೇಶಗಳನ್ನು ಹೊಂದಿರುವ ಕುವೆಂಪು ಭಾಷಾ ಭಾರತಿ ಕುವೆಂಪು ಅವರ ಹೆಸರಿನಲ್ಲಿಯೇ ಸ್ಥಾಪಿತವಾಗಿದ್ದರೂ ಕುವೆಂಪು ಸಾಹಿತ್ಯದ ಪ್ರಚಾರ ಪ್ರಸಾರಗಳಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ. ಕುವೆಂಪು ಮಾಡಿರುವ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿ ಈ ಸಂಸ್ಥೆಗೆ ಆ ಹೆಸರನ್ನು ಕೊಡಲಾಗಿದೆ. ಕನ್ನಡ ಭಾಷಾ ಸಾಹಿತ್ಯಗಳ ಹಿರಿಯ ಸಾಧನೆಯನ್ನು ಕನ್ನಡೇತರರಿಗೆ, ದೇಶ–ವಿದೇಶಗಳ ಸಾಹಿತ್ಯಿಕ ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವುದಲ್ಲದೆ, ಸಾಹಿತ್ಯ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗೆ ಕನ್ನಡವನ್ನು ಅಣಿಗೊಳಿಸುವ ಧ್ಯೇಯವನ್ನೂ ಇದು ಇರಿಸಿಕೊಂಡಿದೆ. ಹೀಗೆ ಇದು ಸರ್ವಭಾಷೆಗಳ ಸಾಮರಸ್ಯದ ಪ್ರತೀಕವಾದ ಸಾಹಿತ್ಯಿಕ ಸಂಸ್ಥೆಯಾಗಿ ಕೆಲಸ ಮಾಡಲಿದೆ. ಭಾಷಾಂತರ ಶಿಕ್ಷಣ, ವಿದೇಶ ಭಾಷೆಗಳ ಶಿಕ್ಷಣ, ತೌಲನಿಕ ಸಾಹಿತ್ಯಾಧ್ಯಯನ, ತರಬೇತಿ ಕಾರ್ಯಕ್ರಮಗಳು, ಪ್ರಕಟಣೆಗಳು – ಹೀಗೆ ಬಹುಮುಖವಾದ ಕಾರ್ಯಚಟುವಟಿಕೆಗಳಿಂದ ಕುವೆಂಪು ಭಾಷಾ ಭಾರತಿ ನಾಡಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆದು ಬರಬೇಕೆಂಬ ಆಶಯವನ್ನು ಇರಿಸಿಕೊಳ್ಳಲಾಗಿದೆ. ಕುವೆಂಪು ಭಾಷಾ ಭಾರತಿಯ ಅಂಗವಾಗಿ ಈ ಹಿಂದೆ ಸ್ಥಾಪಿತವಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕುವೆಂಪು ಭಾಷಾ ಭಾರತಿಯಲ್ಲಿ ಈಗ ವಿಲೀನಗೊಂಡಿದ್ದು, ಹೆಚ್ಚಿನ ವೈವಿಧ್ಯ ಮತ್ತು ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಅದು ತನ್ನನ್ನು ತೊಡಗಿಸಿಕೊಳ್ಳಲಿದೆ. ಈ ಅಕಾಡೆಮಿಯ ಮೂರು ವರ್ಷಗಳ ಅಲ್ಪಾವಧಿಯಲ್ಲಿ ಅಭಿನಂದನೀಯವಾದ ಕಾರ್ಯವನ್ನು ಮಾಡಿದ ಹಿರಿಯ ಬಹುಭಾಷಾ ವಿದ್ವಾಂಸರಾದ ಡಾ. ಪ್ರಧಾನ್ ಗುರುದತ್ತ ಅವರನ್ನು ಕುವೆಂಪು ಭಾಷಾ ಭಾರತಿಯ ಪ್ರಥಮಾಧ್ಯಕ್ಷರಾಗಿ ಕರ್ನಾಟಕ ಸರ್ಕಾರ ನೇಮಕ ಮಾಡಿದ್ದು,



ಅವರು ಈ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಂಕಲ್ಪಬದ್ಧರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ.

ಕುವೆಂಪು ಭಾಷಾ ಭಾರತಿ ತನ್ನ ವಿಶಿಷ್ಟ ಕಾರ್ಯಚಟುವಟಿಕೆಗಳಿಂದ ಕನ್ನಡಿಗರ ಮೆಚ್ಚಿನ ಸಾಹಿತ್ಯಿಕ – ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ಸಂಸ್ಥೆಯ ಉದ್ಘಾಟನೆಯ ಹೊತ್ತಿಗೆ ಅದರ ಅನೇಕ ಪ್ರಕಟಣೆಗಳು ಹೊರತರುತ್ತಿರುವುದು ಅದರ ಕಾರ್ಯಚಟುವಟಿಕೆಗಳ ಪ್ರತೀಕವಾಗಿದೆ. ಈ ಸಂಸ್ಥೆ ಇತೋಪ್ಯತಿಶಯವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಭಾರತೀಯ ಸಂಸ್ಕೃತಿ, ಇತಿಹಾಸ ಸಾಹಿತ್ಯಕ ಕ್ಷೇತ್ರಗಳಿಗೆ ತನ್ನ ಪ್ರಕಟಣೆಗಳ ಮೂಲಕ ಹಾಗೂ ಶೈಕ್ಷಣಿಕ ಕಾರ್ಯಗಳ ಮುಖೇನ ಸ್ಮರಣೀಯ ಸೇವೆಯನ್ನು ಸಲ್ಲಿಸುವ ಮೂಲಕ ಭಾರತೀಯ ವಿದ್ಯಾಭವನ ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿ ಪರಿಣಮಿಸಿದೆ. 'ಹಿಸ್ಟರಿ ಅಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್' ಮಾಲೆಯ ಸಂಪುಟಗಳ ಮೂಲಕ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳ ನೈಜ ಚಿತ್ರಣವನ್ನು ಮುಂದಿರಿಸಿದ ಹಿರಿಮೆಯೂ ಅದರದಾಗಿದೆ. ಜನಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿಕೊಂಡು ರಚಿಸಲಾದ ಅದರ 'ಬುಕ್ ಯೂನಿವರ್ಸಿಟಿ' ಮಾಲೆಯ ಪುಸ್ತಕಗಳ ಕನ್ನಡ ಆವೃತ್ತಿ ಭಾರತೀಯ ವಿದ್ಯಾಭವನ ಮತ್ತು ಕುವೆಂಪು ಭಾಷಾ ಭಾರತಿಯ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷ ಸಮಾಧಾನಗಳನ್ನು ತಂದಿದೆ. ಈ ಪುಸ್ತಕಗಳನ್ನು ಕನ್ನಡ ಜನತೆ ಎಂದಿನಂತೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

(ಮನು ಬಳಿಗಾರ್)

## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯುವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು. ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ.ದೇ.ಜವರೇಗೌಡ ಅವರು, 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ಆವರಣದಲ್ಲಿ ಎರಡು ಎಕರೆಗಳಷ್ಟು ವಿಶಾಲವಾದ ಸ್ಥಳದಲ್ಲಿ 'ಕುವೆಂಪು ಭಾಷಾ ಭಾರತಿ'ಯ ಕಟ್ಟಡದ ಶಿಲಾನ್ಯಾಸ



ಕಾರ್ಯಕ್ರಮ ದಿನಾಂಕ:೦೧.೦೯.೨೦೦೫ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್.ಧರ್ಮಸಿಂಗ್ ಅವರಿಂದ ನೆರವೇರಿತು. 'ವಿಶ್ವಚೇತನ' ಮತ್ತು 'ಕಾಜಾಣ' ಎಂದು ಹೆಸರಿಸಲಾಗಿರುವ ಎರಡು ಬೃಹತ್ ಕಟ್ಟಡಗಳ ಸಮುಚ್ಚವನ್ನು ಒಳಗೊಂಡಿರುವ ಕುವೆಂಪು ಭಾಷಾ ಭಾರತಿಯ ಕಟ್ಟಡದ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೨೦೦೯ರಲ್ಲಿ ಇದರ ಕಾಮಗಾರಿ ಪೂರ್ಣಗೊಂಡಿದೆ. ಇದೇ ದಿನಾಂಕ:೧೯.೦೮.೨೦೦೯ರ ಬೆಳಗ್ಗೆ ೧೧.೦೦ ಗಂಟೆಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ಅವರು ಈ ಕಟ್ಟಡ–ಸಮುಚ್ಚಯದ ಉದ್ಘಾಟನ ಸಮಾರಂಭವನ್ನು ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆಗಳ ಮೊದಲ ಕಂತಿನ ಹತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಸ್ವರೂಪ ಮೂರು ಮುಖದ್ದಾಗಿರುತ್ತದೆ :

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು
(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
(ಇ) ಪ್ರಕಟಣೆಗಳು

**(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು :**

(i) "ಕನ್ನಡ ಸಾಹಿತ್ಯ ಹಿರಿಮೆ–ಗರಿಮೆಗಳಲ್ಲಿ ಯಾವ ಭಾರತೀಯ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ. ಅದರ ಮಹತ್ವವನ್ನು ಎತ್ತಿತೋರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಅಷ್ಟೇ" ಎಂಬುದಾಗಿ ಕುವೆಂಪು ಅವರು ಉದ್ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅಂಗವಾಗಿ ಅನುವಾದ, ತೌಲನಿಕ ಸಾಹಿತ್ಯ, ವಿದೇಶಿ ಭಾಷೆಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಶಿಕ್ಷಣ ಕ್ರಮಗಳನ್ನು ಆರಂಭಿಸಬೇಕೆಂದು ಯೋಜಿಸಲಾಗಿದೆ :

(೧) ಭಾಷಾಂತರ ಡಿಪ್ಲೊಮಾ ಶಿಕ್ಷಣ – ಮೊದಲ ಹಂತದಲ್ಲಿ ಇಂಗ್ಲಿಷ್, ಹಿಂದೀ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಬಂಗಾಳಿ, ಮರಾಠಿ ಭಾಷೆಗಳಲ್ಲಿ ವಿಶೇಷ ತರಬೇತಿಗೆ ಒತ್ತುಕೊಟ್ಟು ಈ ಶಿಕ್ಷಣವನ್ನು ಪ್ರಾರಂಭಿಸಲಾಗುತ್ತದೆ.
(೨) ಭಾಷಾಂತರದಲ್ಲಿ ಎಂ.ಫಿಲ್ ಶಿಕ್ಷಣ : ವಿಶೇಷ ವಿಷಯಕ್ಕೆ ಒತ್ತುಕೊಟ್ಟು
(೩) ಪತ್ರಿಕೋದ್ಯಮ ಮತ್ತು ಭಾಷಾಂತರ
(೪) ಕಾನೂನುಶಾಸ್ತ್ರ, ಆಡಳಿತ ಭಾಷೆ ಮತ್ತು ಭಾಷಾಂತರ
(೫) ವಿಜ್ಞಾನ ಮತ್ತು ಮಾನವಿಕಶಾಸ್ತ್ರ ಕೃತಿಗಳು ಮತ್ತು ಭಾಷಾಂತರ ; ಮತ್ತು
(೬) ತೌಲನಿಕ ಸಾಹಿತ್ಯ
(೭) ವಿದೇಶೀ ಭಾಷೆಗಳ ಶಿಕ್ಷಣ (ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ)

(ii) ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಮಟ್ಟದಲ್ಲಿ ಪ್ರಚುರಪಡಿಸಬೇಕಾದರೆ – ಜಾಗತಿಕ ಪ್ರಾಚುರ್ಯದ ವಿದೇಶಿ ಭಾಷೆಗಳಿಗೆ ಕನ್ನಡದ ಶ್ರೇಷ್ಠ ಕೃತಿಗಳನ್ನು

ಕೊಂಡೊಯ್ಯುವ ಮಹತ್ವದ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಮೊದಲ ಹಂತದಲ್ಲಿ ಸ್ಪ್ಯಾನಿಷ್, ಜಪಾನಿ, ಫ್ರೆಂಚ್, ರಷ್ಯನ್, ಜರ್ಮನ್, ಚೀಣೀ, ಆಫ್ರಿಕನ್ ಭಾಷೆಗಳು – ಈ ಎಲ್ಲ ಶಿಕ್ಷಣಗಳಿಗೆ ಸಂಬಂಧಿಸಿದಂತೆ, ತಜ್ಞರೊಂದಿಗೆ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸುವುದು, ಶಿಕ್ಷಣಕ್ಕೆ ಮತ್ತು ತರಬೇತಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಮೊದಲಾದ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತದೆ. ವಿದೇಶಿ ದೂತಾವಾಸಗಳ ನೆರವಿನೊಂದಿಗೆ ಈ ಶಿಕ್ಷಣ ಕ್ರಮಗಳನ್ನು ಯೋಜಿಸಲಾಗುತ್ತದೆ.

ವಿವಿಧ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ತರುಣ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ತರಬೇತಿ ನೀಡಿ ಪ್ರಕಟಣಾವಕಾಶಗಳನ್ನು ಕಲ್ಪಿಸಿಕೊಡಲು ಅನುಕೂಲವಾಗುವಂತೆ ವಿಚಾರಗೋಷ್ಠಿಗಳು, ವಿಚಾರಸಂಕಿರಣಗಳು, ಕಾರ್ಯಶಿಬಿರಗಳು ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕುವೆಂಪು ಅವರು ಸಾಹಿತ್ಯ ಮತ್ತು ವಿಜ್ಞಾನ–ತಂತ್ರಜ್ಞಾನಗಳನ್ನು ಮಾನವ ಸಂಸ್ಕೃತಿಯ ಕಣ್ಣುಗಳೆಂದೇ ಭಾವಿಸಿದ್ದವರು. ಹೀಗಾಗಿ, ಜ್ಞಾನದ ಇತರ ಕ್ಷೇತ್ರಗಳತ್ತಲೂ ಕುವೆಂಪು ಭಾಷಾಭಾರತಿ ಕೈಚಾಚಲಿದೆ. ಈ ದೃಷ್ಟಿಯಲ್ಲಿ ಕನ್ನಡವನ್ನು ಸರ್ವಾಂಗ ಸಮೃದ್ಧವಾಗಿ ಬೆಳೆಸುವ ಅವರ ಆಶಯ ಕಾರ್ಯರೂಪಕ್ಕೆ ಬರಬಹುದಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಅನುವಾದ ಮಿಶನ್ ಯೋಜನೆ ಕಾರ್ಯರೂಪಕ್ಕೆ ಬರಲಿರುವ ಹಿನ್ನೆಲೆಯಲ್ಲಿ, ಇಂಥ ಶಿಕ್ಷಣಗಳನ್ನು ಪ್ರಾರಂಭಿಸುವುದಕ್ಕೆ ಹೆಚ್ಚಿನ ಅರ್ಥ ಮತ್ತು ಔಚಿತ್ಯ ದೊರೆಯುವಂತಾಗುತ್ತದೆ.

### (ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :

ಕೇಂದ್ರ ಸಾಹಿತ್ಯ ಅಕಾಡೆಮಿ ರವೀಂದ್ರನಾಥ ಠಾಗೂರ್ ಅವರ ಪ್ರಾತಿನಿಧಿಕ ಸಂಕಲನಗಳನ್ನೊಳಗೊಂಡ 'ರವೀಂದ್ರ ಸಂಚಯ'ವನ್ನು ಹೊರತಂದಿರುವ ರೀತಿಯಲ್ಲಿಯೇ 'ಕುವೆಂಪು ಸಂಚಯ' ಮತ್ತು 'ಪು.ತಿ.ನ ಸಂಚಯ'ಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಹೊರತರಲಾಗುತ್ತದೆ. ಮುಂಬರುವ ದಿನಗಳಲ್ಲಿ ಜಿ.ಎಸ್.ಶಿವರುದ್ರಪ್ಪ ಮೊದಲಾದ ಕನ್ನಡದ ಮಹತ್ವದ ಕವಿಗಳ ಸಂಕಲನಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ತರುವ ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತದೆ. ಇದೇ ರೀತಿಯಲ್ಲಿ ಭಾರತೀಯ ಜ್ಞಾನಪೀಠ ಮತ್ತು ಇತರ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗಳಿಸಿರುವ ಶ್ರೇಷ್ಠ ಸಾಹಿತಿಗಳ ಪ್ರಾತಿನಿಧಿಕ ರಚನೆಗಳನ್ನು ಒಳಗೊಂಡ ಸಂಚಯ ಕೃತಿಗಳನ್ನು ಹೊರತರಲೂ ಕ್ರಮಕೈಗೊಳ್ಳಲಾಗುತ್ತದೆ. ಉದಾ: ಮೈಥಿಲಿ ಶರಣಗುಪ್ತ ಸಂಚಯ, ಜಯಶಂಕರ ಪ್ರಸಾದ್ ಸಂಚಯ (ಹಿಂದೀ), ವಿಶ್ವನಾಥ ಸಂಚಯ (ತೆಲುಗು), ಆಶಾಪೂರ್ಣದೇವಿ ಸಂಚಯ (ಬಂಗಾಳಿ), ಶಿವಶಂಕರ ಪಿಳ್ಳೈ ಮತ್ತು ಎಂ.ಟಿ.ವಾಸುದೇವ ನಾಯರ್ ಸಂಚಯ (ಮಲಯಾಳಂ) ಇತ್ಯಾದಿ.

ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮತ್ತು ಜಾಗತಿಕ ಸ್ತರಗಳಲ್ಲಿ ಪ್ರಚುರಪಡಿಸಲು ವಿಚಾರಗೋಷ್ಠಿಗಳನ್ನು ಸಮಾರಂಭಗಳನ್ನು ಏರ್ಪಡಿಸುವಂತೆಯೇ, ಇತರ ಭಾರತೀಯ ಭಾಷಾಸಾಹಿತ್ಯ ಮತ್ತು ವಿಶ್ವಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಇದೇ ಬಗೆಯ ಅರ್ಥಪೂರ್ಣ ಕಾರ್ಯಕ್ರಮಗಳನ್ನೂ ರೂಪಿಸಲಾಗುತ್ತದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಧ್ಯೇಯೋದ್ದೇಶಗಳಿಗೆ



ಪೂರಕವೂ–ಪ್ರೇರಕವೂ ಆಗುವಂತೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅಂತೆಯೇ, ರಾಷ್ಟ್ರಮಟ್ಟದ ಸಾಹಿತ್ಯಿಕ ಸಂಘ–ಸಂಸ್ಥೆಗಳಾಗಿರುವ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಬಿರ್ಲಾ ಪ್ರತಿಷ್ಠಾನ ಮೊದಲಾದವುಗಳಲ್ಲಿನ ಕಾರ್ಯಕ್ರಮಗಳ ಪುನರಾವರ್ತನೆಯಾಗದಂತೆ ವಿಶಿಷ್ಟ ರೀತಿಯಲ್ಲಿ ಕುವೆಂಪು ಭಾಷಾಭಾರತಿ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತದೆ.

ರಾಷ್ಟ್ರೀಯ ಪ್ರಶಸ್ತಿ : ರಾಷ್ಟ್ರಮಟ್ಟದಲ್ಲಿ ಕುವೆಂಪು ಅವರ ಹೆಸರಿನಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಯೊಂದನ್ನು ಸ್ಥಾಪಿಸಿ, ನಾಡಿನ ಶ್ರೇಷ್ಠ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸಲು ಹಾಗೂ ಅಂತಹವರ ಪ್ರಮುಖ ಕೃತಿಗಳನ್ನು ಕನ್ನಡದಲ್ಲಿ ಹೊರತರಲು ಯೋಜನೆಗಳನ್ನು ರೂಪಿಸಲಾಗುತ್ತದೆ.

ತರುಣ ಪ್ರತಿಭೆಗಳಿಗೆ ಪ್ರೋತ್ಸಾಹ : ತರುಣ ಪ್ರತಿಭೆಗಳನ್ನು ಗುರುತಿಸಿ, ವಿವಿಧ ಭಾರತೀಯ ಭಾಷೆಗಳಲ್ಲಿ ವಿಶೇಷ ತರಬೇತಿ ಲಭ್ಯವಾಗುವಂತೆ ಮಾಡಿ, ಮುಂದೆ ಸಾಹಿತ್ಯಿಕ ಕೊಳು–ಕೊಡೆ ಕಾರ್ಯದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ವಿವಿಧ ರಾಜ್ಯಸರ್ಕಾರಗಳ ನೆರವಿನೊಂದಿಗೆ ಶಿಷ್ಯವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಯೋಜಿಸಲಾಗಿದೆ.

### (ಇ) ಪ್ರಕಟಣೆಗಳು :

'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಸ್ಥಾಪಿಸಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕಳೆದ ವರ್ಷವಷ್ಟೇ ೫೬ ಪುಸ್ತಕಗಳನ್ನು ಹೊರತಂದಿದ್ದು, ಕಳೆದ ೮ ತಿಂಗಳ ಅವಧಿಯಲ್ಲಿ ಸುಮಾರು ೧೦.೦೦ ಲಕ್ಷ ರೂಗಳನ್ನು ಮಾರಾಟದ ಮೂಲಕವೇ ಗಳಿಸಿಕೊಂಡಿದೆ. ಮುಂದೆ ಹಮ್ಮಿಕೊಳ್ಳಲಿರುವ ಹಾಗೂ ಮುನ್ನಡೆಯುತ್ತಿರುವ ಮಹತ್ವದ ಯೋಜನೆಗಳಲ್ಲಿ ಜೆ.ಡಿ.ಬರ್ನಾಲ್ ಅವರ 'ಸೈನ್ಸ್ ಇನ್ ಹಿಸ್ಟರಿ' ಗ್ರಂಥದ ನಾಲ್ಕು ಸಂಪುಟಗಳು, ವಿಲ್ ಡ್ಯೂರಾಂಟ್ ಅವರ 'ಸ್ಟೋರಿ ಆಫ್ ಸಿವಿಲಿಜೇಷನ್'ನ ಎಂಟು ಸಂಪುಟಗಳು (೪ರಿಂದ ೧೧), ವಿಜ್ಞಾನ–ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸುಮಾರು ೧೦೦ ಗ್ರಂಥಗಳು, ಸೋಮದೇವನ 'ಕಥಾಸರಿತ್ಸಾಗರ'ದ ಐದು ಸಂಪುಟಗಳು (೬ರಿಂದ ೧೦) – ಇವನ್ನು ಮುಖ್ಯವಾಗಿ ಹೆಸರಿಸಬಹುದಾಗಿದೆ. 'ಭಾರತೀಯ ವಿಜ್ಞಾನ ಸಂಸ್ಥೆ'ಯಂಥ ಅಂತರರಾಷ್ಟ್ರೀಯ ಖ್ಯಾತಿಯ ಸಂಶೋಧನ ಸಂಸ್ಥೆಯ ಸಹಕಾರದೊಂದಿಗೆ ಇಂಗ್ಲಿಷ್ ಮತ್ತು ಜಾಪನೀಸ್ ಭಾಷೆಗಳಲ್ಲಿ ಮಾತ್ರ ಲಭ್ಯವಿರುವ 'ಶಾಕ್ ವೇವ್ಸ್'ನಂಥ ಗ್ರಂಥವೂ ಕನ್ನಡದಲ್ಲಿ ಹೊರಬರಲಿದೆ. ಭಾರತೀಯ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾನಿಲಯ ಮಾಲಿಕೆಯ ಮೊದಲಕಂತಿನಲ್ಲಿ ಈ ಮಾಲಿಕೆಯ ೨೫ ಪುಸ್ತಕಗಳು ಸಂಯುಕ್ತ ಪ್ರಕಟಣೆಗಳಾಗಿ ಬರಲಿವೆ. 'ಅಂತರಾಷ್ಟ್ರೀಯ ಕನಕದಾಸ ಮಿಷನ್' ಸಂಸ್ಥೆಯ ನೆರವಿನೊಂದಿಗೆ ಕನಕದಾಸರ ಸಾಹಿತ್ಯದ ಅನುವಾದ ಕಾರ್ಯವೂ ಆರಂಭಗೊಳ್ಳಲಿದೆ. ಹೀಗಾಗಿ, ಕನ್ನಡ ಪ್ರಕಾಶನದ ಕ್ಷೇತ್ರದಲ್ಲಿಯೂ, ಮಹತ್ವದ ಹೆಜ್ಜೆಗುರುತುಗಳನ್ನು ಕುವೆಂಪು ಭಾಷಾ ಭಾರತಿ ಮೂಡಿಸುತ್ತ ಮುನ್ನಡೆಯಲಿದೆ.

ಖಾಸಗಿ ಪ್ರಕಾಶಕರ ಸಹಭಾಗಿತ್ವ : ಖಾಸಗಿ ಪ್ರಕಾಶಕರ ಸಹಾಯ–ಸಹಕಾರಗಳೊಂದಿಗೆ ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯಮಟ್ಟದಲ್ಲಿ ಪ್ರಚುರಗೊಳಿಸುವ

ಸಲುವಾಗಿ ರಾಜ್ಯ ಸರ್ಕಾರ ವಿಶೇಷ ಯೋಜನೆಯೊಂದಕ್ಕೆ ಅನುಮತಿ ನೀಡಿದೆ. ಅದರ ಮೇರೆಗೆ ಕನ್ನಡ ಸಾಹಿತ್ಯ ಕೃತಿಗಳನ್ನು ಇತರ ಭಾರತೀಯ ಮತ್ತು ವಿದೇಶೀ ಭಾಷೆಗಳಲ್ಲಿ ಹೊರತರುವ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಗೆ ಪ್ರಕಟಣೆಯ ಮೂಲಧನವನ್ನು ಮುಂಗಡವಾಗಿ ನೀಡಿ, ಮೂರು ವರ್ಷಗಳಲ್ಲಿ ಅವರು ಈ ಮುಂಗಡ ಹಣವನ್ನು ಹಿಂದಿರುಗಿಸುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಇತರ ಕ್ಷೇತ್ರಗಳಿಗೆ ಸರ್ಕಾರಗಳು ಅನೇಕ ರೀತಿಯಲ್ಲಿ ನೆರವಾಗುತ್ತಿದ್ದರೂ, ಪ್ರಕಟಣ ಕ್ಷೇತ್ರಕ್ಕೆ ಈ ಬಗೆಯ ನೆರವು ಇಲ್ಲದಿದ್ದರಿಂದ ಇದೊಂದು ಬಗೆಯ ವಿನೂತನ ಯೋಜನೆ ಆಗಿದೆ ಎಂದೂ, ಇಂಥ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿಯೂ ಅನೇಕ ಪ್ರಕಾಶನ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಈ ದಿಕ್ಕಿನಲ್ಲಿ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಹೀಗೆ ಪ್ರಕಟಣೆಯ ಕಾರ್ಯಕೈಗೊಳ್ಳುವ ಮೂಲಕ ಕನ್ನಡೇತರ ಭಾಷಾ–ಸಾಹಿತ್ಯವಲಯಗಳಲ್ಲಿ ಕನ್ನಡದ ಮೇರು ಕೃತಿಗಳು ಪರಿಚಯಗೊಳ್ಳಲೂ, ಜನಪ್ರಿಯವಾಗಲೂ ಸಹಾಯವಾಗುತ್ತದೆಂದು ನಂಬಲಾಗಿದೆ.

ಕರ್ನಾಟಕ ಸರ್ಕಾರದ ಉದಾರ ನೆರವಿನಿಂದ ಇಂಥ ಮಹತ್ವದ ಮತ್ತು ಬಹು ಆಯಾಮದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಭಾರತೀಯ ಮತ್ತು ವಿದೇಶಿ ಭಾಷೆಗಳ ನಡುವೆ ಒಂದು ಸಾಂಸ್ಕೃತಿಕ ಸೇತುವೆಯಾಗಿ, ಮಿನಿ ವಿಶ್ವವಿದ್ಯಾನಿಲಯವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಕಾರ್ಯನಿರ್ವಹಿಸಲಿದೆ. ನಾಡಿನ ಗಣ್ಯ ವಿದ್ವಾಂಸರ ಸಹಾಯ–ಸಹಕಾರಗಳನ್ನು ಪಡೆದುಕೊಂಡು ಈ ಕಾರ್ಯ ನಿರ್ವಹಿಸಲಾಗುತ್ತದೆ. ಹೀಗಾಗಿ, ಕುವೆಂಪು ಭಾಷಾ ಭಾರತಿ ಕನ್ನಡ ನಾಡಿನ ಇತಿಹಾಸದಲ್ಲಿ ಮಾತ್ರವಲ್ಲದೆ, ಭಾರತೀಯ ಸಾಹಿತ್ಯಿಕ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಸಂಸ್ಥೆಯಾಗಿ ರೂಪುಗೊಳ್ಳಲಿದೆಯೆಂದೂ, ಕನ್ನಡ ನಾಡಿನ ವಿದ್ವದ್‌ವಲಯಕ್ಕೆ, ಸಾಹಿತ್ಯ ಪ್ರೇಮಿಗಳಿಗೆ, ಕುವೆಂಪು ಅವರ ಅಭಿಮಾನಿಗಳಿಗೆ ಇದು ಸಂತಸದ ಸಂಗತಿ ಆಗಲಿದೆ ಎಂದೂ ನಂಬಿದ್ದೇವೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ.ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ



ಡಾ. ಎ.ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ ವಿದ್ಯಾ ಭವನದ ಬೆಂಗಳೂರು ಶಾಖೆಯ ಕಾರ್ಯಕಾರಿ ನಿರ್ದೇಶಕರಾಗಿರುವ ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ ಅವರಿಗೂ, ಕಾರ್ಯಕ್ರಮ ಮತ್ತು ಯೋಜನೆಗಳ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಭಾರತೀಯ ವಿದ್ಯಾಭವನದ ಕೇಂದ್ರ ಕಛೇರಿಯ ಪದಾಧಿಕಾರಿಗಳಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಅರುತ್ತರ ದಶಕದಲ್ಲಿ ಈ ಮಾಲೆಯನ್ನು ಆರಂಭಿಸಿದಾಹ ಇದನ್ನು 'ಒಂದು ರೂಪಾಯಿ ಮಾಲೆ' ಎಂದೇ ಕರೆಯಲಾಗಿತ್ತು. ಈಗಲೂ ಜನಸಾಮಾನ್ಯರಿಗೆ ಸುಲಭ ದರದಲ್ಲಿ ಈ ಪುಸ್ತಕಗಳನ್ನು ತಲುಪಿಸುವ ಉದ್ದೇಶದಿಂದ ಈ ಮಾಲೆಯ ಎಲ್ಲ ಪುಸ್ತಕಗಳಿಗೂ ಹತ್ತು ರೂಗಳ ಸಾಂಕೇತಿಕ ದರವನ್ನೇ ಗೊತ್ತು ಪಡಿಸಲಾಗಿದೆ. ಪ್ರಕಟಣೆಯ ವೆಚ್ಚದ ಒಂದು ಭಾಗವನ್ನು ವಿದ್ಯಾ ಭವನ ಭರಿಸಿರುವುದು ಇದಕ್ಕೆ ಕಾರಣವಾಗಿದೆ. ಈ ಸೌಹಾರ್ದತೆಗಾಗಿಯೂ ನಾವು ವಿದ್ಯಾಭವನದ ಎಲ್ಲ ಪ್ರಧಾಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಬಯಸುತ್ತೇವೆ.

ಈ ಮಾಲೆಯ ೨೫ ಪುಸ್ತಕಗಳು ಒಮ್ಮೆಗೇ ಹೊರ ಬರುತ್ತಿರುವುದಕ್ಕೆ ಬೆಂಗಳೂರು ಶಾಖೆಯ ತ್ರಿಮೂರ್ತಿಗಳ ಸಹಾಯ ಸಹಕಾರ ಮತ್ತು ಮಾರ್ಗದರ್ಶನಗಳು ಮಾತ್ರವಲ್ಲದೆ ಡಾ. ಎ.ವಿ. ನರಸಿಂಹಮೂರ್ತಿಯವರ ದಕ್ಷಸಂಪಾದಕತ್ವ ಮತ್ತು ಕಾರ್ಯಪಟುತ್ವಗಳು ಕಾರಣವಾಗಿವೆ. ಇದು ನಮಗೆ ಸಂತೋಷವನ್ನೂ ಹೆಮ್ಮೆಯನ್ನು ತಂದುಕೊಟ್ಟಿದೆ. ಇವನ್ನು ಸುಂದರವಾಗಿ ಹೊರತರುವಲ್ಲಿಯೂ ಅವರಿಂದ ನಮಗೆ ಸಲಹೆ ಸೂಚನೆಗಳು ದೊರತಿವೆ. ಈ ಎಲ್ಲ ಕೃಪೆಗಾಗಿ ನಾನು ಆ ಎಲ್ಲ ಮಹನೀಯರಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಈ ಪುಸ್ತಿಕೆಯ ಕನ್ನಡ ಆವೃತ್ತಿಯನ್ನು ಸಿದ್ಧಪಡಿಸಿಕೊಟ್ಟಿರುವ ಶ್ರೀ ಹುರಗಲವಾಡಿ ಲಕ್ಷ್ಮೀನರಸಿಂಹಶಾಸ್ತ್ರೀ ಅವರಿಗೂ, ಕರಡುಗಳ ಪರಿಶೀಲನೆಯಲ್ಲಿ ಸಹಕರಿಸಿರುವ ಶ್ರೀ ಬಾ.ವೇ. ಶ್ರೀಧರ ಅವರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ.ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ<br>ಬೆಂಗಳೂರು – ೫೬

**ಪ್ರಧಾನ್ ಗುರುದತ್ತ**<br>ಅಧ್ಯಕ್ಷ

## ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ.ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್.ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ಈ ಯೋಜನೆಯಲ್ಲಿ ಆಸಕ್ತಿವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಪ್ರಸ್ತುತ, 'ನಮ್ಮ ಧರ್ಮ' ಎಂಬ ಪುಸ್ತಕ ಖ್ಯಾತ ಲೇಖಕರಾದ ಶ್ರೀ ಹುರಗಲವಾಡಿ ಲಕ್ಷ್ಮೀನರಸಿಂಹಶಾಸ್ತ್ರೀ ಅವರ ಸಮರ್ಥ ಅನುವಾದ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

**ಎನ್. ರಾಮಾನುಜ**
ಅಧ್ಯಕ್ಷರು
ಭಾರತೀಯ ವಿದ್ಯಾಭವನ, ಕರ್ನಾಟಕ

**ಎ.ವಿ. ನರಸಿಂಹಮೂರ್ತಿ**
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ



## ಮೂಲ ಸಂಪಾದಕರ ಪ್ರಸ್ತಾವನೆ

ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳು ವಿಶೇಷ ಸಾಫಲ್ಯವನ್ನು ಕಂಡಿವೆ. ಈ ಹನ್ನೊಂದು ವರ್ಷಗಳಲ್ಲಿ ಸುಮಾರು ಒಂದೂಕಾಲು ಮಿಲಿಯನ್ ಪುಸ್ತಕಗಳು ಮಾರಾಟಗೊಂಡಿವೆ. ಆದರೂ ಭವನವು ಆಗಾಗ್ಗೆ ಪ್ರಕಾಶನಗೊಳಿಸುತ್ತಿರುವ ಕಡಿಮೆ ಬೆಲೆಯ ಕೆಲವು ಬಿಡಿ ಪುಸ್ತಕಗಳಿಗೆ ವಿಶೇಷ ಬೇಡಿಕೆ ಇದೆ. ಇದನ್ನು ಪೂರೈಸುವ ದೃಷ್ಟಿಯಿಂದ ಹೊಸ ಒಂದು ರೂಪಾಯಿ ಪುಸ್ತಕಗಳನ್ನು ಹಾಗೂ ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳನ್ನೂ ಒಟ್ಟೊಟ್ಟಿಗೆ ಪ್ರಕಟಿಸಲು ತೀರ್ಮಾನಿಸಿದೆ.

ಈ ಹೊಸ ಒಂದು ರೂಪಾಯಿ ಮಾಲಿಕೆಯ ಪುಸ್ತಕಗಳು, ಇತರ ಮಾಲಿಕೆಯ ಪುಸ್ತಕಗಳಂತೆ ಸಾಫಲ್ಯವನ್ನು ಪಡೆದು ಭಾರತೀಯ ಸಂಸ್ಕೃತಿಯ ಮೌಲ್ಯದಲ್ಲಿ ಆಸಕ್ತಿ ಇರುವವರಿಗೆ ಇಷ್ಟವಾಗಿ, ಹೆಚ್ಚಿನ ಓದುಗರನ್ನು ತಲಪುತ್ತದೆ ಎಂದು ನಾನು ಭಾವಿಸಿದ್ದೇನೆ.

**ಭಾರತೀಯ ವಿದ್ಯಾಭವನ**
ಚೌಪಾಟಿ ರೋಡ್, ಬೊಂಬಾಯಿ
ವಿಜಯ ದಶಮಿ, ಸೆಪ್ಟೆಂಬರ್ ೨೮,೧೯೬೩

**ಕೆ.ಎಂ. ಮುನ್ಷಿ**

## ಮೂಲ ಪ್ರಕಾಶಕರ ನುಡಿ

ಈ ಸಂಕಲನವು ಸಾಧ್ಯವಾಗಿರುವುದು ಈ ಕೆಳಗೆ ಹೆಸರಿಸಿರುವ ಪುಸ್ತಕಗಳಿಂದ: ಈ ಪುಸ್ತಕಗಳ ಮೂಲ ಪ್ರಕಾಶಕರು. ಆಯಾ ಪುಸ್ತಕಗಳಿಂದ ಉದ್ಧೃತ ಭಾಗಗಳನ್ನು ಇಲ್ಲಿ ಬಳಸಿಕೊಳ್ಳಲು ಅನುಮತಿ ನೀಡಿರುವುದಕ್ಕಾಗಿ, ಅವರಿಗೆ ಕೃತಜ್ಞತೆಯನ್ನು ಅರ್ಪಿಸುತ್ತೇವೆ.

೧. ದಿ ಸೇಂಟ್ ಆಫ್ ಶೃಂಗೇರಿ (ಶ್ರೀ ರಾಮಕೃಷ್ಣ ಪ್ರೆಸ್, ಮದುರೈ–೧)
೨. ಡೈಲಾಗ್ಸ್ ವಿತ್ ದಿ ಗುರು (ಚೇತನ ಲಿಮಿಟೆಡ್, ಬೊಂಬಾಯಿ)
೩. ದಿ ಕಾಲ್ ಆಫ್ ದಿ ಜಗದ್ಗುರು (ಮೆ. ಗಣೇಶ್ ಅಂಡ್ ಕಂಪೆನಿ, ಮದ್ರಾಸ್)
೪. ಸ್ಪಾರ್ಕ್ಸ್ ಫ್ರಂ ಎ ಡಿಲೈನ್ ಅನ್ವಿಲ್ (ಮೆ. ಗಣೇಶ್ ಅಂಡ್ ಕಂಪೆನಿ, ಮದ್ರಾಸ್)
೫. ಉಪದೇಶ ರತ್ನಮಾಲಾ (ತಮಿಳು) (ಶ್ರೀವಾಣೀ ವಿಲಾಸ ಪ್ರೆಸ್, ಶ್ರೀರಂಗಂ).

## ಪರಿವಿಡಿ


| | |
|---|---|
| ಮೊದಲ ಮಾತು | v |
| ಶುಭಾಕಾಂಕ್ಷೆ | vi |
| ಪ್ರಾಸ್ತಾವಿಕ ನುಡಿ | viii |
| ಪೀಠಿಕೆ | x |
| ಅರಿಕೆ | xvi |
| ಮೂಲ ಸಂಪಾದಕರ ಪ್ರಸ್ತಾವನೆ | xvii |
| ಮೂಲ ಪ್ರಕಾಶಕರ ನುಡಿ | xviii |
| ೧. ಅನುಷ್ಠಾನ ಧರ್ಮ | ೧ |
| ೨. ಇಚ್ಛಾನಿಗ್ರಹ | ೬ |
| ೩. ಮಾನವನ ಸಂಕೀರ್ಣ ಸ್ವಭಾವ | ೧೧ |
| ೪. ಮಾನವನ ಹೊಣೆಗಾರಿಕೆ | ೧೫ |
| ೫. ವಿಧಿನಿಯಮ ಮತ್ತು ಪುರುಷಪ್ರಯತ್ನ | ೧೯ |
| ೬. ಪರಮಮಿತ್ರ | ೨೩ |
| ೭. ಅಂತರಾತ್ಮ | ೨೮ |
| ೮. ಪ್ರಾಮಾಣಿಕವಾದ ಶ್ರದ್ಧೆ | ೩೩ |
| ೯. ಅಂತರ್ಗತ ಆನಂದ | ೩೬ |
| ೧೦. ಇಲ್ಲಿಯೇ ಈಗಲೇ ಯತ್ನಿಸಬೇಕು | ೪೦ |

**Blank Page**



# ನಮ್ಮ ಧರ್ಮ

# ೧. ಅನುಷ್ಠಾನ ಧರ್ಮ

ಹಿಂದೂ ಮತದ ತತ್ತ್ವಗಳು ಮತ್ತು ಹಿಂದೂ ಧರ್ಮವು ವಿಚಾರಪರರಾದ ಎಲ್ಲರನ್ನೂ ಆಕರ್ಷಿಸುತ್ತವೆ. 'ಹಿಂದೂ ಮತ'ವೆಂದು ಅದಕ್ಕೆ ಹೆಸರು ಕೊಡಲ್ಪಟ್ಟುದು ಇತ್ತೀಚೆಗೆ. ವಾಸ್ತವವಾಗಿ ಅತಿ ಪ್ರಾಚೀನ ಕಾಲದಿಂದಲೂ ಅದು 'ಸನಾತನ ಧರ್ಮ'ವೆಂದೂ 'ಶಾಶ್ವತ ಧರ್ಮ'ವೆಂದೂ ಪ್ರಖ್ಯಾತವಾಗಿದೆ. ಸನಾತನ ಧರ್ಮವು ಯಾವ ಗೊತ್ತಾದ, ನಿರ್ದಿಷ್ಟವಾದ ಕಾಲದಿಂದ ಆರಂಭವಾದದ್ದಲ್ಲ. ಅಥವಾ ತನ್ನ ಆರಂಭಕ್ಕೆ ಯಾವೊಬ್ಬ ವ್ಯಕ್ತಿಯನ್ನೂ ಅವಲಂಬಿಸಿಲ್ಲ. ಅದು ಅವಿನಾಶಿ ಮತ್ತು ವಿಶ್ವವ್ಯಾಪಿಯಾದುದು. ಅದಕ್ಕೆ ಯಾವ ದೇಶದ ಎಲ್ಲೆ ಕಟ್ಟುಗಳ ಪರಿಮಿತಿಯಿಲ್ಲ. ಇಲ್ಲಿಯವರೆಗೆ ಹುಟ್ಟಿರತಕ್ಕ ಇನ್ನು ಮುಂದೆಯೂ ಹುಟ್ಟಲಿರುವ ಎಲ್ಲರೂ ಅದಕ್ಕೆ–ಹಿಂದೂ ಧರ್ಮಕ್ಕೆ–ಸೇರಿದವರಾಗಿರುತ್ತಾರೆ. 'ಬೆಂಕಿಯು ಸುಡುತ್ತದೆ' ಎಂಬುದು, ಯಾರು ಒಪ್ಪಲಿ ಒಪ್ಪದಿರಲಿ, ಸಾರ್ವಕಾಲಿಕ ಸತ್ಯ. ಬೆಂಕಿಗೆ ಇರುವ ಗುಣಕ್ಕೆ ಆ ಗುಣವನ್ನು ಒಪ್ಪುವವರ ಸಾಕ್ಷಿಯ ಅಗತ್ಯವಿಲ್ಲ. ಹಾಗೆಯೇ, ಹಿಂದೂ ಧರ್ಮವೂ ಸಹ, ಯಾರು ಒಪ್ಪಲಿ ಬಿಡಲಿ ಅವಿನಾಶಿಯಾದ ವಿಶ್ವವ್ಯಾಪಿಯಾದ ಮತ್ತು ಚಿರಂತನವಾದ ಧರ್ಮವಾಗಿದೆ. ತನ್ನ ಮಹತ್ತನ್ನು ಕುರಿತು ಸಾರುವ ಯಾವೊಬ್ಬ ವ್ಯಕ್ತಿಯ ಹಿರಿಮೆಯನ್ನೂ, ಹಿಂದೂ ಧರ್ಮವು ತನ್ನ ಅಗ್ಗಳಿಕೆಗಾಗಿ ಅವಲಂಬಿಸದು. ಆ ಅಗ್ಗಳಿಕೆಯನ್ನು ಕುರಿತಾದ ನಮ್ಮ ಸಮರ್ಥನೆಯೂ ಅದಕ್ಕೆ ಬೇಕಾಗದು. ಅದು ಸಹಜವಾಗಿಯೇ ಶ್ರೇಷ್ಠವಾದುದು. ಇದು ನಮ್ಮ ಧರ್ಮದ ವೈಶಿಷ್ಟ್ಯ.

ನಿದರ್ಶನಕ್ಕಾಗಿ ಕ್ರೈಸ್ತಮತವನ್ನು ತೆಗೆದುಕೊಳ್ಳಿ. ಮುಕ್ತಿ ಪಡೆಯಲು ಕ್ರಿಸ್ತನ ವ್ಯಕ್ತಿತ್ವದಲ್ಲಿ ನಂಬಿಕೆಯಿಡಬೇಕಾದುದು,ಆ ಮತದ ಮುಖ್ಯ ತತ್ತ್ವಗಳಲ್ಲಿ ಒಂದು. ಹಾಗಾದರೆ ಆತನ–ಕ್ರಿಸ್ತನ–ಜನನಕ್ಕಿಂತ ಮೊದಲೇ ಹುಟ್ಟಿದವರ ಅಥವಾ ಆತನ ಸಮಕಾಲೀನರಾಗಿದ್ದೂ ಆತನ ಹೆಸರನ್ನೇ ಕೇಳರಿಯದವರ ಗತಿಯೇನು? ದೇವರು ಎಂದೋ ಒಂದು ದಿನ ಇದ್ದಕ್ಕಿದ್ದಂತೆಯೇ ಎಚ್ಚೆತ್ತು, ಜನರು ಮುಕ್ತಿಹೊಂದಲು, ನೂತನವಾದ ಆದರೆ ಕಡ್ಡಾಯವಾದ ಕಟ್ಟಳೆಯೊಂದನ್ನು ವಿಧಿಸಿ ಎಲ್ಲರೂ ಅದನ್ನೇ ಅನುಸರಿಸಬೇಕೆಂದು ಹೇಳಿದಲ್ಲಿ, ಅದು ತೀರ ಅನ್ಯಾಯವೆನಿಸುವುದು.

ಕ್ರಿಸ್ತನ ಜನನಕ್ಕೆ ಮುನ್ನ ಹುಟ್ಟಿದ್ದ ಅನೇಕಾನೇಕ ಜೀವಿಗಳೂ ಅಥವಾ ಆತನ ಹೆಸರನ್ನೇ ಕೇಳರಿಯದಂತಹ ದೇಶಗಳ ಜನವೂ ಸಹ ಮುಕ್ತಿಗೆ ಅರ್ಹರೆಂಬುದನ್ನು ದೇವರು ಮರೆತಿರಲಾರನು. ವಿವೇಚನಾಶಕ್ತಿಯುಳ್ಳ ಯಾವ ವ್ಯಕ್ತಿಯಾದರೂ ಒಪ್ಪಬಹುದಾದ ಒಂದೇ ಒಂದು ತರ್ಕಬದ್ಧ ಸಿದ್ಧಾಂತವೆಂದರೆ, ಭಗವಂತನು ಮೊಟ್ಟಮೊದಲನೆಯ ಮಾನವನನ್ನು ಸೃಜಿಸಿದಾಗಲೇ ಅಂತಹ ದಿನವೊಂದಿತ್ತೆಂದು ಊಹಿಸಿಕೊಂಡಲ್ಲಿ ಆ ಮೊದಲ ಮಾನವನೂ ಸಹ ನಿಸ್ಸಂದೇಹವಾಗಿ ಮುಕ್ತಿಗೆ ಅರ್ಹನಾಗಿದ್ದುದರಿಂದ, ಆತನ ಮುಕ್ತಿಗೂ ಮಾರ್ಗವನ್ನು ನಿರ್ಧರಿಸಿಯೇ ಇದ್ದನು. ಸೃಷ್ಟಿಯಲ್ಲಿ ಮೊಟ್ಟಮೊದಲ ಜೀವಿಯ ನಿರ್ಮಾಣವಾದ ನಂತರ, ಇತ್ತೀಚೆಗೆ ಆರಂಭವಾದ ಯಾವ ಮತವೇ ಆಗಲಿ – ಭಗವಂತನೊಬ್ಬನ ಹೊರತಾಗಿ – ಬೇರೆ ಯಾವ ಉಪದೇಶಕನಿಂದ ಆರಂಭಿಸಲ್ಪಟ್ಟಿದ್ದುದಾದರೂ, ಆ ಮತವು ಅಪೂರ್ಣವಾಗದಿರಲು ಸಾಧ್ಯವೇ ಇಲ್ಲ.

ಅಷ್ಟೇ ಅಲ್ಲದೆ ಯಾವುದಾದರೊಂದು ವಿಶಿಷ್ಟ ಮಾರ್ಗವು, ಮುಕ್ತಿಗೆ ಸಾಧನವಾಗಿದೆಯೆಂದು ನಂಬಲು, ಆ ಮಾರ್ಗದಲ್ಲಿ ಪರಿಷ್ಕ್ರಮಿಸಿ ಸಿದ್ಧಿ ಪಡೆದವರಿಂದ ಬೋಧಿಸಲ್ಪಟ್ಟಿರಬೇಕು, ಇಲ್ಲದಿದ್ದಲ್ಲಿ, ಆ ಮಾರ್ಗವೇ ಮುಕ್ತಿಪಥವೆಂದು ನಂಬುವುದು ಹೇಗೆ ? ಇಲ್ಲಿ ಪುನಃ ಇನ್ನೊಂದು ಪ್ರಶ್ನೆಯೇಳುತ್ತದೆ. ಯಶಸ್ವಿಯಾಗಿ ತಾನು ಸಾಧನೆ ನಡೆಸಿದ ಆ ಮಾರ್ಗವನ್ನು ಆ ಬೋಧಕನು ಹೇಗೆ ಅರಿತನು? ತನ್ನ ಗುರುವಿನಿಂದ ಅರಿತಿರಬೇಕು, ಆ ಗುರುವು ತನ್ನ ಗುರುವಿನಿಂದ; ಹೀಗೆಯೇ ವಿಚಾರ ಮಾಡಿದಲ್ಲಿ, ಮೊಟ್ಟಮೊದಲನೆಯ ಉಪದೇಶಕನು ಯಾರಿಂದಲೂ ಕಲಿಯಲ್ಪಡಬೇಕಾಗಿರದ ಸರ್ವಜ್ಞನಾಗಿರಬೇಕೆಂದು ಒಪ್ಪಿಕೊಳ್ಳುವುದು ಸಮರ್ಪಕ ಊಹೆ. ಅಂತಹ ಉಪದೇಶಕನು ಭಗವಂತನೇ ಆಗಿರಬೇಕು.

ಎಲ್ಲ ಪ್ರಯತ್ನಗಳೂ ಸುಖವನ್ನು ಗಳಿಸುವ ಅಥವಾ ದುಃಖ ನಿವಾರಣೆ ಮಾಡಿಕೊಳ್ಳುವ ಉದ್ದೇಶವನ್ನೇ ಹೊಂದಿವೆಯೆಂಬುದು ಸ್ವತಃ ಸಿದ್ಧವಾದ ಮಾತು. ಆದರೆ ನಮ್ಮ ಪ್ರಯತ್ನಗಳೆಲ್ಲವೂ ಸುಖಸಂತೋಷವನ್ನೇ ಕೊಡುತ್ತವೆ ಎಂದು ಹೇಳಲಾಗದು. ಆದ್ದರಿಂದ ನಮ್ಮ ಯತ್ನ ನಿಷ್ಫಲವಾಗಲು ನಮ್ಮ ಪ್ರಯತ್ನದಲ್ಲೇ ಏನೋ ದೋಷವಿರಬೇಕು. ನಾವು ಅನುಸರಿಸುತ್ತಿರುವ ಮಾರ್ಗ ಸರಿಯಿಲ್ಲ ಅಥವಾ ನಾವು ಆ ಮಾರ್ಗವನ್ನು ಸರಿಯಾಗಿ ಅನುಸರಿಸುತ್ತಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ನಮ್ಮ ಸ್ವಬುದ್ಧಿಯನ್ನು ಉಪಯೋಗಿಸಿ ಸಮಂಜಸವಾದ ಮಾರ್ಗವನ್ನು ಹುಡುಕಿಕೊಂಡು ಅದರಲ್ಲಿ ಸರಿಯಾಗಿ ನಡೆದಲ್ಲಿ ನಾವೇಕೆ ಅಸುಖಿಗಳಾಗಿರಬೇಕು? ಸರಿಯಾದ ಮಾರ್ಗವನ್ನು ತಿಳಿದೂ ಸಹ, ಅದರಲ್ಲಿ



ಸರಿಯಾಗಿ ನಡೆದೂ ಸಹ, ಅನೇಕ ಪ್ರಯತ್ನಗಳಲ್ಲಿ ನಾವು ಸೋಲುತ್ತೇವೆ. ಸರಿಯಾದ ಪ್ರಯತ್ನವು ಫಲಕಾರಿಯಾಗಬೇಕಾದರೆ, ಎದುರಾಗಬಹುದಾದ ವಿಘ್ನಗಳ ಬಗ್ಗೆ ನಾವು ತಿಳುವಳಿಕೆಯನ್ನು ಹೊಂದಿದ್ದು, ಅವುಗಳ ನಿವಾರಣೆಗೇ ಆಗಲಿ ಅಥವಾ ಅವುಗಳಿಂದ ತಪ್ಪಿಸಿಕೊಳ್ಳುವುದಕ್ಕಾಗಲಿ ಉಪಾಯಗಳನ್ನೂ ಅರಿತಿರಬೇಕೆಂದು ಇದರಿಂದ ವ್ಯಕ್ತವಾಗುತ್ತದೆ.

ನಮ್ಮಲ್ಲಿರದ ಯುವುದೋ ಹೊಸದೊಂದನ್ನು ಪಡೆಯಬೇಕೆಂದು ನಡೆಸುವ ಎಲ್ಲ ಪ್ರಯತ್ನಗಳ ಫಲವೂ ಶಾಶ್ವತವಾಗಿರದು. ಕಾರಣ, ಆ ಫಲವೂ ಸಹ ನಿರ್ದಿಷ್ಟ ಕರ್ಮದ ಪರಿಣಾಮವಾದ್ದರಿಂದ ಅದು ತಾತ್ಕಾಲಿಕವಾಗಿರುತ್ತದೆ. ಹುಟ್ಟಿದುದೆಲ್ಲಾ ಅಳಿಯಬೇಕೆಂಬುದು, ಎದುರಿಲ್ಲದಂತಹ ಸತ್ಯ. ಹಲವು ಬಗೆಯ ಸುಖಸಂತೋಷಗಳು ಉಳಿದ ಬಗೆಗಳಿಗಿಂತ ಹೆಚ್ಚು ಕಾಲವಿರಬಹುದು; ಆದರೆ ಅವುಗಳಿಗೆ ಹಿನ್ನೆಲೆಯಾದ ಕರ್ಮದ ಫಲವು ತೀರಿದಾಗ ಆ ಸುಖಸಂತೋಷಗಳೂ ಮಾಯವಾಗುವುವು. ಎಲ್ಲ ಕರ್ಮಗಳ ಫಲವೂ ಕ್ಷಣಭಂಗುರವಾದುದು. ನಮ್ಮ ಅದೃಷ್ಟದಿಂದ, ವೇದವು ಕ್ಷಣಭಂಗುರವಲ್ಲದ ಶಾಶ್ವತ ಸುಖದ ಆಶ್ವಾಸನೆಯನ್ನೀಯುತ್ತಿದೆ. ಇದರಿಂದ ಸ್ಪಷ್ಟವಾಗುವುದೇನೆಂದರೆ ಆ ಸುಖವು ಯಾವುದಾದರೂ ಪ್ರಯತ್ನದಿಂದ ಬರತಕ್ಕ ಫಲವಲ್ಲ. ಅದು ಈಗಲೂ ಇದೆ. ನಮ್ಮ ಗಮನವೆಲ್ಲಾ ಬಾಹ್ಯವಸ್ತುಗಳ ಆಕರ್ಷಣೆಯಿಂದ ಎಳೆಯಲ್ಪಡುತ್ತಿರುವುದರಿಂದ, ಆ ಸುಖವು ಗುರುತಿಸಲ್ಪಡದೇ ಇದೆ, ಅವ್ಯಕ್ತವಾಗಿದೆ. ಬಾಹ್ಯಾಕರ್ಷಣೆಯಿಂದ ಕಡಿದುಕೊಂಡಾಗ, ಆ ಸುಖವನ್ನು ನಾವು ಗುರುತಿಸಬಲ್ಲೆವು ಮತ್ತು ಅನುಭವಿಸಬಲ್ಲೆವು. ಅಂತಃಶುದ್ಧಿ ದೊರಕುವವರೆಗೆ ಬಾಹ್ಯ ವಿಷಯಗಳ ಆಕರ್ಷಣೆಯಿಂದ ತಪ್ಪಿಸಿಕೊಳ್ಳುವುದು ಅಸಾಧ್ಯ. ಅಂತಃಶುದ್ಧಿ ದೊರಕಬೇಕಾದರೆ, ಮನಸ್ಸಿನ ಕಶ್ಮಲಗಳೆಲ್ಲಾ ನಿವಾರಣೆಯಾಗಬೇಕು. ಹೊಲದಲ್ಲಿ ಒಳ್ಳೆಯ ಫಸಲು ಬೇಕಾದರೆ, ಮೊದಲು ಕಳೆಯನ್ನು ಕೀಳಬೇಕು, ಒಳ್ಳೆಯ ಗೊಬ್ಬರವನ್ನು ಹಾಕಬೇಕು, ಬಲಿತ ಬೀಜವನ್ನು ಬಿತ್ತಬೇಕು. ಫಸಲು ಕೊಯಿಲಿಗೆ ಬರುವವರೆಗೆ, ಅದನ್ನು ಬಹಳ ಎಚ್ಚರದಿಂದ ಕಾಯುತ್ತಿರಬೇಕು. ಹಾಗೆಯೇ ಅಂತಃಶುದ್ಧಿಯನ್ನು ಗಳಿಸಬೇಕಾದರೆ ಅ ಧರ್ಮ ಅಥವಾ ಕೆಟ್ಟ ನಡತೆಯೆಂಬ ಕಳೆಯನ್ನು ಪೂರ ಕಿತ್ತೆಸೆಯಬೇಕು.ಧರ್ಮ ಅಥವಾ ಸನ್ನಡತೆಯೆಂಬ ಗೊಬ್ಬರವನ್ನು ಹಾಕಬೇಕು. ಧರ್ಮಾಧರ್ಮಗಳನ್ನು ಕುರಿತ ವಿವೇಚನೆಯು ನಮ್ಮ ಬುದ್ಧಿಯ ವ್ಯಾಪ್ತಿಗೆ ಮೀರಿದ್ದು. ಆದ್ದರಿಂದ ಅವುಗಳನ್ನು ಅರಿತುಕೊಳ್ಳಲು ಶಾಸ್ತ್ರವನ್ನವಲಂಬಿಸಬೇಕು. ಯಾರಿಗೆ ಯಾವ ನೀತಿಯು ಧರ್ಮವೋ ಮತ್ತೊಬ್ಬರಿಗೆ ಅದೇ ಅಧರ್ಮವಾಗುತ್ತದೆ ಎಂಬುದನ್ನರಿಯಲೂ ನಾವು

ಶಾಸ್ತ್ರವನ್ನೇ ಮೊರೆ ಹೋಗಬೇಕು; ಎಂದರೆ ಸ್ವಧರ್ಮವು ಯಾವುದು ಎಂಬುದನ್ನು ಅರಿತುಕೊಳ್ಳಬೇಕು.

ಒಂದು ಸಂಸಾರದಲ್ಲಿರತಕ್ಕ ವ್ಯಕ್ತಿಗಳೆಲ್ಲರೂ, ಮನೆಯ ಯಜಮಾನನ ಆದೇಶದಂತೆ ನಡೆದುಕೊಂಡು ತಮ್ಮ ತಮ್ಮ ಕೆಲಸಗಳನ್ನು ಶ್ರದ್ಧೆಯಿಂದ ಸಮರ್ಪಕವಾಗಿ ನಿರ್ವಹಿಸಿದಲ್ಲಿ ಆ ಸಂಸಾರ ಆದರ್ಶ ಸಂಸಾರವೆನಿಸುತ್ತದೆ. ತದ್ವಿರುದ್ಧವಾಗಿ ಪ್ರತಿಯೊಬ್ಬರೂ ತಮ್ಮ ತಮ್ಮ ಇಚ್ಛೆಬಂದಂತೆ ನಡೆದರೆ ಆ ಸಂಸಾರ ಶೀಘ್ರವಾಗಿ ನಾಶಹೊಂದುತ್ತದೆ. ಯಾವ ದೇಶದಲ್ಲಿ ಎಲ್ಲ ಪ್ರಜೆಗಳೂ ಎಲ್ಲ ಕೆಲಸಗಳನ್ನೂ ವಿವೇಚನಾರಹಿತವಾಗಿ ತಮಗೆ ತೋಚಿದಂತೆ ಮಾಡುತ್ತಾರೆಯೋ ಅಂತಹ ದೇಶ 'ರಾಜ್ಯ' ಎನ್ನಿಸದು. ಅದು ಅರಾಜಕವೆನಿಸಿಕೊಳ್ಳುತ್ತದೆ. ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರನೂ ತನ್ನ ತನ್ನ ಅಧಿಕಾರವ್ಯಾಪ್ತಿಗೆ ಒಳಪಟ್ಟಷ್ಟು ಕೆಲಸವನ್ನು ಶ್ರದ್ಧೆಯಿಂದ ಯಾವ ಗೋಜು ಗೊಂದಲವೂ ಇಲ್ಲದೆ ನಡೆಸುತ್ತಾನೆಯೋ,ಆ ರಾಜ್ಯದಲ್ಲಿ ಮಾತ್ರ ಆಡಳಿತ ಸಮರ್ಪಕವಾಗಿ ನಡೆಯುತ್ತದೆ. ಹಾಗೆಯೇ, ಭಗವಂತನು ಸಂಸಾರದ ಯಜಮಾನನಂತೆ ಅಥವಾ ಸೃಷ್ಟಿ ಚಕ್ರಾಧಿಪತ್ಯದ ಒಡೆಯನಂತೆ ಇದ್ದಾನೆ. ವಿಶ್ವದ ಸಮರ್ಪಕ ವ್ಯವಸ್ಥೆಗಾಗಿ (ಧರ್ಮ)ಶಾಸ್ತ್ರವನ್ನು ಬೋಧಿಸಿದ್ದಾನೆ. ಆ ರಾಜ್ಯದ ಪ್ರಜೆಗಳಾದ ನಾವು ಆ (ಧರ್ಮ)ಶಾಸ್ತ್ರದಂತೆ ನಡೆಯಬೇಕಾದುದು ನಮ್ಮ ಕರ್ತವ್ಯ, ಧರ್ಮ.

ವಿಶ್ವದಲ್ಲಿ ಧರ್ಮವನ್ನು ಕುರಿತು ವಿವರಿಸುವಂತಹ ಆದಿಪ್ರಮಾಣ ಅಥವಾ ಆಧಾರವು ವೇದ. ಅದು ಭಗವಂತನ ವಾಣಿಯೆಂದೂ–ಆದೇಶವೆಂದೂ–ಭಾವಿಸಲ್ಪಟ್ಟಿದೆ. "ಒಂದು ಮಾತಿನ ಮೌಲ್ಯವು ಆ ಮಾತನ್ನಾಡುವ ವ್ಯಕ್ತಿಯ ಚಾರಿತ್ರ್ಯವನ್ನವಲಂಬಿಸಿರುತ್ತದೆ" ಎಂಬ ಸಾಧಾರಣ ಪರೀಕ್ಷೆಯನ್ನು ಒಡ್ಡಿದರೆ, ಭಗವಂತನ ಆದೇಶವನ್ನು ಹುಸಿಯೆಂದೂ ಸರಿಯಲ್ಲವೆಂದೂ ಹೇಳುವುದು ಹೇಗೆ? ಆಗ ವೇದದ ಪ್ರಮಾಣವು ಭಗವಂತನನ್ನು ಅವಲಂಬಿಸಿದೆ ಎಂದಾಗುತ್ತದೆ. ಭಗವಂತನು ಯಾವುದೋ ನಿರ್ದಿಷ್ಟ ಕಾಲದಲ್ಲಿ ವೇದವನ್ನು ಘೋಷಿಸಿರಬಹುದೆಂದೂ ಧ್ವನಿತವಾಗುತ್ತದೆ. ಇದರಿಂದ ವೇದಗಳ 'ಅವಿನಾಶಿ'ತ್ವವು ಕುಂಠಿತವಾಗುತ್ತದೆಂದು ಹಲವರ ಭೀತಿ. ವೇದಪ್ರಮಾಣವು ಅದರಲ್ಲೇ ಇದೆ. ಅದು ಯಾರನ್ನೂ–ದೇವರನ್ನೂ ಸಹ–ಅವಲಂಬಿಸಿಲ್ಲ ಎಂದು ಅವರ ಮತ. ಅವರು ಇನ್ನೂ ಮುಂದುವರಿದು, ವೇದವು ಶಾಶ್ವತವಾದುದು. ಯಾರಿಂದಲೂ ಸೃಜಿಸಲ್ಪಡಲಿಲ್ಲ. ಭಗವಂತನು ವೇದದ ಪ್ರಸಾರಕ ಮಾತ್ರ ಎಂದೂ ನಂಬುತ್ತಾರೆ. ಇದರರ್ಥ ವೇದವು ಅನಾದಿ, ಅವಿನಾಶಿ ಎಂದು ಆಗುತ್ತದೆ.



ಸನಾತನ ಧರ್ಮವು ವಿಶ್ವವ್ಯಾಪಿಯಾಗಿದ್ದ ಮಾತ್ರಕ್ಕೆ ಅದರ ಉಪದೇಶಗಳು ಎಲ್ಲರಿಗೂ ಸಮಾನವಾಗಿವೆಯೆಂದಲ್ಲ. ಮಾನವನ ಸ್ವಭಾವ, ಶಿಕ್ಷಣ, ಸನ್ನಿವೇಶ, ಸಂಸ್ಕಾರ ಮತ್ತು ಇತರ ವೈವಿಧ್ಯಮಯ ಕಾರಣಗಳಿಂದ, ಎಲ್ಲರಿಗೂ ಅನ್ವಯವಾಗಬಹುದಾದ ಒಂದೇ ಅನುಷ್ಠಾನಮಾರ್ಗವನ್ನು ವಿಧಿಸುವುದು ಅಸಾಧ್ಯ. ಬಾಯಾರಿಕೆಯಿಂದ ಪರಿತಪಿಸುತ್ತಿರುವ ಅರೋಗ ದೃಢಕಾಯನಾದ ಮನುಷ್ಯನಿಗೆ ಒಂದು ಲೋಟ ತಣ್ಣನೆಯ ನೀರು ಆಪ್ಯಾಯಮಾನವುಂಟು ಮಾಡುತ್ತದೆ. ಅದೇ ನೀರು ಜ್ವರದಿಂದ ಪರಿತಪಿಸುತ್ತಿರುವವನಿಗೆ ಅಪಾಯವನ್ನುಂಟುಮಾಡುತ್ತದೆ. ಒಬ್ಬನಿಗೆ ತಣ್ಣೀರನ್ನು ಕುಡಿಯಬಹುದೆಂದು ಹೇಳಿದ ವೈದ್ಯನು ಇನ್ನೊಬ್ಬನಿಗೆ ಕುಡಿಯಬಾರದೆಂದು ನಿಷೇಧಿಸಿದರೆ, ವೈದ್ಯನನ್ನು ಪಕ್ಷಪಾತಿ ಎನ್ನಲಾಗುವುದಿಲ್ಲ ಅಥವಾ ಒಬ್ಬನಿಗೆ ಹಿತವುಂಟುಮಾಡಿ, ಇನ್ನೊಬ್ಬನಿಗೆ ಅಪಾಯವುಂಟುಮಾಡಿತೆಂದು ನೀರನ್ನು ದೂಷಿಸಲಾಗುವುದಿಲ್ಲ. ನಮ್ಮ ಮತವು ಎಲ್ಲರಿಗೂ ಅನ್ವಯವಾಗುವ ಸಾಮಾನ್ಯ ಧರ್ಮವನ್ನು ವಿಧಿಸುತ್ತದೆ ಮತ್ತು ಪವಿತ್ರ ಭಾರತ ಭೂಮಿಯಲ್ಲಿ ಜನಿಸಿ, ವರ್ಣಾಶ್ರಮಗಳ ಕಟ್ಟುಪಾಡಿಗೆ ಒಳಪಟ್ಟವರಿಗಾಗಿ ವಿಶೇಷ ಧರ್ಮವನ್ನೂ ಬೋಧಿಸುತ್ತದೆ. ಇಂತಹ ನಿರ್ದಿಷ್ಟ ಮಾರ್ಗವೇ ಶ್ರೇಯಸ್ಕರವೆಂದು ಬೋಧಿಸುವಂತಹ ಶಾಸ್ತ್ರವೇ ನಿಜವಾದ ಮಾರ್ಗದರ್ಶಿಯೆಂದು ನಾವು ಒಪ್ಪಿದಲ್ಲಿ ಅದೇ ಶಾಸ್ತ್ರವು – ಆ ಮಾರ್ಗ ಯಾರ್ಯಾರಿಗೆ ಮಾತ್ರ ಶ್ರೇಯಸ್ಕರವೆಂದು ಘೋಷಿಸಿದಾಗ ಅದನ್ನು ಹುಸಿಯೆಂದು ತಳ್ಳಿಹಾಕಲಾಗುವುದಿಲ್ಲ. ನಮ್ಮ ಧರ್ಮವೇ ಆಗಲಿ ಅಥವಾ ಮಾನವ ಚಾರಿತ್ರ್ಯವನ್ನು ತಿದ್ದುವ ಅಥವಾ ಅದೇ ಉದ್ದೇಶವನ್ನು ಹೊಂದಿರುವ ಬೇರೆ ಯಾವ ನಿಯಮವೇ ಆಗಲಿ, ಅದು ವ್ಯಕ್ತಿಯ ಅಧಿಕಾರ, ಅರ್ಹತೆ ಅಥವಾ ಯೋಗ್ಯತೆಯನ್ನೇ ಆಧಾರವಾಗಿಟ್ಟುಕೊಳ್ಳಬೇಕು.

* * * *

# ೨. ಇಚ್ಛಾನಿಗ್ರಹ

ಯಾವ ವಸ್ತುವಿಗಾಗಿ ಆಸೆಯಿಂದ ನಾವು ತವಕಿಸುವೆವೋ ಅದು ದೊರೆತಾಗ ಅಥವಾ ಯಾವುದನ್ನು ಅಸಹನೆಯಿಂದ ಅನುಭವಿಸುತ್ತಿರುವೆವೋ ಅದರಿಂದ ಬಿಡುಗಡೆ ದೊರಕಿದಾಗ ನಾವು ಹರ್ಷಪಡುತ್ತೇವೆ. ಆಸೆಯಿಂದ ತವಕಿಸುತ್ತಿದ್ದಾಗ ಅಥವಾ ಅಸಹನೆಯಿಂದ ಒದ್ದಾಡುತ್ತಿದ್ದಾಗ ನಮ್ಮ ಮನಸ್ಸು ತಳಮಳಗೊಳ್ಳುತ್ತದೆ. ಆ ತಳಮಳವನ್ನು ಮೇಲೆ ಹೇಳಿದ ರೀತಿಯಲ್ಲಿ ಕೊನೆಗೊಳಿಸಿದಾಗ, ಒಂದು ಬಗೆಯ ವಿಶ್ರಾಂತಿ, ಶಾಂತಿ, ತೃಪ್ತಿ, ಸಮಾಧಾನಗಳ ಅನುಭವವಾಗುತ್ತದೆ. ದುರದೃಷ್ಟದಿಂದ ತಮ್ಮ ಆಕರ್ಷಣೆ ಅಥವಾ ವಿಕರ್ಷಣೆಯಿಂದ ನಮ್ಮನ್ನು ಅಸ್ವಸ್ಥಗೊಳಿಸುವಂತಹ ವಸ್ತುಗಳು ಜಗತ್ತಿನಲ್ಲಿ ಹೇರಳವಾಗಿವೆ. ನಮ್ಮ ಮನಸ್ಸನ್ನಾಕರ್ಷಿಸುವ ಎಲ್ಲಾ ವಸ್ತುಗಳನ್ನೂ ಸಂಪಾದಿಸುವುದರಿಂದಾಗಲಿ, ಬೇಡವಾದ ಎಲ್ಲವನ್ನೂ ತ್ಯಾಜ್ಯ ಮಾಡುವುದರಿಂದಾಗಲಿ ಮನಸ್ಸಿನ ಅಸ್ವಸ್ಥತೆಯನ್ನು–ಅಶಾಂತಿಯನ್ನು ತೊಲಗಿಸಲು ಸಾಧ್ಯವಿಲ್ಲ ಮತ್ತು ನಮ್ಮ ಇಚ್ಛೆ ಬಂದಂತೆ ಬೇಕಾದುದನ್ನು ಪಡೆಯುವುದೂ ಬೇಡವಾದದ್ದನ್ನು ತೊಲಗಿಸುವುದೂ ನಮ್ಮ ವಶದಲ್ಲಿಲ್ಲ. ನಮ್ಮ ಸುಖಸಂತೋಷಗಳು ಭಾಗ್ಯವಸ್ತುಗಳನ್ನೇ ಅವಲಂಬಿಸಿದ್ದಲ್ಲಿ, ನಾವು ನಿಜವಾಗಿಯೂ ಸಂತೋಷಚಿತ್ತರಾಗಲು ಎಂದಿಗೂ ಸಾಧ್ಯವೇ ಇಲ್ಲ.

ಒಬ್ಬ ಮನುಷ್ಯನು ಆರೋಗ್ಯವಾಗಿದ್ದಾನೆ ಎಂದು ಹೇಳಿದರೆ, ಆತನು ಆ ಮೊದಲು ಕಾಯಿಲೆಯಿಂದ ನರಳುತ್ತಿದ್ದನೆಂದೂ ನಂತರ ಗುಣಹೊಂದಿದನೆಂದೂ ಊಹಿಸುವುದು ಅನಾವಶ್ಯಕ. ರೋಗಮುಕ್ತನಾಗಿರುವುದು ಆರೋಗ್ಯವಂತನ ಲಕ್ಷಣವೇ ಹೊರತು, ಮೊದಲು ರೋಗವನ್ನನುಭವಿಸಿ ನಂತರ ಗುಣಹೊಂದಿರುವುದೇನಲ್ಲ. ಹಾಗೆಯೇ ಹರ್ಷವು ದುಃಖದಿಂದ ದೊರೆತ ಬಿಡುಗಡೆ. ಹರ್ಷಕ್ಕೆ ಮುನ್ನ ದುಃಖ ಒದಗಿಯೇ ಇರಬೇಕೆಂಬ ನಿಯಮವೇನೂ ಇಲ್ಲ. ರೋಗಸಂಪರ್ಕವೇ ಇರದ ಆರೋಗ್ಯವು ರೋಗದ ನಂತರ ಸಂಭವಿಸಿದ ಆರೋಗ್ಯಕ್ಕಿಂತ ಹೆಚ್ಚು ಸ್ವಾಭಾವಿಕವೂ, ನೈಜವೂ ಮತ್ತು ಸ್ಥಿರವೂ ಆದುದು. ಹಾಗೆಯೇ ಚಿತ್ತಕ್ಷೋಭೆಯೇ ಇಲ್ಲದೆ ದೊರಕುವ ಸಮಾಧಾನವು ಚಿತ್ತಕ್ಷೋಭೆಯ



ಅನಂತರ ದೊರಕುವ ಶಾಂತಿ ಸಮಾಧಾನಗಳಿಗಿಂತ ಹೆಚ್ಚು ನೈಸರ್ಗಿಕವೂ ಮತ್ತು ಅನುಭವಯೋಗ್ಯವೂ ಆಗಿರುತ್ತದೆ.

ಮನಶ್ಶಾಂತಿಯನ್ನು ಕದಡುವಂತಹ ಯಾವ ವಿಷಯಕ್ಕೂ ವಶನಾಗದಿದ್ದಲ್ಲಿ ಮಾನವನು ಸುಖವನ್ನು ಹೊಂದಬಲ್ಲನು ಮತ್ತು ಸುಖವಾಗಿರಬಲ್ಲನು. ನಮ್ಮ ಮನಸ್ಸನ್ನು ಆಕರ್ಷಿಸುವ ಅಥವಾ ಕ್ಷೋಭೆಗೊಳಿಸುವ ಯಾವ ವಸ್ತುವನ್ನೇ ಆಗಲಿ, ಸೃಷ್ಟಿಮಾಡಲು, ತಿದ್ದಲು, ನಿಯಂತ್ರಿಸಲು ಅಥವಾ ನಾಶಗೊಳಿಸಲು ನಮ್ಮಿಂದ ಸಾಧ್ಯವೇ ಇಲ್ಲ. ಆದರೆ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು ಯಾವ ವಸ್ತುವಿನಿಂದಲೂ ಕ್ಷೋಭೆಗೊಳ್ಳದಂತೆ ಇರಬಹುದು. ನಮ್ಮ ಪೂರ್ವಜರು ಸುಖವಾಗಿರುವುದಕ್ಕೆ ಕಾರಣ ಸುಖೋಪಭೋಗ್ಯ ವಸ್ತುಗಳನ್ನು ಯಥೇಚ್ಛವಾಗಿ ಹೊಂದಿದ್ದುದಾಗಲಿ ಅಥವಾ ಅವರಿಗೆ ದುಃಖ ತರುವಂತಹ ಸಂದರ್ಭಗಳು ಕಡಿಮೆಯಿದ್ದುದಾಗಲಿ ಅಲ್ಲ. ಪ್ರಲೋಭನೆಗಳ ಈ ಜಗತ್ತಿನಲ್ಲಿದ್ದೂ ಸಹ ನಮ್ಮ ಮನಸ್ಸನ್ನು ಸಮಾಧಾನ ಸ್ಥಿತಿಯಲ್ಲಿ ಇಟ್ಟಿದ್ದುದರಿಂದ ಅವರಿಗೆ ವಿರಾಮ, ಅವಕಾಶ, ಶಾಂತಿ, ಹರ್ಷಗಳು ದೊರಕಿದ್ದವು. ಅವರು ಸುಖಶಾಂತಿಗಾಗಿ ಬಾಹ್ಯೋಪಕರಣಗಳನ್ನು ಅವಲಂಬಿಸಿರಲೂ ಇಲ್ಲ. ಹಾಗೆಯೇ ಬಾಹ್ಯವಸ್ತುಗಳು ನಮಗೆ ಅಸುಖವನ್ನುಂಟುಮಾಡಲು ಅವಕಾಶ ಕೊಡುತ್ತಲೂ ಇರಲಿಲ್ಲ. ನಮಗೆ ಸುಖ ಶಾಂತಿ ಬೇಕಾಗಿದ್ದಲ್ಲಿ ನಾವೂ ಸಹ ಅದೇ ರೀತಿಯ ಮನೋವೃತ್ತಿಯನ್ನು ಬೆಳೆಸಿಕೊಳ್ಳಬೇಕು.

ಲೌಕಿಕವಾಗಿ ಸುಖೋಪಭೋಗಗಳನ್ನು ಮತ್ತು ಅವುಗಳನ್ನು ಗಳಿಸುವ ವಿಧಾನವನ್ನೂ ಕುರಿತು ಬೋಧಿಸುವವರು ಇತರ ದೇಶಗಳಲ್ಲಿಯೂ ನಮ್ಮ ದೇಶದಲ್ಲಿಯೂ ಸಹ ಹೇರಳವಾಗಿದ್ದಾರೆ. ಆ ಬೋಧನೆಗಳು ನಮ್ಮ ಆಸೆ ಆಕಾಂಕ್ಷೆಗಳನ್ನು ಹೆಚ್ಚಿಸಿ ಮನಸ್ಸು ಇನ್ನೂ ಹೆಚ್ಚು ಅಶಾಂತಿಯುತವಾಗುವಂತೆ ಪ್ರಚೋದಿಸುತ್ತವೆ. ಆಸೆ ಆಕಾಂಕ್ಷೆಗಳ ಪರಿಮಿತಿಯನ್ನು ವಿಸ್ತರಿಸಲು ಮೊದಲು ಮಾಡಿದರೆ, ಜಗತ್ತಿನಲ್ಲಿರುವ ವಸ್ತುಗಳೆಲ್ಲಾ ದೊರಕಿದರೂ ಸಾಕೆನಿಸುವುದಿಲ್ಲ. ನಮಗೆ ಇನ್ನೂ ಹೆಚ್ಚು ಹೆಚ್ಚು ಬೇಕೆನಿಸಿ ನಮ್ಮ ಕಾಮನೆಗಳು ಜೀವನದ ಎಲ್ಲಾ ರಂಗಗಳಲ್ಲೂ ಪ್ರವೇಶಿಸುತ್ತವೆ. ಸಾಧಾರಣವಾಗಿ ಹೆಂಡತಿ ಮಕ್ಕಳು, ಬಂಧುಮಿತ್ರರು ಮತ್ತು ಹೇರಳವಾದ ಸಂಪತ್ತು ಇವುಗಳನ್ನು ಹೊಂದಿರುವುದೇ ಸುಖವೆಂದು ಅನೇಕರು ಯೋಚಿಸುತ್ತಾರೆ. ಇವುಗಳು ಯಾವುವೂ ಇಲ್ಲದಿದ್ದರೂ ಕೆಲವರು ಹರ್ಷ ಹಾಗೂ ಸಂತೋಷದಿಂದಿರುವುದನ್ನು ನಾವು ನಿತ್ಯವೂ ನೋಡುತ್ತಿಲ್ಲವೆ? ಅಖಂಡ ಭೂಮಂಡಲವನ್ನೇ ಆಳತಕ್ಕ ಚಕ್ರವರ್ತಿಯೂ ಸಹ ದುಃಖಾನುಭವದಿಂದ ತಪ್ಪಿಸಿಕೊಳ್ಳಲಾರನು. ಪ್ರಥಮ ಜಾತನಾದ ಹಿರಣ್ಯಗರ್ಭನೂ

ಸಹ ಮಧುಕೈಟಭರೆಂಬ ರಾಕ್ಷಸರಿಂದ ಪೀಡಿಸಲ್ಪಟ್ಟಿದ್ದನು. ಸತ್ಕರ್ಮ ಮತ್ತು ದುಷ್ಕರ್ಮ ಫಲಗಳು ಬಗೆಬಗೆಯ ರೀತಿಗಳಲ್ಲಿ ಸಂಯೋಗವಾಗುವುದೇ ಶರೀರಕ್ಕೆ ಕಾರಣವಾಗುವುದರಿಂದ, ಶರೀರವಿರುವವರೆಗೂ ಸುಖದುಃಖಾನುಭವಗಳಿಂದ ತಪ್ಪಿಸಿಕೊಳ್ಳುವುದು ಅಸಾಧ್ಯ. ಅನಿತ್ಯ ವಸ್ತುಗಳಲ್ಲಿನ ಬಯಕೆಯನ್ನು ಅಡಗಿಸಿ, ನಮ್ಮ ಅವಕಾಶವನ್ನೂ ಶಕ್ತಿಯನ್ನೂ, ಶರೀರಸೌಖ್ಯ ಮತ್ತು ಸುಖದುಃಖಾದಿಗಳ ಎಲ್ಲೆಯನ್ನು ಮೀರಿದ ಆತ್ಮಾನಂದವನ್ನೂ ಪಡೆಯಲು ವಿನಿಯೋಗಿಸಬೇಕು.

ಅಂತರಾತ್ಮವು ಶರೀರಾದಿಗಳಿಗಿಂತ ಅತೀತವಾದುದೆಂದು ಅರಿತು ಯಾರು, 'ನಾನು' ಮತ್ತು 'ನನ್ನದು' ಎಂಬ ಭಾವನೆಗಳನ್ನು ಮೀರಿ ನಿಂತಿದ್ದಾರೋ ಅಂಥವರಿಗೆ ಮಾತ್ರ ಬಂಧನದಿಂದ ಮುಕ್ತಿ ಸಾಧ್ಯವೆಂದು ಶಾಸ್ತ್ರವು ಒತ್ತಿ ಸಾರುತ್ತಿದೆ. ಅಂತಹ ಮುಕ್ತಿಯು ದೇಹಾಭಿಮಾನ, 'ನಾನು, ನನ್ನದು' ಎಂಬವುಗಳನ್ನು ಪೋಷಿಸುವವನಿಗೆ ತೀರ ದೂರವಾಗಿರುತ್ತದೆ. ಪ್ರವಾಹವನ್ನು ದಾಟಲು ಹರಿಗೋಲೆಂದು ಭಾವಿಸಿ ಮೊಸಳೆಯ ಬೆನ್ನೇರಿ ಕುಳಿತವನಿಗೆ, ಅಂಥವನನ್ನು ಹೋಲಿಸುತ್ತಾರೆ ಶ್ರೀ ಶಂಕರಾಚಾರ್ಯರು. ಶ್ರದ್ಧಾಪೂರ್ವಕವಾದ ಯಾವ ಪ್ರಯತ್ನಕ್ಕೇ ಆಗಲಿ ಶರೀರವೂ ಸಹ ಬಲಿಷ್ಠವಾಗಿರಬೇಕು, ಆದರೆ ಕೊಬ್ಬಿರಬೇಕಾಗಿಲ್ಲ. ಸಾಕಷ್ಟು ಪೂರ್ವಪುಣ್ಯವಿರದಿದ್ದರೆ, ಅರೋಗ ದೃಢಕಾಯವನ್ನು ಹೊಂದುವುದು ನಮ್ಮ ಕೈಯಲ್ಲಿಲ್ಲ. ಅಭೋಜ್ಯ ಪದಾರ್ಥಗಳನ್ನು ತಿನ್ನದಂತೆ, ದುರಭ್ಯಾಸಗಳಿಂದ ಕೆಡದಂತೆ, ಶರೀರವನ್ನು ನೋಡಿಕೊಳ್ಳುವುದು ನಮ್ಮ ಕೈಯಲ್ಲಿದೆ. ಶರೀರವನ್ನು ನಿರ್ಲಕ್ಷಿಸಬೇಕೆಂದು ಶಾಸ್ತ್ರ ಬೋಧಿಸುವುದಿಲ್ಲ. ಧರ್ಮಾಚರಣೆಗೆ ಅದೊಂದು ಪರಿಣಾಮಕಾರಿಯಾದ ಸಲಕರಣೆಯಾಗಬೇಕಾದರೆ, ಶರೀರವನ್ನು ಎಚ್ಚರಿಕೆಯಿಂದ ಕಾಪಾಡಿಕೊಂಡು ಬರಬೇಕೆಂದು ಶಾಸ್ತ್ರವು ಆದೇಶ ನೀಡುತ್ತದೆ. ಶಾಸ್ತ್ರದಲ್ಲಿರುವ ಅನೇಕ ಪ್ರಾಯಶ್ಚಿತ್ತಾದಿ ಕರ್ಮಗಳು ಶರೀರ ಶುದ್ಧೀಕರಣಕ್ಕಾಗಿಯೇ ಹೇಳಲ್ಪಟ್ಟಿವೆ. ಶುದ್ಧಿಗೊಳಿಸಲ್ಪಟ್ಟರೆ ಮತ್ತು ಶುದ್ಧವಾಗಿದ್ದರೆ ಮಾತ್ರ ಶರೀರವು ಧರ್ಮಾಚರಣೆಗೆ ಸಹಕಾರಿಯಾಗುತ್ತದೆ. ಸಾಮಾನ್ಯವಾಗಿ ದಿನಕ್ಕೆರಡು ಬಾರಿ ಆಹಾರ, ಕೆಲವು ವಿಶೇಷ ದಿನಗಳಲ್ಲಿ ಒಂದು ಬಾರಿ ಆಹಾರ, ಇನ್ನೂ ವಿಶೇಷ ದಿನಗಳಲ್ಲಿ ಉಪವಾಸ ಮಾಡಬೇಕೆಂದು ಶಾಸ್ತ್ರಗಳು ವಿಧಿಸುತ್ತವೆ. ಯಾವ ಆಹಾರವನ್ನು ಉಪಯೋಗಿಸಬಹುದು, ಯಾವಾಗ ಊಟ ಮಾಡಬಹುದೆಂಬುದನ್ನೂ ಸಹ ಶಾಸ್ತ್ರ ತಿಳಿಸುತ್ತದೆ. ಶಾಸ್ತ್ರದ ಆದೇಶವನ್ನು ಅಲಕ್ಷಿಸಿ, ಕಟ್ಟುಪಾಡುಗಳನ್ನು ಕಿತ್ತೊಗೆದು, ಸಿಕ್ಕಿದ ಕಡೆ ಸಿಕ್ಕಸಿಕ್ಕದ್ದನ್ನೆಲ್ಲಾ ತಿಂದರೆ, ಗಡಿಯಾರ ನಡೆಯಬೇಕಾದರೆ ಕೀಲಿ ಕೊಡಬೇಕೆಂದು ತಿಳಿದು, ಇಷ್ಟ ಬಂದಾಗಲೆಲ್ಲಾ ಕೀಲಿ ಕೊಡುವವನಿಗಿಂತ



ನಾವೇನೂ ಹೆಚ್ಚು ವಿವೇಕಿಗಳೆನಿಸುವುದಿಲ್ಲ. ಅದರಿಂದ ನಮ್ಮ ಶರೀರ ರೋಗಿಷ್ಠವಾಗುವುದಷ್ಟೇ ಅಲ್ಲದೆ, ಅತ್ಯಂತ ಸರಳವಾದ ಧರ್ಮಾಚರಣೆಗೂ ಸಹ ಅದು ಅನರ್ಹವಾಗುತ್ತದೆ.

ನಮ್ಮ ಉಪದೇಶಗಳಿಂದ ಇತರರನ್ನು ಪ್ರಭಾವಿತರನ್ನಾಗಿ ಮಾಡಬೇಕಾದರೆ, ಮೊದಲು ನಮ್ಮ ನುಡಿಯಂತೆ ಚಾಚೂ ತಪ್ಪದೆ ನಾವು ನಡೆದುಕೊಳ್ಳಬೇಕು. ಈಜುವುದನ್ನೇ ಕಲಿಯದವನು ಇತರರನ್ನು ಹೊಳೆದಾಟಿಸಲು ಹೇಗೆ ಸಮರ್ಥನಾದಾನು? ಸಮಾಜವೆಂದರೆ ವ್ಯಕ್ತಿಗಳ ಸಮೂಹವಲ್ಲದೆ ಬೇರೆಯೇನಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಪಾಲಿಗೆ ಬಂದ ಕೆಲಸವನ್ನು ಶ್ರದ್ಧೆಯಿಂದ ನಿರ್ವಹಿಸಿದರೆ, ಆತನಿರುವ ಸಮಾಜವು ತಾನಾಗಿಯೇ ಉನ್ನತಿ ಹೊಂದುವುದು. ವ್ಯಕ್ತಿಯು ಇನ್ನೊಬ್ಬರನ್ನು ತಿದ್ದಲು, ಸುಧಾರಣೆ ಮಾಡಲು ಮೊದಲಾದರೆ, ಅವನ ಯತ್ನ ನಿಷ್ಫಲವಾಗುತ್ತದೆ. ಅಷ್ಟೇ ಅಲ್ಲದೆ ಆತನ ನಡೆ ನುಡಿಯು ವಿವಾದ ಮತ್ತು ದ್ವೇಷಕ್ಕೆ ಎಡೆಗೊಡುತ್ತದೆ. ನಾವು ಋಜುಜೀವನವನ್ನು ನಡೆಸುತ್ತಿದ್ದಲ್ಲಿ ಕೆಲವರಾದರೂ ನಮ್ಮನ್ನು ಅನುಸರಿಸುವ ಪ್ರವೃತ್ತಿಯನ್ನು ಹೊಂದಬಹುದು. ನಾವು ತಪ್ಪು ಮಾರ್ಗದಲ್ಲಿ ನಡೆಯುತ್ತಿದ್ದರೆ, ಅವರೂ ದುರ್ಮಾರ್ಗಿಗಳಾಗುವ ಸಂಭವವುಂಟು. ಆದುದರಿಂದ ಸಂಸಾರದ ಯಜಮಾನನ, ಸಮಾಜದ ಹಿರಿಯನ ಮತ್ತು ರಾಷ್ಟ್ರನಾಯಕನ ಜವಾಬ್ದಾರಿ ಅತ್ಯಂತ ಗುರುತರವಾದುದು.

ರಾಜಕೀಯ ಅಥವಾ ಬೇರಾವುದಾದರೂ ಲೌಕಿಕ ವಿಷಯಗಳಲ್ಲಿ ಬಣ್ಣಬಣ್ಣದ ಮಾತುಗಳನ್ನಾಡಿ, ಜನಸಮೂಹದ ಮನಸ್ಸಿನ ಮೇಲೆ ಪ್ರಭಾವಬೀರಿ ಮರುಳು ಮಾಡಲು ಸಾಧ್ಯವಾಗಬಹುದು. ಆದರೆ ಆಧ್ಯಾತ್ಮಿಕ ರಂಗದಲ್ಲಿ ಈ ಸಾರ್ವಜನಿಕವಾದ ಯಾವ ಯತ್ನವೂ ಪರಿಣಾಮಕಾರಿಯಾಗದು. ದೇವಸ್ಥಾನದ ತೇರನ್ನೆಳೆಯಲು ನೂರಾರು ಜನರನ್ನು ಸೇರಿಸಬಹುದು. ಆದರೆ ನಮಗೆ ಹಸಿವಾದಾಗ ಜನಸಂದಣಿಯನ್ನು ಕಲೆಹಾಕುವುದರಲ್ಲಿ ಅರ್ಥವಿಲ್ಲ. ಪ್ರತಿಯೊಬ್ಬನೂ ಸಹ ತನ್ನ ಹಸಿವನ್ನು ನೀಗಿಸಿಕೊಳ್ಳಲು ತಾನೇ ಯತ್ನಿಸಬೇಕು, ಊಟ ಮಾಡಬೇಕು. ಹಾಗೆಯೇ ಆಧ್ಯಾತ್ಮಿಕ ಕ್ಷುಧೆಯುಳ್ಳ ಪ್ರತಿಯೊಬ್ಬರೂ ತಮಗೆ ಮಾರ್ಗ ತೋರುವಂತಹ ಒಬ್ಬ ಗುರುವನ್ನು ಆಶ್ರಯಿಸಬೇಕು. ತಮ್ಮ ಹಸಿವನ್ನು ನೀಗಿಸಿಕೊಳ್ಳುವ ಸಲುವಾಗಿ ಹಸಿವಿಲ್ಲದವರನ್ನೆಲ್ಲಾ ಕಲೆಹಾಕಿ, ಅವರಿಗೆಲ್ಲಾ ಹಸಿವನ್ನು ಹೋಗಲಾಡಿಸಿಕೊಳ್ಳಲು ಏನು ಮಾಡಬೇಕೆಂದು ಬೋಧಿಸುವುದರಲ್ಲಿ ಅರ್ಥವಿಲ್ಲ. ಭಕ್ತಿ ಶ್ರದ್ಧೆಗಳಿಂದ ಪ್ರಾರ್ಥಿಸದವರಿಗೆ ಉಪದೇಶ ಮಾಡಕೂಡದೆಂದು ನಮ್ಮ ಶಾಸ್ತ್ರಗಳು ವಿಧಿಸುತ್ತವೆ. ಪ್ರತಿಯೊಬ್ಬ ಮುಮುಕ್ಷುವೂ, ತನ್ನ ಆಧ್ಯಾತ್ಮಿಕ ಕ್ಷುಧೆಯ ಸ್ವಭಾವ ಮತ್ತು ತೀವ್ರತೆಗಳಿಗೆ ಅನುಗುಣವಾದ ಮತ್ತು ತನ್ನ ಅರ್ಹತೆ

ಯೋಗ್ಯತೆಗಳಿಗೆ ಹೊಂದಾಣಿಕೆಯಾಗುವ ಮಾರ್ಗದಲ್ಲಿ ಸರಿಯಾದ ಅಭ್ಯಾಸ ನಡೆಸುತ್ತಾ ಫಲ ದೊರಕುವವರೆಗೆ ಶ್ರದ್ಧೆಯಿಂದ ಸಾಧನೆ ನಡೆಸುವುದೇ ಸೂಕ್ತವಾದುದು.

* * * *



## ೩. ಮಾನವನ ಸಂಕೀರ್ಣ ಸ್ವಭಾವ

ಇಂದಿನ ಸಮಾಜದ ಒಲವನ್ನು ನೋಡಿದರೆ, ನೂರು ವರ್ಷಗಳ ನಂತರ ಇಂದು ನಾವಿರುವ ಈ ಭೂಮಿಯಲ್ಲಿಯೇ ಹುಟ್ಟಲಿರುವ ಮಾನವನು ಧರ್ಮಾಚರಣೆಗೆ ಮತ್ತು ಆಧ್ಯಾತ್ಮಿಕ ಸಾಧನೆಗೆ, ನಮಗಿಂತಲೂ ತೀರ ಕಡಿಮೆ ಅವಕಾಶಗಳನ್ನು ಹೊಂದಿರುತ್ತಾನೆಂದು ಊಹಿಸುವುದು ತಪ್ಪಾಗದು. ಈಗ ನಮಗಿರತಕ್ಕ ಕೆಲವೇ ಅವಕಾಶಗಳು ನೂರು ವರ್ಷಗಳ ನಂತರ ಇರಲಾರವೆಂದು, ನಾವು ನಿಜವಾಗಿ ನಂಬಿದಲ್ಲಿ, ಈಗಿರುವ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಪುನರ್ಜನ್ಮದಿಂದ ಪಾರಾಗುವುದು ಅವಶ್ಯವಾದ ಕರ್ತವ್ಯವಲ್ಲವೆ? ಹೇಗಿದ್ದರೂ ಮುಂದಿನ ಜನ್ಮಗಳಲ್ಲಿ ದೊರಕಬಹುದಾದ ಕಡಿಮೆ ಅವಕಾಶಗಳಿಗೆ ಪೂರಕವಾಗಿ ಈಗಿನಿಂದಲೇ ಸಿದ್ಧತೆಯನ್ನು ಮಾಡಿಕೊಳ್ಳಬೇಕಾದುದು ಆವಶ್ಯಕ. ಸಾವು ಬಂದಾಗ ಭೂಮಿಕಾಣಿ, ಮನೆಮಠ, ಸಮೀಪದ ಬಂಧುಬಳಗವನ್ನೂ ಸಹ ಬಿಡಬೇಕಾಗುತ್ತದೆ. ಆಗ ನಮ್ಮನ್ನು ಅನುಸರಿಸುವುದು ಈಗ ನಾವು ನಡೆಸುತ್ತಿರುವ ಧರ್ಮಾಧರ್ಮಗಳು ಮಾತ್ರವೇ. ಆದ್ದರಿಂದ ಆದಷ್ಟು ಹೆಚ್ಚು ಧರ್ಮವನ್ನು ಸಂಗ್ರಹಿಸಬೇಕು. ಹಾಗೆಯೇ ಅಧರ್ಮವನ್ನು ಕಳೆದುಕೊಳ್ಳಬೇಕು.

ಕಾಲ ಮತ್ತು ಸನ್ನಿವೇಶಗಳು ಕೆಟ್ಟುಹೋಗಿವೆಯೆಂದು ದೂರಿ ಪ್ರಯೋಜನವಿಲ್ಲ. ಸೂರ್ಯನು ಮುಳುಗಿ, ಜಗತ್ತನ್ನು ಕತ್ತಲೆ ಆವರಿಸಿದಾಗ ತಕ್ಷಣವೇ ನೀವು ನಿದ್ರಿಸತೊಡಗುವುದಿಲ್ಲ. ದೀಪ ಹಚ್ಚಿ ನಮ್ಮ ಸ್ವಾಭಾವಿಕ ಚಟುವಟಿಕೆಗಳಲ್ಲಿ – ದೀಪದ ಬೆಳಕಿನಿಂದ ಸಾಧ್ಯವಾದಷ್ಟು ಮಟ್ಟಿಗೆ– ನಿರತವಾಗುತ್ತೇವೆ. ತುರ್ತಿನ ಸಮಯಗಳಲ್ಲಿ, ಅತ್ಯಂತ ಕತ್ತಲಲ್ಲಿಯೂ ಸಹ ಮಿಣುಕು ಬೆಳಕಿನ ಸಹಾಯದಿಂದ ಮೈಲಿ ಮೈಲಿಗಟ್ಟಲೆ ನಡೆದುಹೋಗುತ್ತೇವೆ. ಸೂರ್ಯೋದಯವಾಗಲೆಂದು ಕಾದು ಕುಳಿತಿರುವುದಿಲ್ಲ. ಹಾಗೆಯೇ ಹುಟ್ಟು ಸಾವುಗಳ ಈ ವರ್ತುಲದಿಂದ ತಪ್ಪಿಸಿಕೊಳ್ಳಲು ಮನಃಪೂರ್ವಕವಾಗಿಯೂ, ಶ್ರದ್ಧೆಯಿಂದಲೂ ಇಚ್ಛಿಸಿದಲ್ಲಿ ಅಥವಾ ಮುಂದಿನ ಒಳಿತಿಗಾದರೂ ಪೂರ್ವ ಸಿದ್ಧತೆಮಾಡಿಕೊಳ್ಳಲು ಇಂದು ನಮ್ಮನ್ನು ಕವಿದಿರುವ ಆಧ್ಯಾತ್ಮಿಕ ಮಬ್ಬನ್ನು

ನಿರ್ಲಕ್ಷಿಸಿ ಮುನ್ನಡೆಯಬೇಕು. ಲೋಕಕ್ಕೆಲ್ಲಾ ಕವಿದಿರುವ ಕತ್ತಲನ್ನು ನಿವಾರಿಸಲಾಗದಿದ್ದರೂ, ನಮ್ಮ ಮಟ್ಟಿಗಾದರೂ, ನಮ್ಮ ಆಧ್ಯಾತ್ಮಿಕ ಮಾರ್ಗದಲ್ಲಿ ಕವಿದಿರುವ ಕತ್ತಲನ್ನು ನಿವಾರಿಸುವ ದಾರಿದೀಪವನ್ನು ಅನ್ವೇಷಿಸಬೇಕು. ದಾರಿತೋರುವ ಅಂತಹ ದೀಪವೇ ಗುರು; ಆಧ್ಯಾತ್ಮಿಕ ಮಾರ್ಗದರ್ಶಿ. ನಾವು ಆತನಲ್ಲಿ ಸಂಪೂರ್ಣ ಶರಣಾಗತರಾದರೆ, ಆತನು ಕೈಹಿಡಿದು ಕ್ರಮಕ್ರಮವಾಗಿ ಗುರಿಯತ್ತ ನಮ್ಮನ್ನೊಯ್ಯುತ್ತಾನೆ. ಕವಿಯುತ್ತಿರುವ ಕತ್ತಲಿಂದ ಆತನ ದೃಷ್ಟಿ ಮಂಕಾಗದು, ಕುರುಡಾಗದು. ನಾವು ಆತನಲ್ಲಿ ಪೂರ್ಣನಂಬಿಕೆ ಉಳ್ಳವರಾದರೆ, ಆತನು ನಮ್ಮನ್ನು ಸರಿಯಾಗಿ ನಡೆಸುವುದು ಖಂಡಿತವಾಗಿಯೂ ನಿಶ್ಚಯ.

ಈಗಲೂ ಸಹ ತಂದೆತಾಯಿಗಳು ತಮ್ಮ ಮಕ್ಕಳಿಗೆ ಉಪನಯನವನ್ನು ಮಾಡುತ್ತಾರೆ. ಧರ್ಮದ ವಿವಿಧ ರೂಪ ರೇಷೆಯನ್ನು ತಿಳಿಸುವ ಅನೇಕ ಗ್ರಂಥಗಳು ಈಗಲೂ ಹೇರಳವಾಗಿವೆ. ನಾವು ಕೇಳಿದರೆ ಸಾಕು, ಮನಃಪೂರ್ವಕವಾಗಿ ನಮಗೆ ಉಪದೇಶವೀಯುವ, ದಾರಿತೋರುವ, ಯೋಗ್ಯರಾದ ಬೋಧಕರು ಈಗಲೂ ಸಹ ಇದ್ದಾರೆ. ಸಂತ, ಋಷಿ ಪರಂಪರಾಗತವಾಗಿ ಬಂದ ನಮ್ಮ ಬುದ್ಧಿಶಕ್ತಿಯು ಸೂಕ್ಷ್ಮತರ, ಗಾಢತರ ವಿಚಾರಗಳನ್ನು ಗ್ರಹಿಸುವಷ್ಟು ಚುರುಕಾಗಿ ಈಗಲೂ ಸಹ ಇದೆ. ಇಷ್ಟೆಲ್ಲಾ ಸದವಕಾಶಗಳಿದ್ದೂ ಸಹ, ಅವುಗಳನ್ನು ಉಪಯೋಗಿಸಿಕೊಳ್ಳದೆ, ಜೀವನವನ್ನು ವ್ಯರ್ಥವಾಗಿಯೂ, ಧ್ಯೇಯರಹಿತವಾಗಿಯೂ ಕಳೆಯಲು ನಮಗೆ ಯಾವ ಅರ್ಹಕಾರಣವಿದೆ? ಮಾನವರಾಗಿ ಈಗ ನಮಗೆ ದೊರೆತ ಸದವಕಾಶವನ್ನು ಉಪಯೋಗಪಡಿಸಿಕೊಳ್ಳದೆ ವ್ಯರ್ಥಮಾಡಿಕೊಂಡರೆ, ಭಗವಂತನು ಮುಂದಿನ ಜನ್ಮದಲ್ಲಿ ಇದೇ ರೀತಿ ಅವಕಾಶ ಕೊಡುತ್ತಾನೆಂದೂ ಅಥವಾ ಮಾನವ ಜನ್ಮವನ್ನೇ ಕೊಡುತ್ತಾನೆಂದೂ ಹೇಗೆ ನಿರೀಕ್ಷಿಸಲಾದೀತು?

ಭಗವಂತನು ಪ್ರಸನ್ನತೆಯಿಂದ ನಮಗೆ ಮಾನವ ಜನ್ಮವಿತ್ತಿರುವಾಗ, ಸರ್ವಪ್ರಯತ್ನಮಾಡಿ ಆ ಸ್ಥಾನವನ್ನು ಉಳಿಸಿಕೊಳ್ಳುವುದೂ ಮತ್ತು ಸಾಧ್ಯವಾದರೆ ಮೇಲಿಂದ ಮೇಲಕ್ಕೆ ಏರುವುದೂ ನಮ್ಮ ಕರ್ತವ್ಯವಲ್ಲವೆ?

ಈ ಕಲ್ಪದ ಆದಿಯಲ್ಲಿ, ದೇವತೆಗಳೂ ರಾಕ್ಷಸರೂ ಒಬ್ಬ ತಂದೆಯ - ಬೇರೆ ಬೇರೆ ಪತ್ನಿಯರಲ್ಲಿ ಜನಿಸಿದ -ಮಕ್ಕಳಾದರೂ ತಮ್ಮ ಸ್ವಭಾವ ಮತ್ತು ಮನಃಪ್ರವೃತ್ತಿಗಳಲ್ಲಿ ತಾವು ಪರಸ್ಪರ ವಿರುದ್ಧವೆಂದು ಗ್ರಹಿಸಿ ಬೇರೆ ಬೇರೆ ಲೋಕಗಳಲ್ಲಿ ವಾಸಿಸುವುದು ಯೋಗ್ಯವೆಂದೂ ವಿವೇಕವೆಂದೂ ಅರಿತಿದ್ದರು. ದೇವತೆಗಳು ದೇವಲೋಕದಲ್ಲಿಯೂ, ರಾಕ್ಷಸರು ಅಸುರ ಲೋಕದಲ್ಲಿಯೂ ಇರುತ್ತಿದ್ದರು. ಯಾವನಾದರೂ ದುರಾಶಾಪೂರಿತನಾದ ರಾಕ್ಷಸನು ದೇವಲೋಕವನ್ನು ಮುತ್ತಿ ಅಲ್ಲಿಯೂ ಸಹ ತನ್ನ ಸಾರ್ವಭೌಮತ್ವವನ್ನು



ಸ್ಥಾಪಿಸಲು ಯತ್ನಿಸಿದ ಹೊರತು, ಸರ್ವೇಸಾಧಾರಣವಾಗಿ ಜಗಳಕ್ಕೆ ಅವಕಾಶ ಅಸಾಧ್ಯವಾಗಿರುತ್ತಿತ್ತು. ಸಾಮಾನ್ಯವಾಗಿ ಅವರುಗಳು ಪ್ರತ್ಯೇಕವಾದ ತಮ್ಮ ತಮ್ಮ ಲೋಕಗಳಲ್ಲಿಯೇ ಇರುತ್ತಿದ್ದರು.

ಮುಂದೆ, ತ್ರೇತಾಯುಗದಲ್ಲಿ ಶ್ರೀ ರಾಮಚಂದ್ರನು ಧರ್ಮ ಸಂರಕ್ಷಣಾರ್ಥವಾಗಿ ಅವತರಿಸಿದಾಗ, ದೇವತೆಗಳು ಅಯೋಧ್ಯೆ ಕಿಷ್ಕಿಂಧೆಗಳಲ್ಲಿಯೂ, ರಾಕ್ಷಸರು ದಂಡಕಾರಣ್ಯ, ಲಂಕೆಗಳಲ್ಲಿಯೂ ವಾಸಿಸುತ್ತಿದ್ದರು. ಎಂದರೆ ಪ್ರತ್ಯೇಕ ಲೋಕಗಳಲ್ಲಿರದೆ, ಒಂದೇ ಲೋಕದಲ್ಲಿಯೇ– ಭೂಮಿಯಲ್ಲಿಯೇ – ಅದರ ಬೇರೆ ಬೇರೆ ಭಾಗಗಳಲ್ಲಿದ್ದರು. ಆಗ ಮದೋನ್ಮತ್ತತೆಯಿಂದ ಯಾವನಾದರೂ ರಾಕ್ಷಸನು ಪ್ರಪಂಚವನ್ನೇ ಕಬಳಿಸಲು ದಂಡಯಾತ್ರೆ ಹೊರಟಾಗಲೋ ದೇವತೆಗಳು ಅವರ, ರಾಕ್ಷಸರ–ಶಕ್ತಿಗೆ ಪ್ರತಿ ಸವಾಲು ಹಾಕಿ ಅವರ ಶಕ್ತಿಸ್ಥಾನಗಳಿಗೆ ಪ್ರವೇಶ ಮಾಡಿದಾಗಲೋ ಜಗಳ, ಕದನಗಳು ನಡೆಯುತ್ತಿದ್ದವು.

ಭಗವಂತನು ಶ್ರೀ ಕೃಷ್ಣನಾಗಿ ದ್ವಾಪರಯುಗದಲ್ಲಿ ಅವತರಿಸಿದಾಗ, ಒಂದೇ ಲೋಕದ ಪ್ರತ್ಯೇಕ ಭಾಗಗಳಲ್ಲಿರುವುದು ತಪ್ಪಿ, ದೇವಾಸುರರು ಒಂದೇ ಮನೆತನದಲ್ಲಿ, ಸಂಸಾರದಲ್ಲಿ, ಜನ್ಮ ತಾಳಿದರು. ಶ್ರೀ ಕೃಷ್ಣನ ಸೋದರಮಾವನಾದ ಕಂಸ, ಸೋದರತ್ತೆಯ ಮಗನಾದ ಶಿಶುಪಾಲ ಇವರು ರಾಕ್ಷಸರು. ಆತನ ಆಪ್ತಬಂಧುಗಳಾದ–ಸೋದರತ್ತೆಯ ಮಕ್ಕಳು–ಪಾಂಡವರು ದೇವತೆಗಳು, ಅವರ ದಾಯಾದಿಗಳಾದ ಕೌರವರು ರಾಕ್ಷಸರು. ಅವರಲ್ಲಿ ಪರಸ್ಪರ ಜಗಳಗಳಿಗೆ ಅವಕಾಶಗಳು ಬಹಳವಿದ್ದುವು. ವಾಸ್ತವವಾಗಿ ಅವರು ಹುಟ್ಟುತ್ತಲೇ ಜಗಳಗಳು ಆರಂಭವಾದವು. ಆಗಾಗ ಮೌನ ಸಮಾಧಾನಗಳು ನೆಲಸಿದಂತಿದ್ದರೂ ಅವರ ಹುಟ್ಟುಗುಣವು ಅವರನ್ನು ಅವ್ಯಾಹತ ಕದನಗಳಲ್ಲಿ ತೊಡಗಿಸಿ ಕಟ್ಟಕಡೆಗೆ ಆ ಮನೆತನವನ್ನೇ ನಾಶಮಾಡಿದ ಮಹಾಯುದ್ಧದ ಅಂತಿಮ ಘಟ್ಟಕ್ಕೆ ಮುಟ್ಟಿತು.

ಈ ಕಲಿಯುಗದಲ್ಲಿ, ಒಂದೇ ಸಂಸಾರದಲ್ಲಿ ಬಂಧುಗಳಾಗಿ ಹುಟ್ಟುವುದೂ ಸಹ ಸಾಲದು. ತತ್ಪರಿಣಾಮವಾಗಿ ದೇವತೆಗಳೂ ಅಸುರರೂ ಬೇರೆ ಬೇರೆಯಾಗಿ ಪ್ರತ್ಯೇಕ ಲೋಕಗಳಲ್ಲಿ ಇರುವುದರಲ್ಲಾಗಲಿ, ಒಂದೇ ಲೋಕದಲ್ಲಿ ಪ್ರತ್ಯೇಕ ಪ್ರತ್ಯೇಕ ಸ್ಥಾನಗಳಲ್ಲಿರುವುದರಲ್ಲಾಗಲಿ ಅಥವಾ ಒಂದೇ ಸಂಸಾರದ ಬೇರೆ ಬೇರೆ ವ್ಯಕ್ತಿಗಳಲ್ಲಿರುವುದರಲ್ಲಾಗಲಿ ಸಂತೃಪ್ತರಾಗಿಲ್ಲ. ಈಗ ಆ ದೇವಾಸುರರು ಒಂದೇ ಶರೀರದಲ್ಲಿರುವುದರಿಂದ ಯಾವ ವ್ಯಕ್ತಿಯನ್ನೇ ಆಗಲಿ ಇವನು ದೈವೀಸಂಪನ್ನ, ಇವನು ಆಸುರೀ ಸಂಪನ್ನ ಎಂದು ಪ್ರತ್ಯೇಕವಾಗಿ ವಿಂಗಡಿಸಲು ಸಾಧ್ಯವಿಲ್ಲ. ಈ ಕ್ಷಣದಲ್ಲಿ ದೇವನಾಗಿ ಕಾಣುತ್ತಾನೆ. ಮರುಕ್ಷಣದಲ್ಲಿಯೇ ಅಸುರನ

ಅಪರಾವತಾರವಾಗಿ ಬಿಡುತ್ತಾನೆ. ಈ ದೇವಾಸುರ ತತ್ತ್ವಗಳು ಇಂದಿನ ಮಾನವನ ಮಿಶ್ರಸ್ವಭಾವದಲ್ಲಿ ಎಷ್ಟರಮಟ್ಟಿಗೆ ರಕ್ತಗತವಾಗಿಬಿಟ್ಟಿವೆಯೆಂದರೆ, ಎಂದೂ ಕೊನೆಗಾಣದ ಸತತವಾದ ಸಂಘರ್ಷವು ಪ್ರತಿಕ್ಷಣದಲ್ಲಿಯೂ ಆತನ ಆಂತರ್ಯದಲ್ಲಿ ನಡೆಯುತ್ತಿರುತ್ತದೆ. ಆತನು ನಡೆಸುತ್ತಿರುವ ಎಷ್ಟೋ ಒಳ್ಳೆಯ ಕೆಲಸಗಳ ಹಿಂದೆ ನೀಚತನದ ಉದ್ದೇಶವಿರಬಹುದು. ಹಾಗೆಯೇ, ಆತನ ಎಷ್ಟೋ ದುಷ್ಕೃತಿಗಳ ಹಿಂದೆ ಸದ್ಭಾವನೆಯೂ ಇರಬಹುದು.

ದೇವಾಸುರರು ಪ್ರತ್ಯೇಕ ಲೋಕಗಳಲ್ಲಿ ವಾಸಿಸುತ್ತಿದ್ದಾಗ, ದೇವತೆಗಳ ರಕ್ಷಣೆಗೋಸ್ಕರವಾಗಿ ಭಗವಂತನು ತಾನೊಬ್ಬನೇ ಒಂಟಿಯಾಗಿ ತನ್ನ ಹೊಣೆಯ ಮೇಲೆಯೇ ರಾಕ್ಷಸರೊಡನೆ ಕದನ ನಡೆಸಿದನು. ಅವನು ಒಂದೇ ಲೋಕದ–ಭೂಮಿಯ–ಬೇರೆ ಬೇರೆ ಜಾಗಗಳಲ್ಲಿದ್ದಾಗ, ರಾಕ್ಷಸರ ಬಲಿಷ್ಠ ಸ್ಥಾನಗಳಾದ ಜನಸ್ಥಾನ ಮತ್ತು ಲಂಕೆಗಳಲ್ಲಿ ಕಿಷ್ಕಿಂಧೆಯ ದೈವೀಶಕ್ತಿಗಳ ಸಹಾಯದಿಂದ ಯುದ್ಧಮಾಡಿದನು. ದೇವಾಸುರರು ಒಂದೇ ಸಂಸಾರದಲ್ಲಿ ಜನ್ಮತಾಳಿ ಆತನ ಸಹಾಯವನ್ನು ಕೋರಿದಾಗ, ತನ್ನ ಅಪಾರವಾದ ಸೈನ್ಯವನ್ನು ಕೌರವರ ಸಹಾಯಕ್ಕೆ ಕಳಿಸಿ, ತಾನು ಯುದ್ಧವನ್ನು ಮಾಡದೇ ಇದ್ದರೂ, ಪಾಂಡವರಿಗೆ ದಕ್ಷ ಸಲಹೆಗಾರನಾಗಿ ನಿಂತನು. ಇಂದಿನ ಆಧುನಿಕ ಯುದ್ಧದಲ್ಲಿ-ಅವ್ಯಾಹತವಾಗಿ ಮಾನವನ ಆಂತರ್ಯದಲ್ಲಿ ಆಗುತ್ತಿರುವ ತುಮುಲದಲ್ಲಿ-ಆತನು ಪೂರ್ಣವಾಗಿ ಅಲಕ್ಷಿಸಲ್ಪಟ್ಟಿರುವುದರಿಂದ, ಆ ಒಳತೋಟಿಯ ಅಂತಿಮ ನಿರ್ಧಾರದ ಸಂಪೂರ್ಣ ನಿರ್ಣಾಯಕನು ತಾನೇ ಆದರೂ ಮಾನವನ ಹೃದಯದಲ್ಲೇ ಅವ್ಯಕ್ತ ಸಾಕ್ಷಿಯಾಗಿ ನಿರಾಸಕ್ತನಂತೆ ಇದ್ದುಬಿಟ್ಟಿದ್ದಾನೆ.

ನಮ್ಮನ್ನು ಸನ್ಮಾರ್ಗಪ್ರವೃತ್ತರನ್ನಾಗಿ ಮಾಡುವ "ವಾಸನಾ"ಗಳೇ ದೇವತೆಗಳು; ಕೆಟ್ಟದಾರಿಗೆ, ದುರ್ಮಾರ್ಗದತ್ತ ಎಳೆಯುವ "ವಾಸನಾ"ಗಳೇ ರಾಕ್ಷಸರು. ನಮ್ಮ ನಿತ್ಯಜೀವನದಲ್ಲಿ ಅನುಸರಿಸಬೇಕಾದ ಮಾರ್ಗವನ್ನು ಆರಿಸಿಕೊಳ್ಳಲು, ಭಗವಂತನು ನಮಗೆ ಕೊಟ್ಟಿರುವ ಸ್ವಾತಂತ್ರ್ಯವನ್ನು ಉಪಯೋಗಿಸಿಕೊಳ್ಳದೆ ಕಷ್ಟದಲ್ಲಿ ಸಿಲುಕಿದರೆ, ಭಗವಂತನು ಅದಕ್ಕೆ ಖಂಡಿತವಾಗಿ ಕಾರಣನಲ್ಲ. ಇಂತಹ ಸ್ವಾತಂತ್ರ್ಯವು ಪ್ರಾಣಿಗಳಿಗೆ ಕೊಡಲ್ಪಟ್ಟಿಲ್ಲ. ಮಾನವರಾದ ನಾವು ನಮ್ಮ ಹೊಣೆಯರಿತು ಅದರ ಸದುಪಯೋಗವನ್ನು ಪಡೆದುಕೊಳ್ಳಬೇಕು.

* * * *



## ೪. ಮಾನವನ ಹೊಣೆಗಾರಿಕೆ

ಯಾವುದು ಆತ್ಮತತ್ತ್ವವನ್ನು ಸ್ಪಷ್ಟಗೊಳಿಸಿ, ಮುಕ್ತಿಯ ಶಾಶ್ವತ ಆನಂದವನ್ನು ದೊರಕಿಸಿಕೊಡುತ್ತದೆಯೋ, ಅದೊಂದೇ ಜ್ಞಾನವೆಂದು ಕರೆಸಿಕೊಳ್ಳಲು ಅರ್ಹವಾದುದು. ಬುದ್ಧಿಯನ್ನು ಚುರುಕುಗೊಳಿಸುವ, ಆದರೆ ಆತ್ಮಸ್ವಾತಂತ್ರ್ಯಕ್ಕೆ ಸಹಾಯವಾಗದ ವಿದ್ಯೆಯು,ಯಾವುದಾದರೂ ಕಲೆಯಲ್ಲಿ ಪಡೆದ ಪ್ರಾವೀಣ್ಯಕ್ಕಿಂತ ಅಧಿಕತರವೇನಲ್ಲ. ಅಂತಹ ವಿದ್ಯೆಯು ಈ ಜಗತ್ತಿನಲ್ಲಿ ಸುಖವಾಗಿ ಜೀವಿಸಲು ಮತ್ತು ಹಲವಾರು ಕಷ್ಟ, ತೊಂದರೆಗಳಿಂದ ತಪ್ಪಿಸಿಕೊಳ್ಳಲು ಬೇಕಾಗುವಷ್ಟು ಬುದ್ಧಿಶಕ್ತಿಯನ್ನು ದೊರಕಿಸಬಲ್ಲುದು. ಈಗ ಶಾಲಾಕಾಲೇಜುಗಳಲ್ಲಿ ಕಲಿಸಲ್ಪಡುತ್ತಿರುವ ವಿದ್ಯೆಯು ಈ ದರ್ಜೆಗೆ ಸೇರಿದುದು. ಜೀವನೋಪಾಯಕ್ಕಾಗಿ ಇಂತಹ ವಿದ್ಯೆಯನ್ನು ಅವಲಂಬಿಸಿದರೂ, ಶ್ರೇಷ್ಠತಮವಾದುದನ್ನು ಪಡೆಯಲು ಶಾಶ್ವತ ಆನಂದದತ್ತ ಕೊಂಡೊಯ್ಯುವ ಜ್ಞಾನಸಂಪಾದನೆ ಆವಶ್ಯಕ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಅಂತಹ ಜ್ಞಾನವು ಇತರ ವಿದ್ಯೆಗಳಿಗಿಂತ ತೀರ ಭಿನ್ನವಾದುದು ಮತ್ತು ಅದನ್ನು ಗಳಿಸುವ ವಿಧಾನವೂ ಸಹ ಇತರ ವಿದ್ಯೆಗಳನ್ನು ಕಲಿವ ರೀತಿಗಿಂತ ಪ್ರತ್ಯೇಕವಾದುದು. ಬುದ್ಧಿಶಕ್ತಿಯನ್ನು ಹರಿತಗೊಳಿಸುವುದಷ್ಟೇ ಸಾಲದು. ಎಲ್ಲಾ ಬಂಧನಗಳಿಂದಲೂ ಆತ್ಮಕ್ಕೆ ಬಿಡುಗಡೆ ದೊರಕಿಸುವ, ಅಜ್ಞಾನವನ್ನು ತೊಲಗಿಸುವ, ಶ್ರೇಷ್ಠತಮ ಜ್ಞಾನವನ್ನು ಅರಿತು ಅರಗಿಸಿಕೊಳ್ಳುವಂತಹ ಸಾಮರ್ಥ್ಯ ಪಡೆಯಲು, ಆ ಬುದ್ಧಿಯು ಸ್ವಚ್ಛವೂ ಶುದ್ಧವೂ ಆಗಿರಬೇಕು. ಅಂತಹ ಶುದ್ಧತೆಯನ್ನು ಕಾಪಾಡಿಕೊಳ್ಳಬೇಕಾದರೆ, ಬುದ್ಧಿಗೆ ಕವಿಯುವ ಕಶ್ಮಲಗಳನ್ನು ಮೊದಲು ಕಳೆದುಕೊಳ್ಳುವುದು ಆವಶ್ಯಕ. ನಮ್ಮ ಅರ್ಹತೆ ಮತ್ತು ಯೋಗ್ಯತೆಗಳಿಗೆ ಅನುಸಾರವಾಗಿ ಶಾಸ್ತ್ರವು ವಿಧಿಸಿರುವ ನಿಯಮಗಳನ್ನು ದೃಢತೆ, ಜಾಗರೂಕತೆ ಮತ್ತು ಶ್ರದ್ಧೆಯಿಂದ ಪಾಲಿಸಿದಾಗ ಮಾತ್ರ ಇದು – ಎಂದರೆ ಕಶ್ಮಲಗಳನ್ನು ಕಳೆಯುವುದು–ಸಾಧ್ಯವಾಗುತ್ತದೆ. ಹೀಗೆ ವಿಘ್ನಗಳನ್ನು ನಿವಾರಿಸಿಕೊಂಡ ನಂತರ, ಸಮರ್ಥ ಗುರುವನ್ನು ಆಶ್ರಯಿಸಿ, ಆತನ ಕೃಪೆಗೆ ನಾವು ಅರ್ಹರಾಗುವವರೆಗೆ ಕಾಯಬೇಕು. ಆತನಿಂದ ಶಾಶ್ವತ ತತ್ತ್ವಗಳ ಉಪದೇಶ

ಪಡೆದು, ಅವುಗಳನ್ನು ಸರಿಯಾಗಿ ಗ್ರಹಿಸಿ, ಆಳವಾಗಿ ಮನನ ಮಾಡಿ, ಅವ್ಯಾಹತ ಅಭ್ಯಾಸದಿಂದ ಆ ತತ್ತ್ವಗಳನ್ನು ಅನುಭವಕ್ಕೆ ತಂದುಕೊಳ್ಳಬೇಕು.

"ಯಾವುದಾದರೂ ಶಬ್ದ ಅಥ'ವಾ ವಸ್ತುವು ಕಿವಿಯನ್ನೋ ಬೇರಾವುದಾದರೂ ಇಂದ್ರಿಯವನ್ನೋ ಸಮೀಪಿಸಿದಾಗ, ಆ ಶಬ್ದ ಅಥವಾ ವಸ್ತು ಅಪಾಯಕಾರಿಯಾದಲ್ಲಿ ಹಸುವಿನಂತಹ ಮೂಕ ಜಂತುವೂ ಕೂಡ ದೂರ ಸರಿಯುತ್ತದೆ. ಆ ಶಬ್ದ ಅಥವಾ ವಸ್ತುವು ಉಪಕಾರಿಯಾಗಿದ್ದಲ್ಲಿ ಸಮೀಪಕ್ಕೆ ಬರುತ್ತದೆ. ಕೋಲು ಹಿಡಿದಾತನನ್ನು ಕಂಡು, ಅವನು ತನ್ನನ್ನು ಹೊಡೆಯಬಹುದೆಂದು ಬಗೆದು ಹಸುವು ಓಡಿಹೋಗುತ್ತದೆ. ಅದೇ ಕೈಯಲ್ಲಿ ಹುಲ್ಲನ್ನು ಹಿಡಿದಿದ್ದರೆ ಆತನ ಹತ್ತಿರಕ್ಕೆ ಬರುತ್ತದೆ. ಅದರಂತೆ ಮಾನವರಲ್ಲಿ ತುಂಬಾ ಪ್ರಾಜ್ಞರಾದವರು, ಕ್ರೂರಿಗಳೂ ಬಲಿಷ್ಠರೂ ಆದವರಿಂದ ದೂರ ಸರಿಯುತ್ತಾರೆ, ಸಜ್ಜನರ ಬಳಿಸಾರಿ ಬರುತ್ತಾರೆ" ಎಂಬುದಾಗಿ ಶ್ರೀ ಶಂಕರ ಭಗವತ್ಪಾದರು ನುಡಿದಿದ್ದಾರೆ. ಯಾವುದನ್ನು ಪಡೆಯುವುದರಿಂದ ನಾವು ತೃಪ್ತರಾಗುತ್ತೇವೆಯೋ ಆ ತಾತ್ಕಾಲಿಕ ಸುಖ ಮತ್ತು ತಾತ್ಕಾಲದಲ್ಲಿ ಅನುಭವಿಸುತ್ತಿರುವ ದುಃಖದಿಂದ ಪಡೆಯಬಹುದಾದ ತಾತ್ಕಾಲಿಕ ಉಪಶಮನ, ಇವು ನಮಗೂ ಪ್ರಾಣಿಗಳಿಗೂ ಸಮಾನವಾಗಿವೆ. ಇವಿಷ್ಟೇ ಪ್ರಯೋಜನಗಳನ್ನು ಸ್ವಪ್ರಯತ್ನದಿಂದ ಗಳಿಸಿಕೊಳ್ಳಬೇಕಾಗಿದ್ದಲ್ಲಿ ಇವುಗಳನ್ನು ಸಂಪಾದಿಸಲು ಮಾತ್ರ ನಮ್ಮ ಬುದ್ಧಿಶಕ್ತಿಯನ್ನು ವಿನಿಯೋಗಿಸಿದಲ್ಲಿ, ಪ್ರಾಣಿಗಳಿಗಿಂತಲೂ ನಾವು ಶ್ರೇಷ್ಠರೆಂದು ಹೇಳಿಕೊಳ್ಳಲಾರೆವು. ತನ್ನ ಬುದ್ಧಿಶಕ್ತಿಯಿಂದ, ಯಾವನಾದರೂ ವ್ಯಕ್ತಿ ಇತರರಿಗಿಂತ ಲೌಕಿಕವಾಗಿ ಮುಂದುವರಿದರೆ ಅಥವಾ ತನಗಿಂತಲೂ ದೊಡ್ಡದೂ ಬಲಿಷ್ಠವೂ ಆದಂತಹ ಹುಲಿ ಆನೆ ಇತ್ಯಾದಿ ಮೃಗಗಳನ್ನು ತನ್ನ ಅಂಕೆಯಲ್ಲಿಟ್ಟುಕೊಂಡರೆ, ಅದೇನು ಹೆಮ್ಮೆಯ ಅಥ'ವಾ ಜಂಬ ಕೊಚ್ಚಿಕೊಳ್ಳಬಹುದಾದ ವಿಷಯವಲ್ಲ – ಅಂತಹ ಮನುಷ್ಯನು ತನ್ನ ಮನಸ್ಸನ್ನು ಅಧೀನದಲ್ಲಿಟ್ಟುಕೊಂಡು ಪಳಗಿಸದಿದ್ದಲ್ಲಿ–ಅದೇನೂ ಹೆಮ್ಮೆಯ ವಿಷಯವಲ್ಲ.

ಅತಿಮಾನವ, ಮಾನವ ಮತ್ತು ಅರ್ಧ ಅಥವಾ ಅಪೂರ್ಣ ಮಾನವ ಮುಂತಾದ ವಿವಿಧ ಜಾತಿಯ ಜೀವಿಗಳನ್ನು ಈ ಜಗತ್ತಿನಲ್ಲಿ ನಾವು ಕಾಣುತ್ತೇವೆ. ಈ ಒಂದೊಂದು ದರ್ಜೆಯ ಜೀವಿಗಳಲ್ಲಿಯೂ ಅಸಂಖ್ಯಾತ ವೈವಿಧ್ಯಗಳಿವೆ. ಭಗವಂತನು ವಾಸ್ತವವಾಗಿ ಸರ್ವಸ್ವತಂತ್ರನು. ಈ ವೈವಿಧ್ಯಮಯ ಜಗತ್ತನ್ನು ಸೃಷ್ಟಿಸಿದುದು, ತಾನು ಇಚ್ಛೆಪಟ್ಟಿದ್ದರಿಂದ ಎಂದು ಹೇಳಬಹುದು. ಅದಕ್ಕೆ ಕಾರಣ ಕೊಡಬೇಕಾಗಿಲ್ಲ ಮತ್ತು ಕೊಡಬೇಕಾದ ಅವಶ್ಯಕತೆಯೂ ಇಲ್ಲ. ಆ ವಿವಿಧ ರೀತಿಯ ಮಾನವರಲ್ಲಿಯೂ ಅನೇಕ ದರ್ಜೆಯ ಸುಖಸಂತೋಷ, ದುಃಖ,



ಬವಣೆ, ಬುದ್ಧಿಶಕ್ತಿ ಇತ್ಯಾದಿಗಳನ್ನು ಕಾಣಬಹುದು. ಒಂದೇ ತಂದೆ ತಾಯಿಯ ಮಕ್ಕಳಲ್ಲಿ ವ್ಯತ್ಯಾಸವಿರುತ್ತದೆ; ಅವಳಿ ಮಕ್ಕಳಲ್ಲಿ ವ್ಯತ್ಯಾಸವಿರುತ್ತದೆ. ಭಗವಂತನು ತನ್ನ ಇಚ್ಛೆಯಂತೆಯೇ ಕೆಲವರನ್ನು ಸುಖಿಗಳನ್ನಾಗಿ, ಇನ್ನು ಕೆಲವರನ್ನು ದುಃಖಿಗಳನ್ನಾಗಿ, ಹಲವರನ್ನು ಬುದ್ಧಿವಂತರನ್ನಾಗಿ, ಇನ್ನು ಹಲವರನ್ನು ಮೂಢರನ್ನಾಗಿ, ಸ್ವಲ್ಪ ಜನರನ್ನು ಆರೋಗ್ಯವಂತರನ್ನಾಗಿ, ಇನ್ನು ಸ್ವಲ್ಪ ಜನರನ್ನು ರೋಗಿಗಳನ್ನಾಗಿ, ಕೆಲವರನ್ನು ಧನಿಕರನ್ನಾಗಿ, ಇನ್ನಷ್ಟು ಜನರನ್ನು ಬಡವರನ್ನಾಗಿ ಸೃಷ್ಟಿಸಿದ್ದಾನೆಂದು ನಾವು ಹೇಳಿದಲ್ಲಿ, ಆತನನ್ನು ಪಕ್ಷಪಾತಿಯೆಂದೂ ದಯಾರಹಿತನೆಂದೂ ದೋಷಾರೋಪಣೆ ಮಾಡಿದಂತಾಗುತ್ತದೆ. ದೇವರಲ್ಲಿ ನಂಬಿಕೆಯುಳ್ಳ ಯಾವನೂ ಸಹ ಇಂತಹ ಮಾತನ್ನು ಒಂದು ಕ್ಷಣವೂ ಸಹಿಸಲಾರನು. ಈ ವೈವಿಧ್ಯಮಯ ಸ್ವಭಾವ ಮತ್ತು ಅನುಭವಗಳಿಗೆ, ನೈಜವಾದ ಕಾರಣ ಆಯಾ ಜೀವಿಯ ಪೂರ್ವಜನ್ಮದ ವೈವಿಧ್ಯಮಯ ಕರ್ಮಸಂಸ್ಕಾರಗಳೇ ಆಗಿವೆ. ಆಯಾ ಕರ್ಮಫಲವನ್ನು ನಿಷ್ಪಕ್ಷಪಾತವಾಗಿ ಹಂಚುವವನು ದೇವನೇ ವಿನಾ, ಆ ವೈವಿಧ್ಯಗಳಿಗೆ ಆತ ಕಾರಣನಲ್ಲ. ಒಬ್ಬ ಅಂಚೆಯಾಳು, ಒಂದು ಮನೆಗೆ ತಲುಪಿಸಿದ ಕಾಗದದಿಂದ ಆ ಮನೆಯ ಜನ ಸಂತೋಷಭಾಜನರಾದರೆ ಅಥವಾ ಆತ ಕೊಟ್ಟ ಕಾಗದದಿಂದ ಮನೆಯವರು ದುಃಖದಲ್ಲಿ ಮುಳುಗಿದರೆ ಅವರವರ ಹರ್ಷ ದುಃಖಕ್ಕೆ ಅಂಚೆಯಾಳು ಕಾರಣನಾಗಲಾರ; ಹಾಗೆಯೇ ದೇವರೂ ಸಹ.

ಕರ್ಮಮಾಡದೆ ಸಂಪೂರ್ಣವಾಗಿ ನಿಷ್ಕ್ರಿಯವಾಗಿರಲು ಯಾರಿಂದಲೂ ಸಾಧ್ಯವಿಲ್ಲ. ಗತಜನ್ಮಗಳ ಫಲಕೊಡುವ ಅಥವಾ ಮುಂದೆ ಫಲಿಸುವಂತಹ ಹೊಸ ಹೊಸ ಕರ್ಮಗಳಲ್ಲಿ ಮಾನವನು ಉದ್ಯುಕ್ತನಾಗಿರುತ್ತಾನೆ. ಹೀಗೆ ಸರದಿಯಂತೆ ಕರ್ಮಗಳು ಮತ್ತು ಕರ್ಮಫಲವನ್ನು ಅನುಭವಿಸಲು, ಜನ್ಮಗಳು ಕೊನೆಯಿಲ್ಲದಂತೆ ಎಡಬಿಡದೆ ಸಾಗುತ್ತಿರುವುದನ್ನು ಕಾಣುತ್ತೇವೆ. ಈ ಕರ್ಮಗಳಿಗೆ ತಡೆಯೊಡ್ಡಲು ನಾವು ಸಮರ್ಥರಾಗದಿದ್ದಲ್ಲಿ, ಪ್ರಾಪಂಚಿಕ ಜೀವನವು ಆದಿಯಿಲ್ಲದುದೂ ಮತ್ತು ಸಾಧಾರಣವಾಗಿ ಅಂತ್ಯವಿಲ್ಲದುದೂ ಆಗುತ್ತದೆ. ಕರ್ಮಗಳಿಗೆ ತಡೆಹಾಕಲು ಎಂದಾದರೂ ಸಾಧ್ಯವೆ ಎಂದು ಗಂಭೀರವಾಗಿ ನಾವು ಯೋಚಿಸಬೇಕಾದ್ದು ಆವಶ್ಯಕವಲ್ಲವೆ? ಹುಟ್ಟಿದ ರೀತಿಯಲ್ಲಿಯೇ ಜೀವಿಸುವುದರಲ್ಲಿ ತೃಪ್ತರಾಗಿಬಿಟ್ಟರೆ, ಬಂಧನದಿಂದ ಬಿಡುಗಡೆ ಹೊಂದುವುದು ಹೇಗೆ? ಶಾಶ್ವತವಾದ ಆನಂದವನ್ನು ಪಡೆಯುವ ಭರವಸೆಯಾದರೂ ಏನಿದೆ ? ಇದಕ್ಕಾಗಿಯೇ ಏನು ನಾವು ಮಾನವ ಜನ್ಮವನ್ನು ಪಡೆದದ್ದು? ರೋಷಾವೇಶದಿಂದ ಬುಸುಗುಟ್ಟುತ್ತಿರುವ ಹಾವಿನ ಹೆಡೆಯ ಅಡಿಯ ನೆರಳಿನಂತೆ, ಈ ವಿಷಯಾನುಭವಗಳಲ್ಲಿ ದೊರಕುವ ಸುಖ

ಮತ್ತು ಹಿತ. ಇವುಗಳನ್ನು ಇಂದ್ರಿಯತೃಪ್ತಿಯ ಭ್ರಾಂತಿಯಲ್ಲಿ ಸಿಲುಕಿ ನಾವು ಮರೆಯುತ್ತಿದ್ದೇವೆ. ಮಾನವ ಕರ್ತವ್ಯ ಮತ್ತು ಜೀವರಾಶಿಯಲ್ಲಿ ಮಾನವನಿಗೆ ಇರುವ ಸ್ಥಾನ ಇವುಗಳನ್ನು ಮರೆತು, ಪ್ರಾಣಿಗಳಿಗೆ ಸಮಾನರಾಗುತ್ತಿದ್ದೇವೆ. ಪ್ರಾಣಿಗಳಿಗೆ ಇದು ಸರಿ, ಇದು ತಪ್ಪು ಎಂದು ಹೇಳುವ ವಿವೇಚನಾಶಕ್ತಿಯಿಲ್ಲ. ಶಾಸ್ತ್ರನಿಯಮಗಳು ಅವುಗಳಿಗೆ ಅನ್ವಯವಾಗವು ಮತ್ತು ಅವುಗಳಿಗೆ ಪಾಪದ ಸೋಂಕೂ ಇಲ್ಲ. ಆದರೆ ಮಾನವನು ತಾನು ಮಾಡುವ ಪ್ರತಿಯೊಂದು ಕೆಲಸಕ್ಕೂ ಉತ್ತರ ನೀಡಬೇಕಾಗುತ್ತದೆ ಎಂಬುದನ್ನು ಮರೆಯುತ್ತಿದ್ದೇವೆ. ಯಾರನ್ನೇ ಕೊಂದರೂ ಹುಲಿಗೆ ಯಾವ ಪ್ರಾಯಶ್ಚಿತ್ತವೂ ಇಲ್ಲ–ಅಥವಾ ಅದನ್ನು ಯಾರೂ ಕೋರ್ಟಿನಲ್ಲಿ ದಾವೆ ಹಾಕಿ ವಿಚಾರಣೆಗೆ ಗುರಿಪಡಿಸಿ ಶಿಕ್ಷಿಸುವುದಿಲ್ಲ. ಮಾನವನು ಪಾರಮಾರ್ಥಿಕ ಗುರಿಯತ್ತ ಗಮನಕೊಡದೆ ಕೇವಲ ಲೌಕಿಕ ಸುಖ  ದುಃಖಗಳಲ್ಲಿ ತೃಪ್ತನಾಗಿದ್ದಲ್ಲಿ ಮಾನವಜನ್ಮಕ್ಕಿಂತ ಪ್ರಾಣಿಜನ್ಮವನ್ನೇ ಆರಿಸಿಕೊಳ್ಳಬಹುದು. ಕೇವಲ ಇಂದ್ರಿಯಸುಖಗಳನ್ನನುಭವಿಸಲು, ಇಂತಹ ಶ್ರೇಷ್ಠ ಮತ್ತು ಉತ್ತಮ ಜನ್ಮವನ್ನು ಪಡೆಯುವ ಆವಶ್ಯಕತೆ ಇದೆಯೇ? ಇಂತಹ ಇಂದ್ರಿಯಸುಖಗಳನ್ನು ಅನುಭವಿಸಲು ಪ್ರಾಣಿಗಳು ನಮಗಿಂತಲೂ ಹೆಚ್ಚು ಅನುಕೂಲಗಳನ್ನು ಹೊಂದಿವೆ ಎಂಬುದು ವಾಸ್ತವ ಸಂಗತಿ.

ಪೂರ್ವಜನ್ಮದ ಸತ್ಕಾರ್ಯಗಳ ಫಲವಾಗಿ ಅಪರೂಪವಾದ ಅದೃಷ್ಟದಿಂದ ಈ ಮಾನವಜನ್ಮವನ್ನು ಪಡೆದಿದ್ದೇವೆ. ಇದನ್ನು ವ್ಯರ್ಥಗೊಳಿಸುವುದು ಸರಿಯೇ? ಈಗಿರುವ ಅವಕಾಶಗಳನ್ನು ತೃಣೀಕರಿಸಿ ಅಲಕ್ಷ್ಯ ಮಾಡಿದರೆ ಪುನಃ ನಾವು ಮಾನವಜನ್ಮವನ್ನೇ ಪಡೆಯುತ್ತೇವೆಂದು ಹೇಳಲು ಭರವಸೆಯಾದರೂ ಇದೆಯೇ? ಈಗ ನಿಕೃಷ್ಟ ಬುದ್ಧಿಯಿಂದ ನಾವು ಹಾಳುಮಾಡಿಕೊಂಡ ನರಜನ್ಮವನ್ನು ದೇವರು ಪುನಃ ಕೊಡುತ್ತಾನೆಂದು ನಿರೀಕ್ಷಿಸುವುದು ಯುಕ್ತವೇ?

* * * *



## ೫. ವಿಧಿನಿಯಮ ಮತ್ತು ಪುರುಷಪ್ರಯತ್ನ

ವಿಧಿನಿಯಮ ಮತ್ತು ಪುರುಷಪ್ರಯತ್ನ ಇವೆರಡೂ ಬೇರೆ ಬೇರೆಯಲ್ಲ. ಇದನ್ನು ಅರಿತರೆ ಇವೆರಡರಲ್ಲಿಯೂ ಪರಸ್ಪರ ನಡೆಯುತ್ತಿದೆಯೆಂದು ನಾವು ಭಾವಿಸಿರುವ ಮಸೆದಾಟದ ಸಮಸ್ಯೆಯೇ ಇರುವುದಿಲ್ಲ. ವಿಧಿಯೆನ್ನುವುದು ಹೊರಗಿನದಲ್ಲ. ಅದು ನಮ್ಮ ಪೂರ್ವಜನ್ಮಗಳಲ್ಲಿ ನಡೆದುಕೊಂಡ ಕರ್ಮದ ಪರಿಣಾಮಗಳ ಮೊತ್ತ. ಭಗವಂತನು ಕರ್ಮಫಲಗಳ ದಾತೃವೇ ವಿನಾ, ಆತನೇ ನಮ್ಮ ಮೇಲೆ ವಿಧಿನಿಯಮವನ್ನು ಹೊರಿಸುವುದಿಲ್ಲ. ವಿಧಿನಿಯಮವೆಂದರೆ, ಕಳೆದ ಜನ್ಮಗಳಲ್ಲಿ ನಡೆದಂತಹ ಪುರುಷಪ್ರಯತ್ನ–ಸ್ವಸಂಕಲ್ಪ. ಈ ಜನ್ಮದಲ್ಲಿ ಆಚರಿಸುತ್ತಿರುವುದನ್ನು ಮಾತ್ರ ಪುರುಷಪ್ರಯತ್ನವೆಂದು ಅದರ ವ್ಯಾಪ್ತಿಯನ್ನು ನಾವು ಮಿತಿಗೊಳಿಸಿದ್ದೇವೆ. ಅವೆರಡೂ-ವಿಧಿ ನಿಯಮ ಮತ್ತು ಸ್ವಸಂಕಲ್ಪ- ಪುರುಷ ಪ್ರಯತ್ನಗಳೇ ಆದರೂ, ಅವು ಕಾಲದ ದೃಷ್ಟಿಯಿಂದ ಪ್ರತ್ಯೇಕವಾಗಿವೆ. ವಿಧಿಯು ಗತಜನ್ಮದ ಪುರುಷಪ್ರಯತ್ನವಾದುದರಿಂದ, ನಮಗೆ ಈಗಿನ ದೃಷ್ಟಿಗೆ ಗೋಚರವಾಗದು. ಜ್ಞಾನಿಗಳಾದ ಕೆಲವು ಮಹನೀಯರಿಗೆ ಅದು ಗೋಚರವಾದರೂ ಕೂಡ ಅದನ್ನು 'ಅದೃಷ್ಟ' – 'ಕಾಣದುದು' – ಎಂದು ಕರೆಯುವುದು ಉಚಿತವಾಗಿಯೇ ಇದೆ. ಅದನ್ನು ಕುರಿತಾದ ನಮ್ಮ ಅಜ್ಞಾನವು ನಿಜವಾಗಿಯೂ ನಮಗೊಂದು ವರ. ಈ ಜನ್ಮದಲ್ಲಿ ಮಾಡುತ್ತಿರುವ ಮತ್ತು ಗತಜನ್ಮದಲ್ಲಿ ಮಾಡಿದ ಅಸಂಖ್ಯಾತ ಕರ್ಮಗಳ ಪರಿಣಾಮಗಳು ನಮಗೆ ಅರಿವಾದಲ್ಲಿ, ಅವುಗಳ ಪರಿಮಾಣ ಮತ್ತು ಬಾಹುಳ್ಯದಿಂದ ನಾವು ಸ್ತಂಭೀಭೂತರಾಗಿ ಅವುಗಳನ್ನು ಗೆಲ್ಲಲಾಗಲಿ ಅಥವಾ ಉಪಶಮನ ಮಾಡಲಾಗಲಿ ಯತ್ನಿಸದೆ ನಿರಾಶರಾಗಿ ನಿಷ್ಕ್ರಿಯರಾಗಿಬಿಡುತ್ತೇವೆ. ನಮ್ಮಲ್ಲಿ ಭರವಸೆ ತುಂಬಿ ಪ್ರಕಾಶಿಸುತ್ತಿರುವ ದೈವೀ ಕಿರಣವು, ಸ್ವಪ್ರಯತ್ನವನ್ನು ಆತ್ಮವಿಶ್ವಾಸದಿಂದ ಮುಂದುವರಿಸಲು ಸಹಾಯವೆಸಗುತ್ತಿದೆ. ಗತಕಾಲದ ಘಟನಾವಳಿಗಳನ್ನು ಕುರಿತಾದ ಮರೆವು ಮತ್ತು ಭವಿಷ್ಯತ್ತಿನಲ್ಲಿ ಶುಭನಿರೀಕ್ಷಣೆ, ಇವೆರಡೂ ದಯಾಮಯನಾದ ಭಗವಂತನು ಕರುಣಾಪೂರ್ವಕವಾಗಿ ನಮಗೆ ಇತ್ತಿರುವ ಎರಡು ವರಗಳು.

ವಿಧಿನಿಯಮವು ಮಾನವನ ಸ್ವಪ್ರಯತ್ನದಲ್ಲಿ ಅಡಚಣೆಗಳನ್ನು

ತಂದೊಡ್ಡುತ್ತದೆಯೆಂದು ಭಾವಿಸುವುದು ಸರಿಯಲ್ಲ. ಅದು ನಮ್ಮ ಯತ್ನಕ್ಕೆ ಅಡ್ಡಿ ಪಡಿಸಿದಂತೆ ಕಾಣುತ್ತಾ, ಯಶಸ್ಸುಗಳಿಸಲು ಎಷ್ಟರಮಟ್ಟಿನ ಪುರುಷಪ್ರಯತ್ನ ಆವಶ್ಯಕವೆಂಬುದನ್ನು ತೋರಿಸಿಕೊಡುತ್ತದೆ. ವಿಧಿನಿಯಮವೆಂಬುದು ನಾವೇ ಸೃಷ್ಟಿಸಿದ್ದಾದ್ದರಿಂದ, ಸ್ವಪ್ರಯತ್ನಕ್ಕಿಂತ-ಇಚ್ಛಾಶಕ್ತಿಗಿಂತ–ಅದು ಬಲಿಷ್ಠವಾಗಲು ಸಾಧ್ಯವೇ ಇಲ್ಲ. ಪುರುಷಪ್ರಯತ್ನದಲ್ಲಿ ಜಯಶೀಲರಾಗದೇ ನಾವು ಸೋತಲ್ಲಿ ಕಳೆದ ಕರ್ಮಗಳ ಪರಿಣಾಮವನ್ನು ಪ್ರತಿರೋಧಿಸಲು, ಈಗಿನ ಯತ್ನ ಸಾಕಾದಷ್ಟು ನಡೆದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ವಿಧಿನಿಯಮ ಮತ್ತು ಪುರುಷ ಪ್ರಯತ್ನಗಳು ಬೇರೆ ಬೇರೆ ಅಂಶಗಳೆಂಬ ಭಾವನೆ ಸರಿಯಾದುದಲ್ಲ. ಪ್ರಾಚೀನ ಕರ್ಮದ ತೀವ್ರತೆ ಮತ್ತು ಪ್ರಸಕ್ತ ಕರ್ಮದ ತೀವ್ರತೆ ಇವುಗಳಲ್ಲಿ ಪರಸ್ಪರ ಸಂಬಂಧವಿದೆ. ಪ್ರಾಚೀನ ಕರ್ಮವು ತೀವ್ರವಾಗಿದ್ದಲ್ಲಿ ಅದನ್ನು ಗೆಲ್ಲಲು ಪ್ರಸಕ್ತ ಕರ್ಮವೂ ಅಷ್ಟೇ ತೀವ್ರವಾಗಿರಬೇಕು. ಮರದ ಕಂಬದಿಂದ ಹೊರಕ್ಕೆ ಒಂದು ಮೊಳೆ ಕಾಣುತ್ತಿದೆಯೆನ್ನಿ. ಅದನ್ನು ಕೀಳಬೇಕಾಗಿದೆ. ಮೊಳೆಯ ಎಷ್ಟು ಭಾಗ ಒಳಗೆ ಹೊಕ್ಕಿದೆಯೆಂಬುದು ನಮಗೆ ಗೊತ್ತಿಲ್ಲ. ಅಥವಾ ಆ ಉದ್ದವನ್ನು ಹಿಡಿದಿಟ್ಟುಕೊಂಡಿರುವ ಮರವೆಂಥದು, ಆ ಮೊಳೆಯನ್ನು ಒಳಕ್ಕೆ ನುಗ್ಗಿಸಲು ಎಷ್ಟು ಏಟುಗಳು ಬೇಕಾದುವು ಮತ್ತು ಆ ಪೆಟ್ಟುಗಳು ಎಷ್ಟು ತೀಕ್ಷ್ಣವಾಗಿದ್ದುವು ಎಂಬೆಲ್ಲಾ ವಿವರಗಳು ನಮಗೆ ಗೊತ್ತಿಲ್ಲ. ಅವೆಲ್ಲವೂ ಈಗ ಅದೃಷ್ಟ ಅಂದರೆ ಕಾಣುತ್ತಿಲ್ಲ. ಇವಾವುವೂ ನಮಗೆ ಗೊತ್ತಿಲ್ಲವೆಂದು ಮೊಳೆಯನ್ನು ಕೀಳುವ ಪ್ರಯತ್ನದಿಂದ ನಾವು ವಿಮುಖರಾಗುತ್ತೇವೇನು? ಹಟ ಸಾಧಿಸಲು ಪಟ್ಟುಹಿಡಿದು ಕೀಳುವುದನ್ನು ಹೆಚ್ಚು ಹೆಚ್ಚು ತೀವ್ರಗೊಳಿಸಿ ಅನೇಕಾವರ್ತಿ ಯತ್ನಿಸುವುದಿಲ್ಲವೆ? ಜಯ ಲಭಿಸುವವರೆಗೆ ಪ್ರಯತ್ನಿಸುತ್ತಲೇ ಇರುವುದಿಲ್ಲವೇ? ಹಾಗೆಯೇ, ಗತಜನ್ಮದ ಫಲಿತಗಳನ್ನು ಗೆಲ್ಲಲು ಸಹ ಈಗ ನಾವು ಶ್ರಮಿಸಬೇಕು.

ಈ ಜಗತ್ತಿನಲ್ಲಿ ಸರಿಯಾದ ಪ್ರಯತ್ನದಿಂದ ಗೆಲ್ಲಲಾಗದುದು ಅಥವಾ ಸಾಧಿಸಲಾಗದುದು ವಾಸ್ತವವಾಗಿ ಯಾವುದೂ ಇಲ್ಲ. ಈಗ ನಾವಿರುವ ಮಟ್ಟದಿಂದ ಅಥವಾ ನಾವು ಪಡೆದಿರುವಷ್ಟೇ ಅರ್ಹತೆಯ ಮಿತಿಯಿಂದ ನಮಗೆ ಅದು ಅಸಾಧ್ಯವಾಗಬಹುದು. ನಮ್ಮ ಈಗಿನ ಯೋಗ್ಯತೆಯಷ್ಟರಲ್ಲಿಯೇ ಯಾವುದಾದರೊಂದು ನಿಶ್ಚಿತ ಗುರಿಯನ್ನು ಮುಟ್ಟಲು ಸಾಧ್ಯವೆ? ಮತ್ತು ಆ ಸಿದ್ಧಿ ಪಡೆಯಲು ಸರಿಯಾದ ಪ್ರಯತ್ನ ಯಾವುದು? ಎಂಬ ಪ್ರಶ್ನೆಗಳು ಏಳಬಹುದು. ಈ ಪ್ರಶ್ನೆಗಳಿಗೆ ಉತ್ತರಿಸುವುದೇ ನಮ್ಮ ಧರ್ಮಶಾಸ್ತ್ರಗಳ, ನ್ಯಾಯಸೂತ್ರಗಳ ಮುಖ್ಯೋದ್ದೇಶ. ಅವು ನಮ್ಮ ನಮ್ಮ ಅರ್ಹತೆ ಮತ್ತು ಯೋಗ್ಯತೆಗಳನ್ನು ವಿಶ್ಲೇಷಿಸಿ, ನಮ್ಮ ನಮ್ಮ ಗುಣ ಸ್ವಭಾವಗಳಿಗೆ ಅನುಸಾರವಾಗಿ, ನಮಗೆ ಯಾವ



ವಿಧವಾದ ಕೆಡುಕೂ ಆಗದಂತೆ ಹೇಗೆ ನಡೆದುಕೊಳ್ಳಬೇಕೆಂಬುದನ್ನು ನಿಷ್ಕರ್ಷಿಸುತ್ತವೆ. ಹೀಗೆ ನಿಯಮಿಸಲ್ಪಟ್ಟ, ನಿಯಂತ್ರಿಸಲ್ಪಟ್ಟ ಕರ್ಮವೇ ಸ್ವಧರ್ಮ, ಆಯಾ ವ್ಯಕ್ತಿಯೇ ನಿರ್ವಹಿಸಬೇಕಾದ ಕರ್ತವ್ಯ. ಅಂತಹ ನಿಯಂತ್ರಣದಿಂದ ಧರ್ಮವು ಮಾನವನ ಸ್ವಸಂಕಲ್ಪಕ್ಕೆ–ಇಚ್ಛಾಶಕ್ತಿಗೆ–ಪ್ರಯತ್ನಕ್ಕೆ ನಿರ್ಬಂಧ ಉಂಟುಮಾಡುವುದಿಲ್ಲ. ಅದು ಮಾನವನನ್ನು ಅವನ ಪಾಡಿಗೆ ಅವರನ್ನು ಬಿಡುವುದಲ್ಲದೆ, ಯಾವುದು ಕೆಡುಕುಂಟುಮಾಡುತ್ತದೆ ಮತ್ತು ಯಾವುದು ಅಸಾಧ್ಯ ಎಂಬುದನ್ನು ತಿಳಿಸುತ್ತದೆ. ಈ ಉಪದೇಶಗಳಿಂದ ಉಪಯೋಗ ಪಡೆದುಕೊಳ್ಳುವುದೂ ಅಥವಾ ಅವುಗಳಂತೆ ನಡೆಯದೆ ನಷ್ಟಮಾಡಿಕೊಳ್ಳುವುದೂ ಸಂಪೂರ್ಣವಾಗಿ ಮಾನವನದೇ ಆದ ಜವಾಬ್ದಾರಿ.

ಯಾವುದಾದರೂ ಒಂದು ನಿರ್ದಿಷ್ಟ ಕೆಲಸ ಮಾಡುವುದು ತಪ್ಪೆಂದು ಗೊತ್ತಿದ್ದರೂ ಎಷ್ಟೋ ಸಲ ಆ ಕೆಲಸವನ್ನು ಮಾಡಬೇಕೆನ್ನಿಸುತ್ತದೆ. ಹಾಗೆಯೇ ಮತ್ತೊಂದು ಕೆಲಸ ಸರಿಯೆನ್ನಿಸಿದರೂ ನಮ್ಮಿಂದ ಮಾಡಲಾಗುವುದಿಲ್ಲ. ನಮ್ಮ ಮನಶ್ಶಕ್ತಿಗಿಂತ ಮಿಗಿಲಾದ ಯಾವುದೋ ಶಕ್ತಿಯಿದೆಯೆಂದು, ಇದರಿಂದ ನಮಗೆ ಗೋಚರವಾಗುತ್ತದೆ. ನಮ್ಮ ಇಚ್ಛಾಶಕ್ತಿಯ ವಿರುದ್ಧ ವರ್ತಿಸುವಂತೆ ಪ್ರೇರಿಸುವ ಈ ಶಕ್ತಿಯನ್ನು ವಿಧಿನಿಯಮವೆಂದು ನಾವು ತಪ್ಪಾಗಿ ಗ್ರಹಿಸಬಾರದು. ಒಂದು ಯಂತ್ರಸಲಕರಣೆಯನ್ನು ಉಪಯೋಗಿಸುವ ಚಳಕ ಮತ್ತು ಕೌಶಲವು ಅದನ್ನು ಹೆಚ್ಚು ಹೆಚ್ಚು ಉಪಯೋಗಿಸಿದಷ್ಟೂ ಅಧಿಕವಾಗುವುದು. ಹಾಗೆಯೇ ಯಾವುದಾದರೂ ಒಂದು ಭೋಗದಿಂದಾದ ಮನಸ್ಸಿನ ಮೇಲಿನ ಪರಿಣಾಮವು ಅದೇ ರೀತಿಯ ಭೋಗವನ್ನು ಮತ್ತೆ ಮತ್ತೆ ಪಡೆಯಬೇಕೆಂಬ ಚಟ-ಅಭಿರುಚಿಯನ್ನುಂಟುಮಾಡುತ್ತದೆ. ಈ ರೀತಿ ಉಳಿದುಕೊಂಡ ಅನುಭವದ ಪ್ರಭಾವ ಅಥವಾ ಅಭಿರುಚಿಯು 'ವಾಸನೆ' ಎಂದು ಕರೆಯಲ್ಪಡುತ್ತದೆ. ಪೂರ್ವಕರ್ಮಗಳಿಂದಾದ ಭಿನ್ನ ಫಲಿತಾಂಶವೇ ಇದಾಗಿದ್ದರೂ, ವಿಧಿನಿಯಮಕ್ಕಿಂತ ಬೇರೆಯಾದುದು. ಸತ್ಕರ್ಮ ಅಥವಾ ದುಷ್ಕರ್ಮಗಳಿಗೆ ಅನುಗುಣವಾಗಿ ಸುಖ ದುಃಖ ರೂಪವಾಗಿ ದೊರಕುವ ಫಲ ಅಥವಾ ಶಿಕ್ಷೆ; ಇವಿಷ್ಟೇ ವಿಧಿನಿಯಮ ಅಥವಾ ಅದೃಷ್ಟದ ವ್ಯಾಪ್ತಿಗೆ ಒಳಪಟ್ಟಿದ್ದು. ಈ 'ವಾಸನೆ'ಯೂ ಸಹ ನಮ್ಮ ಸ್ವಕ್ರಿಯಾ ಪರಿಣಾಮವಾದ್ದರಿಂದ, ಅದೂ ಸಹ ನಮ್ಮ ಇಚ್ಛಾಶಕ್ತಿಗಿಂತ ಪ್ರಬಲವಾಗಲಾರದು. ನಮ್ಮ ಇಚ್ಛಾಶಕ್ತಿಯನ್ನು ಸರಿಯಾಗಿ ಉಪಯೋಗಿಸಿದಲ್ಲಿ ಅದನ್ನೂ 'ವಾಸನಾ' ವನ್ನೂ ಹಿಡಿತದಲ್ಲಿ ಇಟ್ಟುಕೊಳ್ಳಬಹುದು. ಯಾವ 'ವಾಸನಾ'ಗಳು ಒಳ್ಳೆಯವು ಪೋಷಣಾರ್ಹ ಮತ್ತು ಯಾವುವು ಕೆಟ್ಟವು, ದಮನಾರ್ಹ ಎಂಬುದನ್ನು ಶಾಸ್ತ್ರಗಳು ವಿವರವಾಗಿ ನಿರೂಪಿಸಿವೆ. ನಮ್ಮ

ಮನಸ್ಸಿನಲ್ಲಿ ಅಡಗಿರುವ ವಾಸನೆಗಳು ನಡೆನುಡಿಗಳಲ್ಲಿ ವ್ಯಕ್ತವಾಗುವುದರಿಂದ ಆಯಾ ಅಭಿರುಚಿಗನುಗುಣವಾದ ಕಾರ್ಯಗಳಲ್ಲಿ ನಮ್ಮನ್ನು ಪ್ರಚೋದಿಸುತ್ತವೆ. ಅದರಿಂದ ಅವುಗಳ ಸುಳಿವು ನಮಗೆ ಅರಿವಾಗಿರುತ್ತದೆ. ಆದುದರಿಂದ ನಾವು ವಾಸನೆಗಳ ದಾಸರೆಂದು ಹೇಳಿಕೊಳ್ಳಲಾರೆವು. ಅವುಗಳನ್ನು ಪ್ರೋತ್ಸಾಹಿಸುವ ಅಥವಾ ನಿಗ್ರಹಿಸುವ ಹೊಣೆ ನಮಗೇ ಸೇರಿದ್ದು. ಆದ್ದರಿಂದ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಬೇಕಾದುದು ನಮ್ಮ ಕರ್ತವ್ಯ.

ವಿಧಿನಿಯಮ ಅಥವಾ ಇಚ್ಛಾಶಕ್ತಿಯು ನೋವು ಅಥವಾ ನಲಿವುಗಳನ್ನು ನಮಗೆ ಕೊಡುವಷ್ಟು ಹೊಣೆಯನ್ನು ಹೊಂದಿರುವುದೇ ವಿನಾ ಪ್ರಸಕ್ತ ಜನ್ಮದಲ್ಲಿನ ಇಚ್ಛಾಶಕ್ತಿಗೆ, ಸ್ವಸಂಕಲ್ಪಕ್ಕೆ, ನಾವು ಮಾಡಬಹುದಾದ ಒಳಿತು ಕೆಡುಕಿನ ಯತ್ನಗಳಿಗೆ ಅಡಚಣೆಯನ್ನು ಉಂಟುಮಾಡದು ಎಂದು ಇದರಿಂದ ಸ್ಪಷ್ಟವಾಗುತ್ತದೆ.

ಕರ್ಮವಾದದಲ್ಲಿ ನಮಗೆ ಪ್ರಾಮಾಣಿಕವಾದ ನಂಬಿಕೆಯಿದ್ದರೆ, ಸುಖ ದುಃಖಗಳು ಪ್ರಾಚೀನ ಕರ್ಮಗಳ ಫಲಿತಾಂಶಗಳೆಂದು ನಾವು ತಿಳಿದಿದ್ದಲ್ಲಿ ಯಾವ ವಿಧವಾದ ಇಚ್ಛೆ ಅಥವಾ ಪ್ರಯತ್ನವೂ ಇಲ್ಲದೆ, ದುಃಖಪ್ರಾಪ್ತಿಯಾಗುತ್ತದೆ ಎಂದಿಟ್ಟುಕೊಳ್ಳೋಣ. ಆಗ ಸುಖಕ್ಕಾಗಿ ನಾವೇಕೆ ಕಾತರಿಸಬೇಕು? ಮತ್ತು ಯತ್ನಪಡಬೇಕು? ನಮ್ಮ ಪ್ರಾಚೀನ ಕರ್ಮಗಳಿಂದ ಯೋಗ್ಯ ಅರ್ಹತೆಯನ್ನು ಪಡೆದಿದ್ದಲ್ಲಿ ಸುಖವೆನ್ನುವುದು ತಂತಾನೇ ಬರಲಾರದೆ? ಇದಕ್ಕೆ ತಕ್ಕ ಯೋಗ್ಯ ಅರ್ಹತೆಯನ್ನು ಪಡೆಯದಿದ್ದಲ್ಲಿ ಎಷ್ಟೇ ಯತ್ನ ಮಾಡಿದರೂ ನಮಗೆ ಸುಖ ದೊರಕುವ ಸಂಭವವುಂಟೆ ? ಈ ವ್ಯರ್ಥಪ್ರಯತ್ನದಲ್ಲಿ ಸುಖವನ್ನು ಪಡೆಯುವುದರಲ್ಲಿ ನಮ್ಮ ಕಾಲ ಮತ್ತು ಶಕ್ತಿಯನ್ನೇಕೆ ವಿನಿಯೋಗ ಮಾಡಬೇಕು? ಒಳ್ಳೆಯ ಮತ್ತು ಶ್ರೇಷ್ಠವಾದ ಜೀವನವನ್ನು ಉತ್ತಮವಾದ ಲೋಕಗಳಲ್ಲಿ ಮುಂದೆ ಅನುಭವಿಸುವುದಕ್ಕಾಗಿ ಅಥವಾ ಅದಕ್ಕೂ ಶ್ರೇಷ್ಠತಮ ಧ್ಯೇಯವಾದ ಪುನರ್ಜನ್ಮವನ್ನೇ ತಪ್ಪಿಸಿಕೊಳ್ಳುವುದಕ್ಕಾಗಿ, ಪುಣ್ಯಸಂಗ್ರಹಕ್ಕಾಗಿ ನಮ್ಮ ಅವಕಾಶ, ಕಾಲ ಮತ್ತು ಶಕ್ತಿಯನ್ನು ಬಳಸಬೇಕು.

* * * *



## ೬. ಪರಮಮಿತ್ರ

ಒಬ್ಬ ವ್ಯಕ್ತಿಯು ದಾರಿದ್ರ್ಯದಲ್ಲಿ ತೊಳಲಾಡುತ್ತಿದ್ದಾಗ ಆತನಿಗೆ ಯಾವ ವಿಧದಲ್ಲಿಯೂ ಬಾಂಧವ್ಯವಿರದಂತಹ ಯಾವನೋ ವ್ಯಕ್ತಿಯು ಶ್ರೀಮಂತಿಕೆಯಲ್ಲಿ ಮುಳುಗಿ ತೇಲಾಡುತ್ತಿದ್ದಾನೆಂದರೆ, ಆ ಬಡವನಿಗೆ ಏನಾದರೂ ಉಪಯೋಗವಾಗುತ್ತದೆಯೇ? ತದ್ವಿರುದ್ಧವಾಗಿ ಆ ವಿಷಯ ಆತನ ಬಡತನದ ಬೇಗೆಯನ್ನು ಹೆಚ್ಚು ತೀಕ್ಷ್ಣಗೊಳಿಸಿ, ಆತನ ದುಃಖವನ್ನು ತೀವ್ರಗೊಳಿಸಬಹುದು. ಒಂದು ತುತ್ತು ಅನ್ನವನ್ನು ತಿಂದು ಜೀರ್ಣಿಸಿಕೊಳ್ಳದ ವ್ಯಕ್ತಿಯು ಚೊಕ್ಕ ಭೋಜನ ಮಾಡುವ ಇನ್ನೊಬ್ಬನ ವಿಷಯ ಕೇಳಿದಾಗ, ತನ್ನ ನೋವನ್ನು ಇನ್ನೂ ಹೆಚ್ಚಾಗಿ ಅನುಭವಿಸುತ್ತಾನೆ. ಒಬ್ಬ ದುಃಖಿಯು ತನ್ನಷ್ಟೇ ದುಃಖಿಯಾದ ಇನ್ನೊಬ್ಬನನ್ನು ಕಂಡಾಗ ಆತನಿಗೆ ತನ್ನ ದುಃಖದ ಒತ್ತಡ ಕಡಿಮೆಯಾಗಬಹುದು. ಆ ಇನ್ನೊಬ್ಬನು ತನಗಿಂತ ಹೆಚ್ಚು ದುಃಖಿಯಾದರೆ ತಾನು ಅವನಿಗಿಂತ ಎಷ್ಟೋ ಸುಖಿಯೆಂದುಕೊಂಡು ಸಂತೋಷವನ್ನು ಅನುಭವಿಸಬಹುದು. ದುಃಖದಲ್ಲಿರುವ ಒಬ್ಬ ವ್ಯಕ್ತಿಗೆ ಸುಖದಲ್ಲಿರುವ ಇನ್ನೊಬ್ಬನನ್ನು ಕಂಡಾಗ ಯಾವ ಸಮಾಧಾನವೂ ಆಗದು. ಅಲ್ಪ ತಿಳುವಳಿಕೆಯ, ಅಲ್ಪಶಕ್ತಿಯ, ಮಿತಬುದ್ಧಿಯುಳ್ಳ, ಸುಖವನ್ನೇ ಕಂಡರಿಯದ, ಅಲ್ಪಜೀವರುಗಳಾದ ನಾವು ಸರ್ವಜ್ಞನೂ, ಸರ್ವಶಕ್ತನೂ, ಅನಂತನೂ ಶಾಂತಿಪೂರ್ಣನೂ ಆದ ಭಗವಂತ ಒಬ್ಬನಿರುವನೆಂದು ತಿಳಿದುಕೊಳ್ಳುವುದರಲ್ಲಿ ಏನು ಪ್ರಯೋಜನ? ಅಂತಹ ತಿಳುವಳಿಕೆಯು ನಮ್ಮ ಅಲ್ಪತೆಯನ್ನೂ ನಿಸ್ಸಹಾಯಕತೆಯನ್ನೂ ಎತ್ತಿ ತೋರಿಸುತ್ತದೆ. ಆದ್ದರಿಂದ ದೇವರನ್ನು ಕುರಿತು ಪೂರ್ಣ ಅಲಕ್ಷ್ಯದಿಂದಿರುವುದೇ ಹೆಚ್ಚು ವಿವೇಕವೆಂದು ಕೊಳ್ಳುವುದು ಅನೇಕರಿಗೆ ಸರಿಯೆನ್ನಿಸಬಹುದು.

ಒಬ್ಬ ವ್ಯಕ್ತಿಯು ತಾನು ತೀರ ಬಡವನಾಗಿದ್ದು ಕಷ್ಟ ಪರಿಸ್ಥಿತಿಯಲ್ಲಿದ್ದರೂ ತನ್ನ ಮಗನೋ ಆಪ್ತ ಬಂಧುವೋ ಅಥವಾ ಸ್ನೇಹಿತನೋ ಹಿರಿಯ ಅಧಿಕಾರದಲ್ಲಿದ್ದು, ಧನವಂತನಾಗಿಯೋ ಅಥವಾ ಪ್ರಸಿದ್ಧಿಯನ್ನೋ ಹೊಂದಿದ್ದರೆ, ಅದನ್ನು ತಿಳಿದು ಬಡವನಾಗಿರುವ ವ್ಯಕ್ತಿ ಸಂತೋಷಪಡುತ್ತಾನೆ. ಆ ಬಂಧು ಅಥವಾ ಸ್ನೇಹಿತನು ತನ್ನ ವಿಷಯದಲ್ಲಿ ಗಾಢ ವಿಶ್ವಾಸವನ್ನು ತಳೆದಿದ್ದಾನೆಂದು

ತಿಳಿದಲ್ಲಿ, ತನ್ನ ಯೋಗಕ್ಷೇಮದಲ್ಲಿ ಆಸಕ್ತನಾಗಿದ್ದು ಸಹಾಯವೆಸಗಲು ಸದಾ ಸಿದ್ಧನಾಗಿ ಅನತಿದೂರನಾಗಿ ಸಮೀಪದಲ್ಲಿಯೇ ಇರುವನೆಂದೂ ತಿಳಿದಾಗ ಆ ಬಡವ ಇನ್ನೂ ಹೆಚ್ಚಾಗಿ ಹರ್ಷಭಾಜನನಾಗುತ್ತಾನೆ. ಭಗವಂತನನ್ನು ಅಂತಹ ಪರಮ ಮಿತ್ರನೆಂದು ಶಾಸ್ತ್ರಗಳು ನಿರೂಪಿಸುತ್ತವೆ.

ಪ್ರತಿ ಕ್ಷಣದಲ್ಲಿಯೂ ಅಸಂಖ್ಯಾತವಾದ ಉಪಾಧಿಗಳಾದ ದುಃಖ ದಾರಿದ್ರ್ಯ ರೋಗರುಜಿನಾದಿಗಳು ನಮಗೆ ಈ ಬಾಧೆಯನ್ನುಂಟುಮಾಡುತ್ತವೆ. ಅಂತಹ ಯಾವ ಉಪಾಧಿಯೂ ಇಲ್ಲದ ವ್ಯಕ್ತಿಯೊಬ್ಬ, ನಮ್ಮ ಕಷ್ಟಸಮಯದಲ್ಲಿ ಸಹಾಯಕ್ಕೆ ಬರಲು ಸಿದ್ಧನಾಗಿ ಬಳಿಯಲ್ಲೇ ಇದ್ದಾನೆಂದರೆ ನಮಗೆಷ್ಟೋ ಸಮಾಧಾನವಾಗುವುದಿಲ್ಲವೇ? ಇನ್ನು, ಆ ವ್ಯಕ್ತಿ ಹೇಗಿರಬೇಕು? ನಾವು ಅನುಭವಿಸಬೇಕಾದ ಕಷ್ಟಗಳು ಅನಂತವಾಗಿರುವುದರಿಂದ ಆ ಎಲ್ಲಾ ಕಷ್ಟಗಳಿಂದಲೂ ಬಿಡುಗಡೆಹೊಂದಿದವನಾಗಿದ್ದು, ಅವೆಲ್ಲವುಗಳಿಂದ ನಮಗೂ ಬಿಡುಗಡೆಯನ್ನು ದೊರಕಿಸುವಂತವನಾಗಿರಬೇಕು ಆ ವ್ಯಕ್ತಿ. ಕಷ್ಟಗಳಿಂದ ಬಿಡುಗಡೆಯಷ್ಟೇ ನಮಗೆ ತೃಪ್ತಿ ತರುವುದಿಲ್ಲ. ನಮ್ಮ ಆಸೆ ಆಕಾಂಕ್ಷೆಗಳೂ ನೆರವೇರಬೇಕು. ನಮ್ಮ ಆಶೋತ್ತರಗಳು ಸಂಖ್ಯೆಯಲ್ಲೂ ವೈವಿಧ್ಯದಲ್ಲೂ ಅನಂತವಾಗಿವೆ. ಆ ವ್ಯಕ್ತಿಯು ಆತ್ಮತೃಪ್ತನಾಗಿದ್ದು ನಮ್ಮ ಎಲ್ಲಾ ಕೋರಿಕೆಗಳನ್ನೂ ಈಡೇರಿರುವಂತವನಾಗಿರಬೇಕು. ನಮ್ಮ ಕಷ್ಟಪರಿಹಾರವನ್ನು ಮತ್ತು ಇಷ್ಟಪೂರ್ತಿಯನ್ನು, ಯಾವುದೋ ಹಲವು ಸನ್ನಿವೇಶ ಸಂದರ್ಭಗಳಲ್ಲಿ ಮಾತ್ರ ಮಾಡಿದರೆ ಸಾಲದು ಅಥವಾ ನಾವು ಸಹಾಯ ಬೇಡಿದಾಗ ಮಾತ್ರ ಅದನ್ನು ನೆರವೇರಿಸಿದರೆ ಸಾಲದು. ಆತ ನಮಗೆ ಸಹಾಯ ಮಾಡಲು ಸಿದ್ಧನಾಗಿದ್ದರಷ್ಟೇ ಸಾಲದು. ಆ ಸಹಾಯವನ್ನು ಎಲ್ಲ ಸಮಯ ಸನ್ನಿವೇಶದಲ್ಲಿಯೂ ಕೊಡಲು ಸಿದ್ಧನಾಗಿದ್ದು ನಮ್ಮೆಲ್ಲಾ ಆಶೋತ್ತರಗಳನ್ನೂ ಈಡೇರಿಸಲು ಶಕ್ತನಾಗಿದ್ದು, ಸರ್ವಕಷ್ಟಗಳಿಂದಲೂ ನಮ್ಮನ್ನು ಮುಕ್ತರನ್ನಾಗಿ ಮಾಡುವಂಥವನಾಗಿರಬೇಕು. ಆತ ಸರ್ವವ್ಯಾಪಿಯೂ, ಸರ್ವಜ್ಞನೂ, ಸರ್ವಶಕ್ತನೂ ಆಗಿರಬೇಕು. ಅಂತಹ ವ್ಯಕ್ತಿಯನ್ನು ನಮಗಿರುವ ಅಲ್ಪಬುದ್ಧಿಯ ಮಿತಿಯಿಂದ ಊಹಿಸಿಕೊಳ್ಳುವುದು ಕೂಡ ನಮಗೆ ಅಸಾಧ್ಯ. ಇದರಲ್ಲಿ ಯಾವ ಸಂದೇಹವೂ ಇರಲಾರದು. ಆದರೆ ನಮಗೆ ಆಪ್ತನೂ, ನಮ್ಮ ಹಿತದಲ್ಲಿ ಆಸಕ್ತನೂ ಆದ ಗೆಳೆಯನೊಬ್ಬನು, ನಮ್ಮಲ್ಲಿ ಬಂದು, ನಮಗೆ ಸರ್ವಸಹಾಯವನ್ನೂ ಮಾಡುವಂತಹ ಪುರುಷನೋರ್ವನಿದ್ದಾನೆಂದು ಭರವಸೆಯಿತ್ತುದೇ ಆದಲ್ಲಿ, ನಾವು ಆ ಗೆಳೆಯನಿಗೆ ಅತ್ಯಂತ ಕೃತಜ್ಞರಾಗಿರಬೇಕು. ನಮ್ಮ ಬುದ್ಧಿಶಕ್ತಿಯ ವ್ಯಾಪ್ತಿ ಮಿತಿಯುಳ್ಳದಾದ್ದರಿಂದ ಆತನ ನುಡಿಯ ನೈಜತೆಯನ್ನು ಅಪ್ರಮಾಣವೆಂದು



ತಳ್ಳಿಹಾಕಲಾಗುವುದಿಲ್ಲ. ವೇದವೇ ಅಂತಹ ಶ್ರೇಷ್ಠ ಉಪದೇಶ ನೀಡುತ್ತದೆ; ಮತ್ತು ಭಗವಂತನೇ ಅಂತಹ ಪರಮಮಿತ್ರ. ಅಂತಹ ಮಹಾನ್ ವ್ಯಕ್ತಿಯ ಇರುವಿಕೆಯನ್ನು ತಾರ್ಕಿಕವಾಗಿಯಾಗಲಿ, ಪ್ರಾಯೋಗಿಕವಾಗಿಯಾಗಲಿ, ಆಂತರಿಕಸ್ಫೂರ್ತಿಗೆ ಕಾಯದೆ ಸಾಧಿಸಬಹುದೆ ಎಂಬುದು ಒತ್ತಟ್ಟಿಗಿರಲಿ, ಅಂತಹ ವ್ಯಕ್ತಿಯೊಬ್ಬನಿದ್ದಾನೆಂದು ನಂಬಿದರೆ ಸಾಕು, ನಮಗೆ ಎಷ್ಟೋ ಸಮಾಧಾನದ ಅನುಭವವುಂಟಾಗುತ್ತದೆ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಆ ರೀತಿ ದೃಢನಂಬುಗೆ ಇದ್ದಾತನಿಗೆ, ಸರ್ವಜ್ಞನೂ ಸರ್ವಶಕ್ತನೂ ಆದ ಮಹಾಪುರುಷನು ದುಃಖದಿಂದ ಬಿಡುಗಡೆ ದೊರಕಿಸುತ್ತಾನೆಂಬ ನಂಬಿಕೆಯಿರುವುದರಿಂದ ನಿರಾಶೆಯಾಗದು. ನನಗೆ ದುಃಖದಿಂದ ಪರಿಹಾರ ದೊರಕದಿದ್ದಾಗಲೂ, ಎಲ್ಲವನ್ನೂ ತಿಳಿದ ಮಹಾನ್ ವ್ಯಕ್ತಿಯ ಇಚ್ಛೆಯಂತೆ ಆ ಸಮಯ ಸನ್ನಿವೇಶಗಳಲ್ಲಿ ದುಃಖಕ್ಕೆ ತಾನು ಭಾಜನನೆಂದುಕೊಂಡು ಸಮಾಧಾನ ಮಾಡಿಕೊಳ್ಳುತ್ತಾನೆ. ಆ ಮಹಾವ್ಯಕ್ತಿಯು ಸದಾ ನಮ್ಮ ಬಳಿ ಇದ್ದಾನೆಂಬ ಭಾವನೆಯೇ ನಮಗೆ ಶಾಂತಿದಾಯಕವಾಗಿರುತ್ತದೆ. ಅವನ ಇರುವಿಕೆಯ ಬಗ್ಗೆ ನಂಬಿಕೆ ಮೂಡಿ ಅದು ಮನಸ್ಸಿನಲ್ಲಿ ನಾಟಿದರೆ, ಅಲ್ಲಿಯವರೆಗೂ ಅನುಭವಿಸದಿದ್ದ ಆನಂದವನ್ನು ಅನುಭವಿಸಲು ಆರಂಭಿಸುತ್ತೇವೆ.

ಭಗವಂತನ ಮತ್ತು ನಮ್ಮ ಸಂಬಂಧವನ್ನು ಅನೇಕ ರೀತಿಗಳಲ್ಲಿ ಕಲ್ಪಿಸಿಕೊಳ್ಳಬಹುದು. ಒಬ್ಬ ಬಡ ಬಾಲಕನು, ತನ್ನ ಗ್ರಾಮದಲ್ಲಿರುವ ಧನಿಕನೂ ಧರ್ಮಿಷ್ಠನೂ ಆದ ಜಮೀನುದಾರನ ಆಶ್ರಯವನ್ನು ಪಡೆಯಲು ಕಾತುರನಾಗಿರುತ್ತಾನೆಂದುಕೊಳ್ಳೋಣ. ಆಗ ಆತನು ಆ ಮನೆಯಲ್ಲಿ ಕೆಲಸಕ್ಕೆ ಸೇರಿ, ಪ್ರಾಮಾಣಿಕತೆ ಮತ್ತು ದಕ್ಷತೆಯಿಂದ ಕೆಲಸ ಮಾಡಿ ಆ ಯಜಮಾನನ ವಿಶ್ವಾಸವನ್ನು ಗಳಿಸಬೇಕು. ಬಾಲಕನು ಕೇವಲ ಸಂಬಳಕ್ಕಾಗಿ ಮಾತ್ರವೇ ಕೆಲಸ ಮಾಡುತ್ತಿದ್ದಾನೆ; ಅಭಿಮಾನಪೂರ್ವಕವಾಗಿಯಲ್ಲ ಎಂಬುದು ಮನವರಿಕೆಯಾದರೆ ಕೆಲಸ ತೆಗೆದುಕೊಳ್ಳುವುದರಲ್ಲಿ ಯಜಮಾನನು ಹೆಚ್ಚು ಬಿಗಿಯಾಗುತ್ತಾನೆ. ಸೇವಕನ ಯೋಗಕ್ಷೇಮದಲ್ಲಿ ಲಕ್ಷ್ಯವಿಡುವುದಿಲ್ಲ. ಬಾಲಕನು ತನ್ನಲ್ಲಿ ಪ್ರೀತಿ ಗೌರವವನ್ನು ಹೊಂದಿದ್ದಾನೆಂದು ತಿಳಿದರೆ ಆತನು–ಯಜಮಾನನು–ಮರುವಿಶ್ವಾಸವನ್ನು ವ್ಯಕ್ತಪಡಿಸುವುದಷ್ಟೇ ಅಲ್ಲದೆ, ಕೇಳದಿದ್ದರೂ ಎಲ್ಲ ಸೌಲಭ್ಯಗಳನ್ನೂ ಸ್ವಪ್ರೇರಣೆಯಿಂದಲೇ ಕಲ್ಪಿಸಿಕೊಡುತ್ತಾನೆ.

ಆ ಶ್ರೀಮಂತನಿಗೆ ಸಂತತಿಯಿಲ್ಲದೆ ಯಾರನ್ನಾದರೂ ದತ್ತು ತೆಗೆದುಕೊಳ್ಳುವ ಉದ್ದೇಶವಿದ್ದಲ್ಲಿ ಆತನ ಮೊದಲ ಯೋಚನೆ ಪ್ರಾಮಾಣಿಕತೆಯಿಂದ ದುಡಿಯುತ್ತಿರುವ ಆ ಬಾಲಕನತ್ತ ಸ್ವಾಭಾವಿಕವಾಗಿ ಹೊರಳುತ್ತದೆ. ಆತ

ಆ ಬಾಲಕನನ್ನು ದತ್ತು ತೆಗೆದುಕೊಂಡಾಗ, ಅವನು ಸೇವಕನಾಗಿರದೆ ಮಗನಾಗಿ ಕುಟುಂಬಕ್ಕೆ ಸೇರಿದವನಾಗಿಬಿಡುತ್ತಾನೆ. ಅಂದಿನಿಂದ ಆಬಾಲಕ ಸಲ್ಲಿಸುವ ಸೇವೆ ಮನೆಯ ಯಜಮಾನನಿಗೋಸ್ಕರವಲ್ಲ, ತಾನು ಸೇರಿದ ಇಡೀ ಕುಟುಂಬಕ್ಕೆ. ಆತನು ಕುಟುಂಬದ ಎಲ್ಲ ಹೊಣೆಯನ್ನೂ ದಕ್ಷತೆಯಿಂದ ನಿರ್ವಹಿಸುತ್ತಾನೆಂದು ಶ್ರೀಮಂತನಿಗೆ ಮನವರಿಕೆಯಾದಾಗ, ಎಲ್ಲ ವ್ಯವಹಾರಗಳನ್ನೂ ಅವನ ಸ್ವತಂತ್ರ ಆಡಳಿತಕ್ಕೇ ಬಿಟ್ಟು, ತಾನು ಅವನ ಕೈಕೆಳಗಿನವನಂತೆ ಇದ್ದುಬಿಡುತ್ತಾನೆ. ಆಸ್ತಿಪಾಸ್ತಿಯ ಕಾಗದಪತ್ರ ತನ್ನ ಹೆಸರಿನಲ್ಲಿಯೇ ಇದ್ದರೂ ಸಹ, ಎಂದಾದರೂ ಒಂದು ದಿನ ಪರಸ್ಪರ ಪ್ರೀತಿವಿಶ್ವಾಸಗಳು ಆಗಾಧವಾದಾಗ ಶ್ರೀಮಂತನು ಹೃತ್ಪೂರ್ವಕವಾಗಿ ಕಾಗದಪತ್ರಗಳನ್ನು ತನ್ನ ಮಗನ ಹೆಸರಿಗೇ ಮಾಡಿ, ತಾನು ನಿರ್ಲಿಪ್ತನಾಗಿ ವಿಶ್ರಾಂತಿ ಸುಖವನ್ನು ಅನುಭವಿಸುತ್ತ ಇದ್ದುಬಿಡುತ್ತಾನೆ. ಆಗ ತರುಣನೇ ಮನೆಯ ಒಡೆಯನಾಗುತ್ತಾನೆ.

ಬಾಲಕ ಪರಕೀಯನಾಗಿದ್ದು ವಿಧೇಯತೆಯಿಂದ ಸೇವಕನಾಗಿ ಕೆಲಸಮಾಡುವುದು ಮೊದಲ ಹಂತ. ಎರಡನೆಯದಾಗಿ ದತ್ತುಸ್ವೀಕಾರದ ಅನಂತರ ಒಡೆಯನ ಪ್ರೀತಿಪಾತ್ರನಾದ ಮಗನಾಗಿರುವುದು. ಮೂರನೆಯದಾಗಿ ತಾನೇ ಒಡೆಯನಾಗುವುದು. ಹೀಗೆ ಮೂರು ಘಟ್ಟಗಳನ್ನು ಕಾಣುತ್ತೇವೆ. ನಾವು ಭಗವಂತನ ಸಂಬಂಧವನ್ನು ಈ ರೀತಿಯಲ್ಲಿ ಇಟ್ಟುಕೊಳ್ಳಬೇಕೆಂದು ಶಾಸ್ತ್ರಗಳು ಇಚ್ಛಿಸುತ್ತವೆ. ದೇವರನ್ನು ಒಡೆಯನಂತೆ ಪ್ರೀತಿಸಿ, ಭಾವಿಸಿ,ಆತನ ಆಜ್ಞಾನುವರ್ತಿಗಳಾಗಿ ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ಪ್ರಾಮಾಣಿಕತೆಯಿಂದ ಸೇವಿಸಬೇಕು. ಇದೇ ಕರ್ಮ ಅಥವಾ ಕ್ರಿಯಾ ಯೋಗ. ದೇವರ ಸಾಮೀಪ್ಯವನ್ನು ಗಳಿಸಿ, ಆತನ ಪವಿತ್ರ ಪ್ರೇಮವನ್ನು ಸಂಪಾದಿಸಿ ಆತನ ಅನ್ಯೋನ್ಯ ಭಾಗವೇ ಆಗಿಬಿಟ್ಟರೆ ಅದೇ ಭಕ್ತಿ ಅಥವಾ ಪ್ರೇಮ ಮಾರ್ಗವಾಗುತ್ತದೆ. ಪ್ರತ್ಯೇಕತೆಯ ಭಾವನೆಯನ್ನೆಲ್ಲಾ ಕಳೆದುಕೊಂಡು ಆತನಲ್ಲಿ ಏಕತೆಯನ್ನು ಸಾಧಿಸಿಕೊಂಡರೆ ನಾವು ಜ್ಞಾನಮಾರ್ಗವನ್ನು ಪರಿಕ್ರಮಣ ಮಾಡಿದಂತಾಗುತ್ತದೆ.

ಪ್ರತ್ಯೇಕತೆ ಅಥವಾ ದ್ವೈತಭಾವನೆಯು ನಮ್ಮಲ್ಲಿ ಇರುವವರೆಗೆ, ಕರ್ಮ ಮತ್ತು ಭಕ್ತಿಮಾರ್ಗವನ್ನು ಅವಲಂಬಿಸಬೇಕು. ಮೂರನೆಯದಾದ ಜ್ಞಾನದ ಉನ್ನತ ಪಥದಿಂದಲೇ ಅರಿಯಬೇಕಾದ ಪರಮ ತತ್ತ್ವವನ್ನು ಕುರಿತು, ಈಗ ಚರ್ಚಿಸಲು ನಾವು ಕೇವಲ ಅನರ್ಹರು. ಅಂತಹ ಚಿಂತನವೂ ನಿಷ್ಫಲವಾದುದು. ಆ ಪರತತ್ವದ ಸ್ವರೂಪವನ್ನು ಕುರಿತಾದ ಅಥವಾ ಸಾಧಕನ ಅನುಭವವನ್ನು ಕುರಿತಾದ ಜಗಳ ತೀರಾ ಕ್ಷುಲ್ಲಕ. ಅಷ್ಟೇ ಅಲ್ಲದೆ ಅಮೂಲ್ಯವಾದ ಕಾಲ ಮತ್ತು ಶಕ್ತಿ ವ್ಯಯ. ಸಿದ್ಧಿಯ ಹಂತವನ್ನು ತಲುಪಿದಾಗ ಸತ್ಯವು ತಾನೇ ತಾನಾಗಿ



ಪ್ರಕಾಶಿಸುತ್ತದೆ. ಆ ಮಟ್ಟದಲ್ಲಿ ಯಾವ ವಿಧವಾದ ವಿವಾದಕ್ಕೂ ವಿರೋಧಕ್ಕೂ ಅವಕಾಶವಿರುವುದಿಲ್ಲ.

ಪರಮಾತ್ಮನ ರೂಪ ನಾಮಗಳನ್ನು ಕುರಿತು ಜನ ಏಕೆ ಕಾದಾಡಬೇಕು? ಆ ಪರಮ ಪುರುಷನು ರೂಪವುಳ್ಳವನಾಗಿದ್ದಾನೆಂದು ನಾವು ದೃಢವಾಗಿ ನಂಬಿದ್ದಲ್ಲಿ, ಈಗ ಆತನ ಪಾದಗಳಿಂದಲೂ ಸಹ ನಾವು ಅತಿ ದೂರದಲ್ಲಿದ್ದೇವೆ. ಆ ಪಾದದರ್ಶನದ ಪಥದಲ್ಲಿ ನಾವೆಲ್ಲ ಇನ್ನೂ ಪರಿಷ್ಕ್ರಮಿಸಬೇಕಾಗಿದೆ. ಆ ಪಥದ ಕೊನೆಯನ್ನು ಮುಟ್ಟಿದಾಗ, ದೈವಕೃಪೆಯಿಂದ ಆತನ ಮುಖಾರವಿಂದ ದರ್ಶನ ಮಾಡಲು ಶಕ್ತರಾದಲ್ಲಿ, ಆತನ ಮುಖ ನೋಡಲು ಅದು ಸಕಾಲವಾಗಿದ್ದು, ಆತ ಭಸ್ಮವನ್ನು ಧರಿಸಿದ್ದಾನೆಯೋ, ತ್ರಿನಾಮಗಳನ್ನು ಧರಿಸಿದ್ದಾನೆಯೋ ಅಥವಾ ಇನ್ನೇನಾದರೂ ಇಟ್ಟುಕೊಂಡಿರುವನೋ ಎಂದು ನೋಡಬಹುದು. ಆತನನ್ನು ಶಿವ, ವಿಷ್ಣು ಅಥವಾ ಬೇರೆ ಇನ್ನಾವ ಹೆಸರಿನಲ್ಲಿ ಕರೆಯಬೇಕೋ ನಿರ್ಧರಿಸಬಹುದು. ಅದನ್ನು ಕುರಿತು ಈಗೇಕೆ ವಿವಾದ? ನಾವು ಈಗಿರುವ ಹಂತದಲ್ಲಿ, ಪರಮ ತತ್ತ್ವವು ಅದ್ವೈತವೋ, ವಿಶಿಷ್ಟಾದ್ವೈತವೋ ಅಥವಾ ದ್ವೈತವೋ ಯಾವುದಾದರೆ ತಾನೇ ಏನು ಪ್ರಯೋಜನ? ಧರ್ಮಮಾರ್ಗವು ನಮ್ಮೆಲ್ಲರಿಗೂ, ಒಟ್ಟಿಗೆ ಪರಿಷ್ಕ್ರಮಣ ಮಾಡವಷ್ಟು ವಿಶಾಲವಾಗಿ ತೆರೆದಿದೆ. ಅದರಲ್ಲಿ ಪ್ರತಿಯೊಬ್ಬನೂ, ತನ್ನ ತನ್ನ ಧರ್ಮಾನುಸಾರ ನಡೆಯಬೇಕಾಗಿದೆ. ಆ ದೀರ್ಘವಾದ ಮತ್ತು ಕಷ್ಟಸಾಧ್ಯವಾದ ಪಥದಲ್ಲಿ ನಾವು ಮುಂದುವರಿದು ಅಂತಿಮ ಗುರಿಯನ್ನು ಮುಟ್ಟಿದಾಗ ಪರತತ್ತ್ವವನ್ನು ಕುರಿತು ಚಿಂತಿಸಲು ಅದು ಸಕಾಲವಾಗಿರುತ್ತದೆ.

* * * *

## ೭. ಅಂತರಾತ್ಮ

ಅವಿದ್ಯೆಯನ್ನು ಯಾವುದು ಹೋಗಲಾಡಿಸುತ್ತದೆಯೋ ಅದೇ ಜ್ಞಾನ. ಜಗತ್ತಿನಲ್ಲಿ ನಮಗೆ ಗೊತ್ತಿರದಂತಹ ಅಸಂಖ್ಯಾತ ವಿಷಯಗಳಿವೆ. ಸಾಧಾರಣವಾಗಿ ಅವುಗಳಲ್ಲಿ ಅನೇಕ ವಿಷಯಗಳಲ್ಲಿ ಕುರಿತಂತಹ ತಿಳುವಳಿಕೆಯು ಇಲ್ಲದಿದ್ದರೂ ಏನೂ ನಷ್ಟವೆನ್ನಿಸದು. ಅವುಗಳನ್ನು ಕುರಿತಾದ ತಿಳುವಳಿಕೆಯಿದ್ದೂ ಸಹ ನಮಗೆ ಯಾವ ಪ್ರಯೋಜನವೂ ಇಲ್ಲ. ಯಾವ ವಿಷಯವನ್ನು ಕುರಿತಾದ ನಮ್ಮ ಅಜ್ಞಾನವು ನೋವು ಮತ್ತು ದುಃಖವನ್ನು ತಂದು ನಮ್ಮನ್ನು ಅಪಾಯಕ್ಕೀಡುಮಾಡುವುದೋ, ಆ ವಿಷಯವನ್ನು ಕುರಿತಾದ ಅಜ್ಞಾನವನ್ನು ನಿವಾರಿಸುವುದರಿಂದ ಸ್ವಾತಂತ್ರ್ಯ ಮತ್ತು ಸುಖಪ್ರಾಪ್ತಿಯಾದಲ್ಲಿ, ಅದನ್ನು ಕುರಿತೇ ನಾವು ನಿಜವಾಗಿ ಯೋಚಿಸಬೇಕಾಗಿದೆ. ಆ ಅಜ್ಞಾನವು ನಮ್ಮ ಅಂತರಾತ್ಮನನ್ನು ಕುರಿತದ್ದೇ ಆಗಿದೆ. ಕೆಲವು ತತ್ತ್ವಜ್ಞರು, ಅಜ್ಞಾನವು ಬಂಧನಕ್ಕೆ ಕಾರಣವೆಂಬುದನ್ನು ಒಪ್ಪುವುದಿಲ್ಲ. ಅನಾತ್ಮನಾದ ಶರೀರವನ್ನು ಆತ್ಮನೆಂದು ಭಾವಿಸುವುದೇ ಬಂಧನಕ್ಕೆ ಕಾರಣವೆನ್ನುವರು. ಒಂದು ವಸ್ತುವಿನ ನೈಜ ಸ್ವಭಾವವು ನಮಗೆ ತಿಳಿದಿದ್ದರೆ, ಮತ್ತೊಂದನ್ನು ಆ ವಸ್ತುವೆಂದು ನಾವು ತಪ್ಪುಗ್ರಹಿಸುವುದಿಲ್ಲ. ಅಂತಹ ತಪ್ಪು ಗ್ರಹಿಕೆಗೆ ಅವಿದ್ಯೆ ಅಥವಾ ಅಜ್ಞಾನವೇ ಕಾರಣವಾಗಿರುವುದರಿಂದ, ಅಜ್ಞಾನವೇ ನಮ್ಮೆಲ್ಲ ದುಃಖಗಳಿಗೂ ಮೂಲ ಕಾರಣವೆಂಬುದು ನಿಶ್ಚಯವಾಗುತ್ತದೆ.

'ಆತ್ಮ' ಎಂದರೇನು? 'ಆತ್ಮ' ಎನ್ನುವುದು ತುಂಬಾ ಸರಳವೂ ಸುಪರಿಚಿತವೂ ಆದ ಶಬ್ದವೆಂಬುದರಲ್ಲಿ ಸಂದೇಹವಿಲ್ಲ. ಆದರೆ ಅದರ ವೈಶಿಷ್ಟ್ಯವನ್ನು ಕುರಿತು ಆಲೋಚಿಸಿದಾಗ ಅನೇಕ ಸಂಶಯಗಳು ಬಂದು ನಿಲ್ಲುತ್ತವೆ. ಸೃಷ್ಟಿಯ ಅತ್ಯಂತ ಕೀಳ್ಮಟ್ಟದ ಜೀವಿಯಿಂದ ಉನ್ನತ ಮಟ್ಟದ ಜೀವಿಯವರೆಗೆ ಪ್ರತಿಯೊಂದೂ ತನ್ನಲ್ಲಿ ತಾನು ತುಂಬಾ ಪ್ರೀತಿಯುಳ್ಳದ್ದಾಗಿದೆ ಎನ್ನುವುದರಲ್ಲಿ ವಿರೋಧಾಭಿಪ್ರಾಯ ಬರದು. ಜೀವಿಯು ತನ್ನನ್ನು ಬಿಟ್ಟು ಬೇರೆ ಯಾವುದನ್ನಾದರೂ ಪ್ರೀತಿಸಿದಲ್ಲಿ ಆ ಪ್ರಿಯವಸ್ತು, ತನಗೆ ಹಿತವಾಗಿರುವವರೆಗೆ ಮಾತ್ರ ಪ್ರೀತಿಗೆ ಅರ್ಹವಾದ ವಸ್ತುವಾಗಿರುತ್ತದೆ. ಯಾವಾಗ ಹಿತಕಾರಿಯಾಗದೋ, ಆಗ ಆ ವಸ್ತು ಪ್ರೀತಿಯನ್ನು ಕಳೆದುಕೊಳ್ಳುತ್ತದೆ. ತನ್ನಲ್ಲಿ ತಾನಿಟ್ಟಿರುವ ಪ್ರೀತಿ



ಯಾವಾಗಲೂ ಜಾಗೃತವಾಗಿರುತ್ತದೆ. ಅದು ಎಂದಿಗೂ ಕಡಿದುಹೋಗದು. ಎಲ್ಲ ತತ್ತ್ವಜ್ಞರೂ ಈ ಮೂಲಭೂತ ವಸ್ತುಸ್ಥಿತಿಯನ್ನು ಒಪ್ಪುತ್ತಾರೆ ಮತ್ತು ಆತ್ಮನನ್ನು ಶ್ರೇಷ್ಠತಮ ಪ್ರಿಯ ವಸ್ತುವೆಂದು ಪರಿಗಣಿಸುತ್ತಾರೆ. ಆದರೆ ಆತ್ಮನನ್ನು ಗುರುತಿಸುವಾಗ ಅವರೆಲ್ಲ ಭಿನ್ನಾಭಿಪ್ರಾಯಪಡುತ್ತಾರೆ. ರಕ್ತಮಾಂಸಾದಿಗಳಿಂದ ಆವೃತವಾದ ಈ ದೇಹಕ್ಕೆ ಎಲ್ಲ ಸುಖ ಮತ್ತು ನೋವುಗಳು ಆಗುವುದರಿಂದ ಈ ದೇಹವೇ ಅತ್ಯಂತ ಶ್ರೇಷ್ಠವಾದ, ಪ್ರಿಯ ವಸ್ತುವೆಂದು ಕೆಲವರು ಹೇಳುತ್ತಾರೆ. ದೇಹಕ್ಕೆ ಅಪಾಯವಾಗುವ ಸಂದರ್ಭದಲ್ಲಿ ಕಣ್ಣು ಮತ್ತು ಇತರ ಇಂದ್ರಿಯಗಳನ್ನು ಅಪಾಯದಿಂದ ಸಂರಕ್ಷಿಸಿಕೊಳ್ಳಲು ನಾವು ತವಕಿಸುವುದರಿಂದ, ಇಂದ್ರಿಯಗಳೇ ಶ್ರೇಷ್ಠತಮ ಪ್ರೇಮಕ್ಕೆ ಅರ್ಹವೆಂದು ಕೆಲವರ ಅಭಿಮತ. ದೃಷ್ಟಿ ಕಳೆದುಕೊಂಡೋ ಅಥವಾ ಇತರ ಇಂದ್ರಿಯಪಟುತ್ವ ಕಳೆದು ಕೊಂಡೋ ಇದ್ದರೂ ಸಹ, ಇನ್ನೂ ಜೀವಿಸಬೇಕೆಂದು ನಾವು ಇಚ್ಛಿಸುವುದರಿಂದ, ಪ್ರಾಣವೇ ಅತ್ಯಂತ ಶ್ರೇಷ್ಠ ಹಾಗೂ ಪ್ರಿಯವಾದ ವಸ್ತುವೆಂದು ಹಲವರ ಅಭಿಪ್ರಾಯ. ಮನಸ್ಸು ಕೆಲಸ ಮಾಡದಿದ್ದರೆ ಬರೀ ಪ್ರಾಣದಿಂದೇನು ಪ್ರಯೋಜನ? ಆದ್ದರಿಂದ ಮನಸ್ಸೇ ಅತ್ಯಂತ ಪ್ರಿಯವಾದ ವಿಷಯ. ಆದರೆ ಮನಸ್ಸನ್ನು ಯಾರೂ ಚಂಚಲವಾಗಿರಲು ಬಿಡರು. ಅದನ್ನು ಅಂಕೆಯಲ್ಲಿಡುವ ಬುದ್ಧಿಯು ಮನಸ್ಸಿಗಿಂತ ಹೆಚ್ಚು ಇಷ್ಟಕರವಾಗಿ ಕಾಣುತ್ತದೆ. ಆತ್ಮವು ಈ ಬುದ್ಧಿಗೂ ಮಿಗಿಲಾಗಿ ಅದನ್ನು ಸಹ ನಿಯಂತ್ರಣ ಗೊಳಿಸುವುದಾಗಿದೆ. ಆದ್ದರಿಂದ ಆತ್ಮವೇ ಪ್ರಿಯತಮ ವಸ್ತುವೆಂದು ಕೆಲವರ ನಂಬಿಕೆ. ಆಗಲೂ ಸಹ, ಹಲವರು ಅನಭಿಜ್ಞನಾದ ಆತ್ಮನಿಗೆ ಜ್ಞಾನದ-ಪ್ರಜ್ಞೆಯ-ಗುಣವನ್ನು ಆರೋಪಿಸಿದರೆ, ಮತ್ತೆ ಕೆಲವರು ಚಿತ್ ಮತ್ತು ಅಚಿತ್ ಇವುಗಳ ಸಂಮಿಶ್ರಣವೆಂದು ಆತ್ಮನನ್ನು ಕರೆಯುತ್ತಾರೆ. ಇನ್ನು ಕೆಲವರು ಆತ್ಮನನ್ನು ಶುದ್ಧಚೈತನ್ಯ, ಆದರೆ ಆನಂದಮಯನಲ್ಲವೆಂದೂ, ಮತ್ತೆ ಹಲವರು ಆತ್ಮನನ್ನು ಸತ್, ಚಿತ್, ಆನಂದ–ಸಚ್ಚಿದಾನಂದ–ನೆಂದೂ ಕರೆಯುತ್ತಾರೆ. ಇಷ್ಟೊಂದು ವೈವಿಧ್ಯದ ಮಧ್ಯದಲ್ಲಿ ನಿರ್ಧಾರಕ್ಕೆ ಬರುವುದು ಹೇಗೆ?

ರಕ್ತ ಮಾಂಸಗಳ ಮುದ್ದೆಯಾದ ಶರೀರವು ಆತ್ಮನಾಗಲಾರನೆಂದು ಸುಲಭವಾಗಿ ಗ್ರಹಿಸಬಹುದು. 'ನಾನು' ಎನ್ನುವ ಮತ್ತೊಂದು ವಸ್ತುವು ಶರೀರವನ್ನೆಲ್ಲಾ ವ್ಯಾಪಿಸಿಕೊಂಡು ಪ್ರೇರಿಸಿದಾಗ ಶರೀರವು ಚೈತನ್ಯಪೂರ್ಣವಾಗಿ ಸ್ಪಂದಿಸಬಲ್ಲುದು. 'ನಾನು' ಎನ್ನುವ ಆ ವಸ್ತುವು ಪೂರ್ಣ ನಿದ್ರೆಯಲ್ಲಿ ಲಯಹೊಂದಿದಾಗ, ಶರೀರವು ನಿಶ್ಚೇಷ್ಟಿತವಾಗುತ್ತದೆ. ಈ ಶರೀರವನ್ನು ನಾಲ್ಕು ಜನ ಹೆಗಲ ಮೇಲೆ ಹೊತ್ತು ಸ್ಮಶಾನಕ್ಕೊಯ್ಯುವ ಕಾಲವು ಬರುತ್ತದೆ. 'ನಾನು' ಎನ್ನುವ ವಸ್ತು ಸದಾ ಜಾಗೃತವಾಗಿದ್ದು ಚೈತನ್ಯದಾಯಿಯಾಗಿರುವುದರಿಂದ,

ಜೀವನದ ಪ್ರತಿ ಕ್ಷಣದಲ್ಲಿಯೂ ಈ ಭಾರವಾದ ಹೊರೆಯನ್ನು–ಶರೀರವನ್ನು–ಹೊತ್ತು ಸಾಗಿಸುತ್ತೇವೆ ಎಂಬುದನ್ನು ನಾವು ಸದಾ ನೆನಪಿನಲ್ಲಿಟ್ಟಿರುವುದು ಒಳ್ಳೆಯದು. ಹಿನ್ನೆಲೆಯಲ್ಲಿ ಯಾವುದೋ ವಸ್ತುವಿದ್ದು ಆ ವಸ್ತು 'ನಾನು' ಎನ್ನುವ ಭಾವನೆಯನ್ನು ತಂದುಕೊಂಡು ಶರೀರವನ್ನು ಚೈತನ್ಯಭರಿತವಾಗಿ ಮಾಡಿ ಅದರ–ಶರೀರದ– ಭಾರವನ್ನು ಹೊರಲು ಶಕ್ತವಾಗಿದೆ ಎಂಬುದು ಇದರಿಂದ ಸುಸ್ಪಷ್ಟವಾಗುತ್ತದೆ. ಇಂದ್ರಿಯಗಳೆಲ್ಲವೂ ವಿಷಯಾನುಭವವನ್ನು ತಂದುಕೊಡುವ, ಕ್ರಿಯೆಯನ್ನು ನಡೆಸುವ ಜ್ಞಾನ ಮತ್ತು ಕರ್ಮಸಾಧನೆಗಳೇ ವಿನಾ ಅವುಗಳನ್ನು ನಿಯಂತ್ರಗೊಳಿಸುವ ಆತ್ಮನೇ ತಾವಲ್ಲ. ಹಾಗೆಯೇ ಮನಸ್ಸೂ ಸಹ ನಿಯಂತ್ರಣಗೊಳಿಸಲ್ಪಡಬಹುದು.ಇತರ ಇಂದ್ರಿಯಗಳಿಗಿಂತ ಸೂಕ್ಷ್ಮವಾದರೂ ಸಹ ಅದೂ ಒಂದು ಸಾಧನ. ಶ್ವಾಸೋಚ್ಛ್ವಾಸವನ್ನೂ ಸಹ ನಿಯತಿಗೊಳಿಸಬಹುದು. ಇಂದ್ರಿಯಗಳನ್ನೂ ಮತ್ತು ಮನಸ್ಸನ್ನೂ ಆಳುವಂತಹ ಬುದ್ಧಿಯನ್ನು ಸಹ ಯಾವುದಾದರೊಂದು ಗುರಿಯತ್ತ ನಿರ್ದೇಶಿಸಬಹುದು. ಇವಾವುವೂ ಸ್ಥೂಲದೇಹದಿಂದ ಹಿಡಿದು ಸೂಕ್ಷ್ಮಬುದ್ಧಿಯವರೆಗೆ ಯಾವುದೂ ಸಹ, ಇವೆಲ್ಲವನ್ನೂ ಆಳುವ ನಿಯತಿಗೊಳಿಸುವ ಆತ್ಮನಾಗಲಾರದು. ಇನ್ನೂ ಮುಂದುವರಿದು ಪರಿಶೀಲಿಸಿದಾಗ,ಬಾಹ್ಯೇಂದ್ರಿಯಗಳೂ ಶರೀರವೂ ನಿಶ್ಚಲಸ್ಥಿತಿಯಲ್ಲಿದ್ದಾಗ, ನಿದ್ರೆಯಲ್ಲಿ ನಾವು ಕನಸುಗಳನ್ನು ಕಾಣುತ್ತೇವೆ ಮತ್ತು ಮನಸ್ಸು ಬುದ್ಧಿ ಇವೂ ಸಹ ಅಚಲವಾದಾಗ ಸ್ತಬ್ಧವಾದಾಗ, ಗಾಢ ನಿದ್ರೆಯ ಆನಂದವನ್ನು ಅನುಭವಿಸುವುದನ್ನು ತಿಳಿಯುತ್ತೇವೆ. ಇಂತಹ ಅನುಭವ ಮತ್ತು ಆನಂದವನ್ನು ಪಡೆಯುವ ವಸ್ತುವು ಮಾತ್ರವೇ ಇವೆಲ್ಲವುಗಳಿಂದಲೂ ಶರೀರ, ಇಂದ್ರಿಯಗಳು, ಮನಸ್ಸು ಮತ್ತು ಬುದ್ಧಿ-ಪ್ರತ್ಯೇಕವಾಗಿದ್ದು, ಅದೊಂದೇ 'ಆತ್ಮ'ನೆಂದು ಕರೆಸಿಕೊಳ್ಳಲು ಯೋಗ್ಯವಾದುದೆಂದು ನಿರ್ಧರಿಸಬಹುದು. ಯಾವಾಗಲೂ ಅದ್ವಿತೀಯವೂ, ಅಚಲವೂ, ಸ್ಥಿರವೂ ಆಗಿದ್ದು ಜಾಗೃತ್, ಸ್ವಪ್ನಸುಷುಪ್ತಿಗಳಲ್ಲಿ ಪ್ರಕಾಶಿಸುತ್ತ, ಎಲ್ಲವುಗಳಿಂದಲೂ ಪ್ರತ್ಯೇಕವಾಗಿ ಸರ್ವಾತಿಶಯವಾಗಿ ಶರೀರ, ಇಂದ್ರಿಯ, ಮನಸ್ಸು ಮತ್ತು ಬುದ್ಧಿ ಮುಂತಾದವುಗಳನ್ನು ಆಳುತ್ತ, ಅವುಗಳಿಗೂ, ಅವುಗಳು ನಡೆಸುವ ಕರ್ಮಗಳಿಗೂ 'ಆತ್ಮ'ವು ಸಾಕ್ಷಿಯಾಗಿದೆ.

ಸಾಧಾರಣವಾಗಿ ಆತ್ಮತತ್ತ್ವವನ್ನು ಎಚ್ಚರ ಮತ್ತು ಕನಸಿನಲ್ಲಿ (ಜಾಗ್ರುತ್‌ಸ್ವಪ್ನ ಸ್ಥಿತಿಯಲ್ಲಿ) ಶರೀರಕ್ಕೆ ಅನ್ವಯಿಸಿಕೊಳ್ಳುತ್ತೇವೆ; ಆತ್ಮವಲ್ಲದುದನ್ನು ಆತ್ಮನೆಂದು ಭಾವಿಸಿಕೊಳ್ಳುವುದು, ನೋವು ನಲಿವುಗಳ ಅನುಭವದಲ್ಲಿ ಪರಿಣಮಿಸುತ್ತದೆ. ಪೂರ್ಣ ನಿದ್ರೆಯಲ್ಲಿ ಇಂತಹ



ಅನ್ವಯವಿಲ್ಲದ್ದರಿಂದ-ಭಾವನೆಯಿಲ್ಲದ್ದರಿಂದ–ನೋವು ನಲಿವುಗಳ ಅನುಭವವೇ ಇಲ್ಲದೆ, ಆತ್ಮಸಹಜವಾದ ಆನಂದ 'ದಲ್ಲಿರುತ್ತೇವೆ, ಪೂರ್ಣ ನಿದ್ರೆಯಲ್ಲಿಯೂ ಸಹ ಆನಂದಾನುಭವವು ವರ್ತಮಾನದ ಅನುಭವ ಪ್ರಜ್ಞೆಯಿಂದ ಕೂಡಿರದೆ, ನಿದ್ರೆಯಿಂದ ಎಚ್ಚೆತ್ತ ನಂತರ ಮಾತ್ರ ಸ್ಮರಿಸಿಕೊಳ್ಳುವಂತಹದಾಗಿರುತ್ತದೆ. "ನಾನು ಸುಖವಾಗಿದ್ದೆನು" ಎನ್ನುವ ಅನುಭವವು "ನಾನು ಸುಖವಾಗಿದ್ದೆನು" ಎನ್ನುವ ಪ್ರಜ್ಞೆಯೊಡನೆ ಸೇರಿಕೊಂಡಿರುತ್ತದೆ. ನಿದ್ರಿಸುತ್ತಿರುವಾತನಿಗೆ "ನಾನು ಸುಖವಾಗಿದ್ದೇನೆ" ಎಂಬ ಭಾವನೆ, ಪ್ರಜ್ಞೆ ಇರುವುದಿಲ್ಲ. ಅವನ ಆತ್ಮಾನಂದಾನುಭವವು ಅ ಜ್ಞಾನದ ಮೋಹದಿಂದ ಕವಿಯಲ್ಪಟ್ಟಿರುತ್ತದೆ. ತನ್ನ ಮನೆಯಲ್ಲಿಯೇ ಹೂತ ನಿಧಿಯಿಟ್ಟುಕೊಂಡು, ಆದರೆ ಅದರ ಅರಿವಿಲ್ಲದೆ ಭಿಕ್ಷೆಬೇಡುವವನಂತಿರುತ್ತದೆ ಆತನ ಸ್ಥಿತಿ. ಆತ್ಮವು ತನ್ನಲ್ಲೇ ಇರುವ ಪರಮಾನಂದವನ್ನು ಕಂಡುಕೊಳ್ಳದೆ, ಬಾಹ್ಯ ಜಗತ್ತಿನಲ್ಲಿ ಅದಕ್ಕಾಗಿ ಹುಡುಕಾಡುತ್ತದೆ. ಈ ಅನ್ವೇಷಣೆಯು ನಿಲ್ಲಬೇಕಾದರೆ, ಆತ್ಮವು ತನ್ನ ಸ್ವಭಾವವಾದ ಸದಾ ಇರುವಿಕೆ–ಸತ್, ಸದಾ ಚೈತನ್ಯಮಯತೆ–ಚಿತ್, ಮತ್ತು ಸದಾ ಆನಂದಮಯತೆ–ಆನಂದ, ಸಚ್ಚಿದಾನಂದವೇ ತಾನೆಂಬುದನ್ನು ಸಾಕ್ಷಾತ್ಕರಿಸಿಕೊಳ್ಳಬೇಕು. ವೇದಾಂತದ ಬೋಧನೆಯೂ ಮಹಾತ್ಮರ ಅನುಭವವೂ ಇದೇ ಆಗಿದೆ. ಲೌಕಿಕ ವಿಷಯಗಳಿಂದ ಮಲಿನವೂ ಬಲಹೀನವೂ ಆದ ಬುದ್ಧಿಯನ್ನು ಹೊಂದಿರುವ ನಾವು, ಆ ಬೋಧನೆ ಅಥವಾ ಅನುಭವಗಳನ್ನು ಕುರಿತು ಪ್ರಶ್ನಿಸುವುದು ಸರಿಯಲ್ಲ. ನಮ್ಮ ಬುದ್ಧಿಶಕ್ತಿ ಹರಿತವಾಗಿದ್ದರಷ್ಟೇ ಪ್ರಯೋಜನವಿಲ್ಲ. ಅದು ಶುದ್ಧವಾಗಿದ್ದು ಎಲ್ಲ ಮಾಲಿನ್ಯದಿಂದಲೂ ಮುಕ್ತವಾಗಿರಬೇಕು.ಆಗ ಮಾತ್ರ ಅದು ತತ್ತ್ವಗ್ರಹಣಯೋಗ್ಯವಾಗುತ್ತದೆ. ಪೂರ್ಣ ಶುದ್ಧವಾದ ಮತ್ತು ಗ್ರಹಣಶಕ್ತಿಯುಳ್ಳ ಬುದ್ಧಿಯುಳ್ಳವನಿಗೆ, ಯೋಗ್ಯವಾದ ಗುರುವಿನಿಂದ ಉಪದೇಶಿಸಲ್ಪಟ್ಟ ಒಂದೇ ಒಂದು ಉಪದೇಶ ಸಾಕು. ಯಾವ ಗ್ರಂಥಗಳೂ ಆತನಿಗೆ ಅಗತ್ಯವೆನಿಸವು. ಕಠಿಣತಮವಾದ ಅಧ್ಯಯನ, ಅಭ್ಯಾಸದ ಅಗತ್ಯವಂತೂ ತೀರ ಅನಾವಶ್ಯಕ.

ತತ್ತ್ವದ ವಿಷಯದಲ್ಲಿ ನಮಗೇನಾದರೂ ಸಂದೇಹವಿದ್ದಾಗ ಅಥವಾ ಅದನ್ನು ಬುದ್ಧಿಮತ್ತೆಯ ಚಳಕದಿಂದ ವಿದ್ವತ್ಪ್ರತಿಭೆಯಿಂದ ಸ್ಥಾಪಿಸಬೇಕಾದಾಗ, ನಾವು ಹಲವಾರು ಗ್ರಂಥಗಳ ಅಧ್ಯಯನವನ್ನು ಅಗತ್ಯವಾಗಿ ಮಾಡೋಣ. ತತ್ತ್ವದ ವಿಷಯದಲ್ಲಿ ಯಾವ ಸಂದೇಹವೂ ಇರದಾಗ, ಅದನ್ನು ಸ್ವಂತ ಅನುಭವದಿಂದ ಸಾಕ್ಷಾತ್ಕರಿಸಿಕೊಳ್ಳಬೇಕಾದಾಗ ಗ್ರಂಥಾಧ್ಯಯನ ಇತ್ಯಾದಿ ಕಷ್ಟಗಳೆಲ್ಲವೂ ಅನಾವಶ್ಯಕ. ಒಬ್ಬ ಅಡಿಗೆಯವನು ರುಚಿಕರವಾದ ತಿಂಡಿಯನ್ನು ಮತ್ತೊಬ್ಬನಿಗೆ

ಬಡಿಸಬೇಕಾದಾಗ, ಯಾವಾಗ ಪದಾರ್ಥವನ್ನು ಎಷ್ಟೆಷ್ಟು ಬಳಸಬೇಕು, ಹೇಗೆ ಮಿಶ್ರಮಾಡಬೇಕು, ಹೇಗೆ ಅಡುಗೆ ಮಾಡಬೇಕು ಎಂಬೆಲ್ಲ ವಿಷಯವನ್ನು ಆತ ತಿಳಿದಿರಬೇಕು. ಆ ತಿಂಡಿಯನ್ನು ತಿನ್ನುವಾತನಿಗೆ ಈ ಎಲ್ಲ ಅಂಶಗಳೂ ತಿಳಿದಿರಬೇಕಾದ ಅಗತ್ಯವಿಲ್ಲ. ತಮ್ಮ ತತ್ತ್ವಶಾಸ್ತ್ರವನ್ನು ಕುರಿತಾದ ತರ್ಕ, ಯುಕ್ತಿ, ಚಾತುರ್ಯಗಳನ್ನೆಲ್ಲಾ ವಿದ್ವಾಂಸರಿಗೆ ಬಿಡೋಣ; ಅವರು ಇತರರಿಗಾಗಿ ಅಡುಗೆ ಮಾಡಬೇಕು. ಆತ್ಮನ ಶಾಂತಿ ಮತ್ತು ಆನಂದಗಳನ್ನು ಅನುಭವಕ್ಕೆ ತಂದುಕೊಳ್ಳುವುದರಲ್ಲಿ, ನಾವು ಮಗ್ನರಾಗೋಣ. ಇಂದಿನ ಅದ್ವೈತ ವೇದಾಂತಾಭ್ಯಾಸಿಗೆ ಸಾಧಾರಣವಾಗಿ, ತಮ್ಮ ಆದಿಗುರು ಶ್ರೀ ಶಂಕರಭಗವತ್ಪಾದರಿಂದ ರಚಿತವಾದ ಭಾಷ್ಯಗ್ರಂಥಗಳ ಅಧ್ಯಯನ ಅನಿವಾರ್ಯವೆಂದು ಭಾವಿಸಲ್ಪಟ್ಟಿದೆ. ಅವರು ವಾಸ್ತವವಾಗಿಯೂ ಪರಮಜ್ಞಾನಿಗಳಾಗಿದ್ದವರು. ತಮ್ಮಿಂದ ರಚಿತವಾಗಿದ್ದ ಭಾಷ್ಯಗಳನ್ನು ಅಧ್ಯಯನ ಮಾಡಿದ ನಂತರವೇ, ಅವರು ಜ್ಞಾನಿಗಳಾದರೆ? ಭಾಷ್ಯಗಳನ್ನೆಲ್ಲಾ ರಚಿಸಿ ವಿಚಾರ ಮಥನಮಾಡಿದ ನಂತರವೇ, ಅವರು ದಾರ್ಶನಿಕರಾದರೆಂದು ನಾವು ಹೇಳಿದಲ್ಲಿ ಅವರ ಹಿಂದಿನ ಆಚಾರ್ಯರುಗಳಾದ ಶ್ರೀ ಗೋವಿಂದಭಗವತ್ಪಾದರು, ಶ್ರೀ ಗೌಡಪಾದರು, ಶ್ರೀ ಶುಕಮಹರ್ಷಿ ಮತ್ತು ಶ್ರೀ ಬಾದರಾಯಣರು ದಾರ್ಶನಿಕರಾಗಿದ್ದು ಹೇಗೆ? ಅವರೆಲ್ಲಾ ಶ್ರೀ ಶಂಕರರ ಭಾಷ್ಯಗಳನ್ನು ಅಧ್ಯಯನ ಮಾಡಿದ ನಂತರವೇ ಜ್ಞಾನಿಗಳಾದರೆ? ಆತ್ಮಸಾಧನೆಯಲ್ಲಿ ಪ್ರಾಮಾಣಿಕರಾಗಿರುವವರಿಗೆ, ಭಾಷ್ಯಾದಿಗ್ರಂಥಗಳು ಅನಿವಾರ್ಯವಲ್ಲವೆಂದು ಇದರಿಂದ ವ್ಯಕ್ತವಾಗುತ್ತದೆ. ಈ ಭಾಷ್ಯಗಳನ್ನು ಮತ್ತು ಅವುಗಳಿಗೆ ಪೂರಕವಾದ ಇತರ ಗ್ರಂಥಗಳನ್ನು ಬಹಳ ಪ್ರಾವೀಣ್ಯತೆದಿಂದ ವಿವರಿಸುವ ಅನೇಕರನ್ನು ನಾವು ನಿತ್ಯವೂ ನೋಡುತ್ತಿದ್ದೇವೆ. ಆತ್ಮಸಾಕ್ಷಾತ್ಕಾರ ಮಾರ್ಗದಲ್ಲಿ ಅವರು ಇತರರಿಗಿಂತ ಮುಂದಿದ್ದಾರೆಂದು ನಾವು ನಿಜವಾಗಿ ಹೇಳಬಲ್ಲೆವೆ? ವೇದಪ್ರಣೀತವಾದುದೂ ಮತ್ತು ನಮ್ಮ ಪೂರ್ವಜರಿಂದ ಬೋಧಿಸಲ್ಪಟ್ಟುದೂ ಆದ ಒಂದೇ ಒಂದು ತತ್ತ್ವವನ್ನು ಹಿಡಿದು ಅದನ್ನು ನಮ್ಮದನ್ನಾಗಿ ಮಾಡಿಕೊಳ್ಳಲು ಸಾಧನೆ ಮಾಡಬೇಕು. ಭಗವಂತನು ನಮ್ಮ ಪ್ರಾಮಾಣಿಕವಾದ ಯತ್ನಕ್ಕೆ ಫಲವಿತ್ತು ನಮ್ಮನ್ನು ಸನ್ಮಾರ್ಗದಲ್ಲಿ ನಡೆಸುತ್ತಾನೆ.

* * * *



## ೮. ಪ್ರಾಮಾಣಿಕವಾದ ಶ್ರದ್ಧೆ

ನಾಮರೂಪಾದಿಗಳುಳ್ಳ ಈ ವಿಶ್ವಕ್ಕೆ ಮೂಲಾಧಾರವಾದ ಪೂರ್ಣ ಸತ್ಯವು ಏಕಮೇವಾದ್ವಿತೀಯವಾಗಿದೆ. ಸಾಧಾರಣ ಬುದ್ಧಿಶಕ್ತಿಯುಳ್ಳವರು ಅನೇಕ ಜನ್ಮಗಳಲ್ಲಿ ಯತ್ನಿಸಿದರೂ ಅರ್ಥಮಾಡಿಕೊಳ್ಳಲು ಕಷ್ಟಸಾಧ್ಯವಾಗುವಂತಹ ಉನ್ನತಮಟ್ಟದಲ್ಲಿ ಈ ತತ್ತ್ವವು ವಿವರಿಸಲ್ಪಟ್ಟಿದೆ. ಈಗ ನಮ್ಮಲ್ಲಿ ಅನೇಕರು ಆ ಮಟ್ಟಕ್ಕಿಂತ ತೀರ ಕೆಳಮಟ್ಟದಲ್ಲಿದ್ದು ಅದನ್ನು ಸ್ಪರ್ಶಿಸಲೂ ಸಹ ಅನರ್ಹರಾಗಿದ್ದಾರೆ. ವಾಸ್ತವಿಕವಾಗಿ ಹೇಳುವುದಾದರೆ, "ಆತ್ಮನು ಈ ಶರೀರವೇ ವಿನಾ ಬೇರೆಯಲ್ಲ. ಈ ವಿಶ್ವಕ್ಕೆ ಆಧಾರನೂ, ಈ ವಿಶ್ವವನ್ನು ಆಳುವವನೂ ಆದ ದೇವರೆಂಬುದು ಮಿಥ್ಯಾವಾದ" ಎಂದು ನಂಬಿರುವ ಲೌಕಿಕವಾದಿಯ ಮಟ್ಟವನ್ನಾದರೂ ಮುಟ್ಟಬೇಕಾದರೆ ನಮ್ಮಲ್ಲಿ ಅನೇಕರಿಗೆ ಹಲವು ಜನ್ಮಗಳೇ ಬೇಕಾಗಬಹುದು; ಅವರು ಪ್ರಪಂಚ ವ್ಯವಹಾರದಲ್ಲಿ ಎಷ್ಟು ಮುಳುಗಿರುತ್ತಾರೆಂದರೆ ಆತ್ಮನನ್ನು ಕುರಿತು ಯೋಚಿಸಲು ಅವರಿಗೆ ಸ್ವಲ್ಪವೂ ಕಾಲಾವಕಾಶವೇ ಇರುವುದಿಲ್ಲ. ಇಂದಿನ ಮಾನವನು ಎಷ್ಟೇ ವಿದ್ಯಾವಂತನಾಗಿರಲಿ ಮತ್ತು ತಾನು ನಾಸ್ತಿಕನಲ್ಲವೆಂದು ಎಷ್ಟೇ ನಿರಾಕರಿಸಲಿ, ಆತನ ಮನೋವೃತ್ತಿಯನ್ನು ಕುರಿತು ವಿಚಾರಮಾಡಿದಾಗ ಆತನ ನಿತ್ಯದ ನಡೆ ನುಡಿಗಳಿಂದ, ಆತನಿಗೆ ಆತ್ಮನ ಪುನರ್ಜನ್ಮದಲ್ಲಿ ನಂಬಿಕೆಯುಂಟೆಂದೂ ಮತ್ತು ಈ ಶರೀರವನ್ನು ಬಿಟ್ಟನಂತರ ಆತ್ಮನು ಇನ್ನೊಂದು ಲೋಕಾನುಭವಕ್ಕೆ ಸಲ್ಲುವನೆಂದೂ ಅಥವಾ ದೇವರ ಆಸ್ತಿತ್ವದಲ್ಲಿ ನಂಬಿಕೆಯುಂಟೆಂದೂ ಹೇಳಬಹುದೆ? ಸುಖಲೋಲುಪತೆಯ ಭ್ರಾಂತಿ ದಿನದಿನಕ್ಕೂ ಏಕೆ ಹೆಚ್ಚಬೇಕು? ಎಲ್ಲ ಹರ್ಷ ಸಂತೋಷಾನುಭವವೂ ಇಂದೇ ಆಗಬೇಕು, ಮತ್ತೆ ಸಿಕ್ಕದು ಎಂಬಂತೆ ಏಕೆ ಆತ ವ್ಯವಹರಿಸಬೇಕು? ಧರ್ಮದ ವಿಷಯದಲ್ಲಿ ಅಲಕ್ಷ್ಯ ಹೆಚ್ಚುತ್ತಿರುವಾಗ ಮುಂದಿನ ಜನ್ಮದಲ್ಲಿ ಅಥವಾ ಅದರ ಅನುಭವಗಳಲ್ಲಿ ನಂಬಿಕೆ ಹೇಗೆ ಬರಬೇಕು? ನಮ್ಮೆಲ್ಲ ವ್ಯವಹಾರವನ್ನೂ ಅವಲೋಕಿಸುತ್ತಿರುವ ಭಗವಂತನಲ್ಲಿ ನಮಗೆ ಶ್ರದ್ಧೆ ನಂಬಿಕೆಗಳಿದ್ದಲ್ಲಿ ಇಷ್ಟೊಂದು ಕೋರ್ಟುಗಳೂ, ಸಬ್‌ರಿಜಿಸ್ಟ್ರಾರ್ ಕಛೇರಿಗಳೂ ಹೆಚ್ಚುತ್ತಿರುವುದರ ಆವಶ್ಯಕತೆಯೇನಿದೆ? ಜನ ಏನನ್ನೇ ಹೇಳಲಿ, ಏನನ್ನೇ ಆಲೋಚಿಸಲಿ

ಧರ್ಮಶ್ರದ್ಧೆಯು ಅತಿತ್ವರಿತವಾಗಿ ಕ್ಷೀಣಿಸುತ್ತಿದೆಯೆಂಬುದರಲ್ಲಿ ಸಂದೇಹವಿಲ್ಲ. ಹೆಚ್ಚು ಜನಕ್ಕೆ ಪರಮಾರ್ಥ ತತ್ತ್ವವನ್ನು ಕುರಿತು ಯಾವ ಆಸಕ್ತಿಯೂ ಇಲ್ಲ. ಸದ್ಯಕ್ಕೆ ಅಂತಹ ಪ್ರಶ್ನೆಗಳನ್ನು ಬಿಟ್ಟುಕೊಟ್ಟು ನಮನಮಗೆ ವಿಹಿತವಾದ ಧರ್ಮಾಚರಣೆಯಲ್ಲಿ ನಾವು ಆಸಕ್ತಿ ವಹಿಸಬೇಕು. ಸುಳ್ಳು ಹೇಳುವುದು ತಪ್ಪೆಂದೂ, ವಂಚನೆ ಮಾಡುವುದು ತಪ್ಪೆಂದೂ ಪ್ರತಿಯೊಬ್ಬರೂ ಬಲ್ಲರು. ಆದರೂ ಸಹ ಸುಳ್ಳು ಹೇಳುವುದು ಹೆಚ್ಚುತ್ತಿದೆ. ವಂಚನೆಯು ಇಂದಿನ ಜೀವನದ ಒಂದು ಅಂಗವೇ ಆಗಿಬಿಟ್ಟಿದೆ. ಸದಾಚಾರದ ಸಾಧಾರಣ ನಿಯಮಗಳನ್ನೇ ಪಾಲಿಸದ ಜನಕ್ಕೆ ವೇದಾಂತದ ತತ್ತ್ವಾನ್ವೇಷಣೆಯಿಂದ ಪ್ರಯೋಜನವೇನು? ಸರ್ವರಿಗೂ ಸಮಾನವಾದ ನೈತಿಕ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಸ್ಥೈರ್ಯವನ್ನು ಗಳಿಸಿಕೊಂಡು ಅನಂತರ, ನಮನಮಗೆ ವಿಹಿತವಾದ ವಿಶೇಷ ಧರ್ಮಗಳನ್ನು ಶ್ರದ್ಧೆಯಿಂದ ಅನುಸರಿಸಿ ಅಂತಃಶುದ್ಧಿಯನ್ನು ಪಡೆಯಬೇಕು. ಆ ನಂತರದಲ್ಲಿ ಮಾತ್ರವೇ ವೇದಾಂತದ ಉನ್ನತ ತತ್ತ್ವಗಳನ್ನು ಕುರಿತು ಚಿಂತನ ಮಾಡುವ ಅರ್ಹತೆ ನಮಗೆ ದೊರಕುತ್ತದೆ. ಇಂತಹ ಪೂರ್ಣ ತತ್ತ್ವದ ಅಭ್ಯಾಸಾನುಷ್ಠಾನಗಳು ಅರ್ಹತೆ ಪಡೆದವರಿಗೆ ಮಾತ್ರವೇ ವಿಹಿತ. ಈ ಅಂಶದತ್ತ ಇರುವ ನಮ್ಮ ಅಲಕ್ಷ್ಯವೇ ಇಂದಿನ ಅಸ್ತವ್ಯಸ್ತ ಭಾವನೆಗಳಿಗೆ ಕಾರಣವಾಗಿದೆ.

ಗಾರೆಯ ಅಥವಾ ಬಡಗಿಯ ಕೆಲಸಕ್ಕೂ ಸಹ ಆಯಾ ಉಪಕರಣಗಳನ್ನು ಬಳಸಲು ಪೂರ್ವಭಾವಿಯಾದ ಅಭ್ಯಾಸ ಬೇಕು. ಆದರೆ ಆಧ್ಯಾತ್ಮಿಕ ವಿಷಯವಾದ ಶಾಸ್ತ್ರದಲ್ಲಿ–ಎಲ್ಲಕ್ಕಿಂತ ಉನ್ನತ ಮಟ್ಟದ್ದೂ ಕಷ್ಟತಮವೂ ಆದ ಶಾಸ್ತ್ರವಿಚಾರದಲ್ಲಿ–ಪ್ರತಿಯೊಬ್ಬರೂ ತಾವು ಅರ್ಹರೆಂದೂ ಯೋಗ್ಯರೆಂದೂ ಭಾವಿಸಿಕೊಳ್ಳುತ್ತಾರೆ. ಇಂತಹ ಮನೋಭಾವವು ಹೋಗಬೇಕು. ನೈಜವಾದ ಅರ್ಹತೆಯನ್ನು ಪಡೆಯಲು ಶ್ರದ್ಧಾಪೂರ್ವಕವಾದ ಯತ್ನವು ನಡೆಯಬೇಕು.

ಸತ್ಯವನ್ನು ಅರ್ಥಮಾಡಿಕೊಳ್ಳಲು ಮನಸ್ಸು ಶುದ್ಧವಾಗಿರಬೇಕೆಂದೂ, ಮನಸ್ಸು ಕಲ್ಮಷರಹಿತವಾಗಲು ಸ್ವಧರ್ಮಾನುಷ್ಠಾನವು ಅಗತ್ಯವೆಂದೂ ಮೊದಲೇ ಹೇಳಲ್ಪಟ್ಟಿದೆ. ಅತ್ಯಂತ ಬಲಿಷ್ಠ ಕಶ್ಮಲ ಆಸೆ. ಅದು ದ್ವೇಷ, ಕೋಪ, ಅಹಂಕಾರ, ಮಾತ್ಸರ್ಯ, ಅಸೂಯೆ, ಇತ್ಯಾದಿಗಳ ರೂಪ ತಾಳುತ್ತದೆ. ಮನೋಶುದ್ಧಿಗಾಗಿ ಶಾಸ್ತ್ರವಿಹಿತ ಕರ್ಮಗಳನ್ನು ಆಚರಿಸುವಾಗ ಆ ಆಸೆಯನ್ನು ಕಟ್ಟುನಿಟ್ಟಾಗಿ ಹೊರಗಿಡಬೇಕು. ಫಲಾಕಾಂಕ್ಷೆಯಿಂದ ಮನಸ್ಸು ಪೀಡಿಸಲ್ಪಟ್ಟರೆ, ಫಲಭೋಗಕ್ಕಾಗಿ ಕಾತುರತೆ ಹೆಚ್ಚುತ್ತದೆ. ಹೊಳೆಯಲ್ಲಿ ನೀರು ಹೆಚ್ಚುತ್ತಾ ಹೋದರೆ, ಹೊಳೆ ಬತ್ತುವುದು ಸಾಧ್ಯವಿಲ್ಲ. ಕಾಮನೆಯಿಂದ ಪ್ರೇರಿತವಾದ ಯಾವ ಕರ್ಮವೂ ಕಾಮನೆಯನ್ನು ಹೋಗಲಾಡಿಸಲು ಸಾಧ್ಯವಿಲ್ಲ. ಆದರೆ



ಉದ್ದೇಶರಹಿತರಾಗಿ ಯಾವ ಕರ್ಮವನ್ನು ಮಾಡಲೂ ಯಾರಿಂದಲೂ ಸಾಧ್ಯವಿಲ್ಲ. ಕಾಮನೆಯನ್ನು ತೃಪ್ತಿಪಡಿಸುವ ಬದಲು, ಮನದ ಶುದ್ಧೀಕರಣವೋ, ಭಗವಂತನ ತೃಪ್ತಿಯೋ ಗುರಿಯಾಗಿರಬೇಕು. ಯಾವ ಪ್ರತಿಫಲವನ್ನೂ ಬಯಸದ ನಿಸ್ವಾರ್ಥ ಸೇವಕನು ಕೂಲಿಗಾಗಿ ಕೆಲಸ ಮಾಡುವ ಸೇವಕನಿಗಿಂತ, ಒಡೆಯನಿಗೆ ಹೆಚ್ಚು ಸಂತೋಷವುಂಟುಮಾಡುತ್ತಾನೆ. ಇದನ್ನು ಲೋಕದಲ್ಲಿ ಎಲ್ಲರೂ ಬಲ್ಲರು. ಮೊದಲನೆಯವ ಎರಡನೆಯವನಿಗಿಂತ ಹೆಚ್ಚು ಪ್ರಯೋಜನವನ್ನು ಹೊಂದುತ್ತಾನೆ. ಹಾಗೆಂದಮಾತ್ರಕ್ಕೆ, ಯಾವನಾದರೂ ವ್ಯಕ್ತಿ ನಾನು ಸಂಬಳವನ್ನೇ ಕೇಳದಿದ್ದರೆ, ಒಡೆಯನಿಂದ ತನಗೆ ಹೆಚ್ಚು ಲಾಭವಾಗುತ್ತದೆಂದು ಯೋಚಿಸಿ ನಿಸ್ವಾರ್ಥ ಸೇವಕನಂತೆ ನಟಿಸಿದರೆ, ಅಂಥವನು ಕೂಲಿಯನ್ನು ಪಡೆಯುವಾತನಿಗಿಂತ ಹೆಚ್ಚು ಲೋಭಿಯೆನ್ನಿಸಿಕೊಳ್ಳುತ್ತಾನೆ. ಇದೇ ರೀತಿ ಕಾಮ್ಯರಹಿತ ಕರ್ಮವು ಕಾಮ್ಯಕರ್ಮಕ್ಕಿಂತ ಹೆಚ್ಚು ಲಾಭಕರವೆಂದು ಬಗೆದು, ಯಾರಾದರೂ ಕಾಮ್ಯವಿಲ್ಲದ ಕರ್ಮದಲ್ಲಿ ಉದ್ಯುಕ್ತರಾದರೆ ಆತನು ಆತ್ಮ ದ್ರೋಹಿಯಷ್ಟೇ ಅಲ್ಲದೆ, ಕಾಮೇಚ್ಛುವಲ್ಲದವನಂತೆ ನಟಿಸಿ, ಭಗವಂತನಿಗೇ ಮೋಸ ಬಗೆಯುವ ಅಪ್ರಾಮಾಣಿಕನೆನಿಸಿಕೊಳ್ಳುತ್ತಾನೆ.

ಧೂಳು ಒರೆಸಿ ಚೊಕ್ಕಟಮಾಡಿದ, ಆದರೆ ಅಲುಗಾಡುತ್ತಿರುವ ಕನ್ನಡಿಯು, ಚಿತ್ರವನ್ನೋ ಅಥವಾ ನಮ್ಮ ಮುಖವನ್ನೋ ಸರಿಯಾಗಿ ಪ್ರತಿಬಿಂಬಿಸಲಾರದು. ಹಾಗೆಯೇ ಕಾಮ್ಯರಹಿತವಾಗಿದ್ದರೂ ಏಕಾಗ್ರಭಕ್ತಿಯಿಲ್ಲದ ಮನಸ್ಸು ಸ್ಥಿರವಾಗದು, ನಿಶ್ಚಲವಾಗದು. ಭಕ್ತಿಯೂ ಕಾಮ್ಯರಹಿತವಾಗಿರಬೇಕೆಂದು ಹೇಳಬೇಕಾಗಿಲ್ಲ. ಮನಸ್ಸು ಶುದ್ಧವೂ ಸ್ಥಿರವೂ ಆದಲ್ಲಿ ಆತ್ಮವಿದ್ಯೆಯನ್ನೂ, ಅದರ ಮಹತ್ವವನ್ನೂ ಪ್ರತಿಬಿಂಬಿಸಲು ಸಮರ್ಥವಾಗುತ್ತದೆ.

ಜೀವನದ ಯಾವ ಕ್ಷೇತ್ರದಲ್ಲಿಯೇ ಆಗಲಿ, ಭಕ್ತಿಯ ಮೊದಲ ಲಕ್ಷಣ ವಿಧೇಯತೆ. ಸಂಶಯರಹಿತವಾದ ವಿಶ್ವಾಸಪೂರ್ಣವಾದ ವಿಧೇಯತೆ. ಕುತೂಹಲದ ಅಥವಾ ಮನಸ್ಸಿನಲ್ಲೇ ಗೊಣಗಿಕೊಳ್ಳುವಂತಹ ವಿಧೇಯತೆಯಲ್ಲ. ತನಗೆ ಕೊಟ್ಟ ಕೆಲಸ ಮಾಡದೆ, ಯಾವಾಗಲೂ ಯಜಮಾನನ ಗುಣಗಾನ ಮಾಡುತ್ತಿರುವ ಸೇವಕನನ್ನು ಒಡೆಯನು ಮೆಚ್ಚುವನೇ? ಯಜಮಾನನು ವಿಧಿಸಿದ ಆಣತಿಯನ್ನು ಅಲಕ್ಷಿಸಿ, ಉಪೇಕ್ಷಿಸುವ, ಪಾಲಿಸಲು ಸಿದ್ಧನಿರದ ಸೇವಕನು, ಯಜಮಾನನ ಆಪ್ತನೆಂದು ಹೇಳಿಕೊಳ್ಳಲು ಸಾಧ್ಯವೇ ಇಲ್ಲ. ವೇದ ಮತ್ತು ಧರ್ಮಶಾಸ್ತ್ರಗಳು ತನ್ನ ಆಜ್ಞೆಗಳೆಂದು ಭಗವಂತನು ಸ್ಪಷ್ಟವಾಗಿ ನುಡಿದಿರುವಾಗ, ಆ ಆಜ್ಞೆಗಳನ್ನು ಉಲ್ಲಂಘಿಸುತ್ತ, ದೇವರಲ್ಲಿ ನಾವು ಭಕ್ತಿಯುಳ್ಳವರೆಂದು ಹೇಳಿಕೊಳ್ಳುವುದು ತರ್ಕಬದ್ಧವಾದೀತೆ?

# ೯. ಅಂತರ್ಗತ ಆನಂದ

ಇಂದು ನಾವು ಕಾಣುತ್ತಿರುವ ಜಗತ್ತಿಗೆ ಎಂದಾದರೂ ಒಂದು ಪ್ರಾರಂಭವಿದ್ದರೆ ಆ ಆರಂಭಕ್ಕೆ ಏಕದೇಶೀಯವೂ ಅಸದೃಶವೂ ಆದ ಕಾರಣವೊಂದಿದ್ದು, ಅದರಿಂದಲೇ ಜಗತ್ತು ಜನ್ಮತಳೆದಿರಬೇಕು. ಅಸ್ಪಷ್ಟವೂ ಆಕಾರರಹಿತವೂ ಆದ ಪರಮಾಣುಗಳ ಪುಂಜವೇ ಈ ಜಗತ್ತಿಗೆ ಕಾರಣವೆಂದು ಹೇಳುವವರೂ ಸಹ, ಆ ಪರಮಾಣುವು ತನ್ನಲ್ಲಿ ಅಂತರ್ಗತವಾದ ಅನಂತಶಕ್ತಿಯ ಸ್ಥೂಲರೂಪವೆಂದು ಈಗ ಅರಿತುಕೊಂಡಿದ್ದಾರೆ. ಶಕ್ತಿಯನ್ನು ವಿವಿಧ ರೀತಿಯಲ್ಲಿ ಪರಿವರ್ತಿಸಬಹುದಾದ್ದರಿಂದ, ಒಂದು ಪರಮಾಣುವಿನಲ್ಲಿ ಅಡಗಿರತಕ್ಕ ಮೂಲಶಕ್ತಿಯು ಇನ್ನೊಂದರಲ್ಲಿರತಕ್ಕ ಶಕ್ತಿಗಿಂತ ಪ್ರತ್ಯೇಕವೆಂದು ಊಹಿಸಲು ಕಾರಣವಿಲ್ಲ. ಆ ಮೂಲಶಕ್ತಿಯು, ಎಲ್ಲ ಧಾತುಗಳ ಪರಮಾಣುಗಳಿಗೂ ಸಾಮಾನ್ಯವಾಗಿದ್ದು, ಒಂದೇ ಆಗಿದ್ದು, ಸಜಾತೀಯವಾಗಿದ್ದು, ಅನಂತವಾಗಿರುತ್ತದೆ. ಈ ಅನಂತಶಕ್ತಿ ಅಥವಾ ಬಲವು ಜಗತ್ಸೃಷ್ಟಿಗೆ ನಿಮಿತ್ತವಾದ ಮೂಲವಸ್ತುವೆಂದು ಪರಿಗಣಿಸಬಹುದು. ಆದರೆ ಜಗತ್ತು ಕೇವಲ ಒಂದು ಪದಾರ್ಥವಲ್ಲ, ಪಂಚಭೂತಾತ್ಮಕವಾದುದಷ್ಟೇ ಅಲ್ಲ; ನಾವೂ ನೀವೂ ಸಹ ಇದ್ದೇವೆ. ನಮ್ಮ ಶರೀರಗಳು ಪಂಚಭೂತಾತ್ಮಕವಾದುವು ಸರಿಯಷ್ಟೆ. ನಮ್ಮಲ್ಲಿ ಪ್ರತಿಯೊಬ್ಬರಲ್ಲಿಯೂ ಪ್ರಕಾಶಿಸುತ್ತಿರುವ ಜ್ಞಾನಮಯವಾದ ಚಿಚ್ಛಕ್ತಿಯಿದೆ. ಅದು ಭೌತಿಕವಸ್ತುಗಳ ವರ್ಗಕ್ಕೆ ಸೇರುವುದಿಲ್ಲ. ಜಗತ್ತನ್ನು ಕುರಿತು ಪೂರ್ಣವಾಗಿ ವಿವರಿಸಬೇಕಾದರೆ ಇದನ್ನೂ, "ಜ್ಞಾನಮಯೀ ಚಿಚ್ಛಕ್ತಿಯನ್ನೂ" ವಿವರಿಸಬೇಕು. ಮೊದಲಿನ ಸರಣಿಯನ್ನೇ ಧಾಟಿಯನ್ನೇ, ಅನುಸರಿಸಿ, ಮುಂದುವರಿದು, ಅನಂತ ಜೀವಿಗಳ ಈ ಜಗತ್ತಿಗೆ ಕಾರಣವಾದ ಮೂಲಶಕ್ತಿಯನ್ನು ನಾವು ಒಪ್ಪಿ ಸ್ವೀಕರಿಸಬೇಕು. ಪ್ರತ್ಯೇಕ ವ್ಯಕ್ತಿತ್ವವನ್ನೇ ಕೊಡಬಹುದಾದ ಅನ್ಯಕಾರಣಗಳಿಂದ ಮುಕ್ತವಾದ ಒಂದು ಆತ್ಮವು ತಾತ್ತ್ವಿಲವಾಗಿ ಇನ್ನೊಂದಕ್ಕಿಂತ ಬೇರೆಯೆಂದು ಹೇಳಲು ಕಾರಣವೇ ಇಲ್ಲ. ಈ ತರ್ಕಸರಣಿಯಲ್ಲಿ ನಾವು ಬರಬಹುದಾದ ತೀರ್ಮಾನವೆಂದರೆ, ಭೌತಜಗತ್ತಿಗೆ ಕಾರಣವಾದ ಮೂಲ ಚೇತನವೊಂದಿದೆಯೆಂದೂ, ಹಾಗೆಯೇ ವಿಶ್ವದ ಎಲ್ಲಾ ಜೀವಗಳಿಗೂ ಕಾರಣವಾದ



ಮೂಲ ಜ್ಞಾನವೊಂದಿದೆಯೆಂದೂ ಹೇಳಬಹುದು. ಇನ್ನೂ ಸುಲಭವಾಗಿ ಹೇಳುವುದಾದರೆ ಎರಡು ಮೂಲಕಾರಣಗಳ ಬದಲು ಒಂದೇ ಇದೆಯೆಂದು ಭಾವಿಸಿ ಅದನ್ನು ಜ್ಞಾನಮಯೀಚೈತನ್ಯ ಅಥವಾ ಚೈತನ್ಯಮಯೀಜ್ಞಾನವೆಂದು ಕರೆಯಬಹುದು. ನಮ್ಮ ತತ್ತ್ವಶಾಸ್ತ್ರದಲ್ಲಿ ನಾವಿದನ್ನು ಹಾಗೆಯೇ ಕರೆಯುತ್ತೇವೆ. ಮೂಲಕಾರಣವು ಜ್ಞಾನಮಯೀ ಚೈತನ್ಯವೆಂದು ಪರಿಗಣಿಸಲ್ಪಟ್ಟಾಗ ಅದನ್ನು ಶಕ್ತಿಯೆನ್ನುತ್ತೇವೆ. ಇದನ್ನು ಚೈತನ್ಯಮಯೀಜ್ಞಾನವೆಂದು ಪರಿಗಣಿಸಿದಾಗ 'ಚಿತ್' ಎನ್ನುತ್ತೇವೆ. ಈ ತರ್ಕವನ್ನು ಮುಂದುವರಿಸಿ, ಇನ್ನೂ ಸುಲಭಗೊಳಿಸಿ, ಚೈತನ್ಯ ಮತ್ತು ಜ್ಞಾನಗಳು ಒಂದೇ ಎಂದು, ಬೇರೆಯೆಂಬ ಭಾವನೆಯನ್ನೇ ತೊಡೆದುಹಾಕಿಬಿಡುತ್ತೇವೆ. ಭೌತಜಗತ್ತಿನ ದೃಷ್ಟಿಯಿಂದ ಚೈತನ್ಯವು ಮೂಲಕಾರಣವೆಂದೂ, ಜೀವಜಗತ್ತಿನ ದೃಷ್ಟಿಯಿಂದ ಜ್ಞಾನವು ಮೂಲ ಕಾರಣವೆಂದೂ, ಒಂದೇ ವಸ್ತುವನ್ನು ಎರಡು ದೃಷ್ಟಿಗಳಿಂದ ಪ್ರತ್ಯೇಕವಾಗಿ ಕಾಣುವಾಗ ನುಡಿಯುತ್ತೇವೆ. ಅದನ್ನೇ "ಬ್ರಹ್ಮ" ಎನ್ನುತ್ತೇವೆ. ಅದು ಶಕ್ತಿ ಮತ್ತು ಚಿತ್ ಎರಡನ್ನೂ ಒಳಗೊಂಡು ಮತ್ತು ಅವೆರಡನ್ನೂ ಮೀರಿರುವುದರಿಂದ ಅದನ್ನು "ಇರುವುದು" ಎಂದು ಮಾತ್ರ ಹೇಳಬಹುದು. ಅದೇ ಶುದ್ಧವಾದ 'ಸತ್' ಇರುವಂಥಾದ್ದು.

ಈ ಜಗತ್ತಿನಲ್ಲಿರುವುದೆಲ್ಲವೂ ಅದೇ 'ಸತ್', ಆದರೆ ನಾವು ರೂಪಗಳಲ್ಲಿ ಅಡಗಿರುವಂಥದ್ದು. ಈ ಜಗತ್ತಿನಲ್ಲಿ ಎಲ್ಲ ಜೀವಿಗಳಲ್ಲೂ ಆ 'ವಸ್ತು'ವೇ ಅಡಗಿದ್ದು, ಪ್ರತ್ಯೇಕ ವ್ಯಕ್ತಿತ್ವವನ್ನು ತೋರುತ್ತ ಹಲವಾರು ಶರೀರಗಳಲ್ಲಿ ಮರೆಯಾಗಿದೆ. ನಮ್ಮ ಗ್ರಹಣಶಕ್ತಿಯ ಮೇಲೆ ಒತ್ತಾಯವಾಗಿ ಬಂದೆರಗುವ, ನಾಮರೂಪಗಳಿಗೆ ಗಮನ ಕೊಡದೆ, ನಾಮರೂಪಗಳನ್ನು ಅಲಕ್ಷ್ಯಮಾಡಿ, ಅವುಗಳ ಹಿಂದೆ ಅಡಗಿರುವ ಸಾರ ವಸ್ತುವಿನತ್ತ ನಮ್ಮ ಗಮನ ಕೇಂದ್ರೀಕೃತವಾದರೆ, ಸರ್ವವ್ಯಾಪೀ 'ಸತ್' ಗ್ರಾಹ್ಯವಾಗುತ್ತದೆ. ನಮ್ಮನ್ನು ಪ್ರತ್ಯೇಕಿಸುವ ಎಲ್ಲ ವಿಷಯಗಳಿಂದಲೂ ನಾವು ಹೊರಬಂದಾಗ ನಮ್ಮ ಅಂತರಾತ್ಮವು ಪರಮಾತ್ಮನಿಗಿಂತ ಬೇರೆಯಲ್ಲ ಎಂಬುದನ್ನು ಕಾಣುತ್ತೇವೆ.

ಆತ್ಮವು ಸದಾ ಅಂತರ್ಗತವಾಗಿ ನಮ್ಮಲ್ಲೇ ಇರುವಾಗ ಅದನ್ನು ಅರಿತುಕೊಳ್ಳುವ ಆವಶ್ಯಕತೆಯೇನೆಂದು ಕೇಳಬಹುದು. ಸಾಮಾನ್ಯವಾಗಿ ಆಗಾಗ ನಡೆವ ಘಟನೆಯಿಂದಲೇ ಇದಕ್ಕೆ ಉತ್ತರ ಹೇಳಬಹುದು. ಚಿನ್ನದ ಸರ ಧರಿಸಿದ ವ್ಯಕ್ತಿ ತಾನು ಅದನ್ನು ಧರಿಸಿಕೊಂಡಿರುವುದನ್ನು ಮರೆತು ಅದನ್ನೆಲ್ಲೋ ಕಳೆದುಕೊಂಡಿರುವುದಾಗಿ ಭಾವಿಸಿ ಎಲ್ಲೆಡೆಗಳಲ್ಲಿಯೂ ಹುಡುಕುತ್ತಿರುತ್ತಾನೆ. ದಯಾಳುವಾದ ಸ್ನೇಹಿತನೊಬ್ಬ ಬಂದು, ಅದು ತನ್ನ ಕೊರಳಲ್ಲೇ ಇರುವುದನ್ನು

ತೋರಿಸುವವರೆಗೆ, ಗಾಬರಿಯಿಂದ ಚಿಂತಾಕ್ರಾಂತತನಾಗಿ, ಆತ ಹುಡುಕುತ್ತಲೇ ಇರುತ್ತಾನೆ. ಸ್ನೇಹಿತನು ಅದನ್ನು ತೋರಿಸಿಕೊಟ್ಟಾಗ ಹೊಸದೊಂದು ಸರ ಬಂದಷ್ಟೇ ಸಂತೋಷ ಹರ್ಷಗಳನ್ನು ಅನುಭವಿಸುತ್ತಾನೆ. ಹಾಗೆಯೇ ಆತ್ಮಾನಂದವೂ ಸಹ ನಮ್ಮಲ್ಲಿಯೇ ಇದ್ದರೂ, ನಾವು ಅದರ ವಿಷಯವಾಗಿ ಅಜ್ಞಾನದಿಂದಿದ್ದೇವೆ. ನಮ್ಮ ಪ್ರಯತ್ನ ನಡೆಯಬೇಕಾದುದು ಆನಂದವನ್ನು ಪಡೆಯಲಲ್ಲ, ಅಜ್ಞಾನವನ್ನು ತೊಲಗಿಸಲು.

ಆತ್ಮನು ಸ್ವಯಂತೇಜನಾಗಿದ್ದಾನೆ. ಉರಿಯುವ ದೀಪವನ್ನು ಕಾಣಲು, ಪ್ರತ್ಯೇಕವಾದ ಬೆಳಕು ಬೇಕಾಗದಿರುವಂತೆ, ಶಾಸ್ತ್ರಗಳಲ್ಲಿ ನಿರೂಪಿಸಲ್ಪಟ್ಟಿರುವ ಮಾರ್ಗಗಳೆಲ್ಲವೂ, ಆತ್ಮನು ಸ್ವಯಂಪ್ರಕಾಶನಾಗಲೆಂದಲ್ಲ; ಆತ್ಮನನ್ನು ಅರಿಯಲು ವಿಘ್ನವಾಗಿರುವ ಅವಿದ್ಯೆಯನ್ನು ಅಥವಾ ಅಜ್ಞಾನದ ತೆರೆಯನ್ನು ತೆಗೆದುಹಾಕಬೇಕೆಂದು ವಿವರಿಸಲ್ಪಟ್ಟಿದೆ. ಎಲ್ಲ ಆಲೋಚನೆ ಮತ್ತು ಭಾವನೆಗಳು ದ್ವೈತದ ಸೀಮೆಯೊಳಗಿರುವುದರಿಂದ, ಭಾವಾತೀತವೂ, ವಾಗತೀತವೂ ಆದ ಪೂರ್ಣಸತ್ಯವನ್ನು ಕುರಿತು ಚಿಂತಿಸಲು ಅಥವಾ ಮಾತನಾಡಲು ನಾವು ದ್ವೈತಸಂಕೇತವನ್ನೇ ಅವಶ್ಯವಾಗಿ ಬಳಸಬೇಕು. ಆದ್ದರಿಂದ ಉಪನಿಷತ್ತು "ಬ್ರಹ್ಮನನ್ನು ಅರಿತವನು ಶ್ರೇಷ್ಠತಮವಾದುದನ್ನು ಪಡೆಯುವನು" ಎಂದು ನುಡಿಯುತ್ತದೆ; ಮುಕ್ತಿಯು, ಇಂದು ಸಂಭವಿಸದ, ಮುಂದೆಂದೂ ಸಂಭವಿಸುವ ಸ್ಥಿತಿಯೆಂಬಂತೆ. ಒಬ್ಬ ವ್ಯಾಪಾರಿ ವ್ಯಾಪಾರವೆಲ್ಲ ಮುಗಿದ ನಂತರ, ಮಗನನ್ನು ಕರೆದು ರೋಜು ಪುಸ್ತಕ, ವರ್ಗದ ಪುಸ್ತಕ ಮತ್ತು ನಗದು ಹಣ ಎಲ್ಲವೂ ತಾಳೆಯಾಗುತ್ತದೆಯೇ ಎಂದು ನೋಡಲು ಹೇಳುತ್ತಾನೆ. ಮಗನು ಲೆಕ್ಕವನ್ನೆಲ್ಲಾ ನೋಡಿ, ರೋಜು ಬುಕ್ಕಿಗೂ ವರ್ಗದ ಖಾತೆಗೂ ತಾಳೆಯಾಗದೆ ಎರಡಾಣೆ ವ್ಯತ್ಯಾಸವಿರುವುದನ್ನು ಕಾಣುತ್ತಾನೆ. ನಗದು ಹಣವು ರೋಜು ಬುಕ್ಕಿನಲ್ಲಿ ನಮೂದಿಸಿರುವಂತೆ ಸರಿಯಾಗಿದ್ದರೂ, ವರ್ಗದ ಖಾತೆಯ ಜುಮ್ಲಾವು ರೋಜು ಬುಕ್ಕಿನದಕ್ಕೆ ಸರಿಹೊಂದದೆಂದು ಮಗ ಹೇಳಿದಾಗ, ತಂದೆ "ಎರಡಾಣೆ ಎಲ್ಲಿ ಹೋಗುತ್ತದೆ? ಅಲ್ಲೇ ಇರಬೇಕು ಸರಿಯಾಗಿ ನೋಡು," ಎಂದು ಉದ್ಗರಿಸುತ್ತಾನೆ. ಮಗ ಲೆಕ್ಕವನ್ನು ಮತ್ತೊಮ್ಮೆ ಜಾಗರೂಕತೆಯಿಂದ ಪರಿಶೀಲಿಸುತ್ತಾನೆ. ತಾನೇ ಕೂಡುವುದರಲ್ಲಿ ತಪ್ಪುಮಾಡಿರುವುದನ್ನು ಕಂಡು, ತಿದ್ದಿ ಸಂತೋಷೋದ್ವೇಗದಿಂದ "ಎರಡಾಣೆ ಸಿಕ್ಕಿ ಬಿಟ್ಟಿತು" ಎಂದು ಸಾರುತ್ತಾನೆ! ಈ ಹಣ ಕಳೆದುಹೋಗಿತ್ತೆ? ಮತ್ತೆ ಹೊಸದಾಗಿ ಬಂತೆ? ಆದರೂ ಒಮ್ಮೆ ಅದು ಇಲ್ಲವಾಗಿತ್ತು ! ಮತ್ತೊಮ್ಮೆ ಸಿಕ್ಕಿತು. ನಿಜಾಂಶವೆಂದರೆ ತಂದೆ ಹೇಳಿದ "ಅಲ್ಲೇ ಎಲ್ಲೋ ಇರಬೇಕು, ಚೆನ್ನಾಗಿ ಹುಡುಕು", ಎಂಬುದು! ಹೀಗೆಯೇ 'ಆತ್ಮ' ಸಹ ಒಂದು ಘಟ್ಟದಲ್ಲಿ ಅರಿವಿಗೆ



ನಿಲುಕದ್ದಾಗಿದ್ದು, ಇನ್ನೊಂದು ಘಟ್ಟದಲ್ಲಿ ಅನುಭವಗಮ್ಯವಾಗುತ್ತದೆ. ಆತ್ಮನು ಸದಾ ಸ್ವಯಂಪ್ರಕಾಶವಾಗಿದ್ದರೂ, ಆತ್ಮನ ಅರಿವಿಗೆ ವಿಘ್ನವಾದ ತೆರೆಯನ್ನು ತೆಗೆಯಲು ಯತ್ನವು ನಡೆಯಬೇಕು. ತಂದೆಯ "ಸರಿಯಾಗಿ ನೋಡು" ಎಂಬ ಸಲಹೆ, "ಎರಡಾಣೆ ಸಿಕ್ಕದಂತೆ ಆಗಿರುವ ತಪ್ಪನ್ನು ಹುಡುಕಿ ತೆಗೆದುಹಾಕು" ಎಂದಾಗುತ್ತದೆ. ಹಾಗೆಯೇ ಶಾಸ್ತ್ರಗಳಲ್ಲಿ ನಿರೂಪಿಸಲ್ಪಟ್ಟಿರುವ ಬೋಧನೆಯು ಆತ್ಮನು ಅರಿವಿಗೆ ಸಿಲುಕುವ ವಸ್ತುವೆಂದಲ್ಲ. "ಅವಿದ್ಯೆಯನ್ನು ತೆಗೆದು ಹಾಕು, ಅದರ ಕೊಂಬೆ ರೆಂಬೆಗಳು ಸದಾ ವ್ಯಕ್ತವಾಗಿರುವ ಸತ್ಯವನ್ನು ಅರಿಯಲು ಅಡ್ಡಿಯಾಗಿವೆ" ಎಂಬುದಾಗಿ. ಆ ಕೆಲಸವು-ಅವಿದ್ಯಾ ನಿವಾರಣೆಯು–ಯಶಸ್ವಿಯಾಗಿ ನಡೆದಲ್ಲಿ ಆತ್ಮವು ತಾನೇ ತಾನಾಗಿ ಪ್ರಕಾಶಿಸುವುದು.

* * * *

## ೧೦. ಇಲ್ಲಿಯೇ, ಈಗಲೇ ಯತ್ನಿಸಬೇಕು

ಮಾನವನು ತಾನೇ ಪ್ರತಿಪಾದಿಸುವಂತೆ ವಾಸ್ತವವಾಗಿಯೂ ಭಗವತ್ಸೃಷ್ಟಿಯಲ್ಲಿ ಉಚ್ಚನಾದವನು. ದೇವರು ಇತರ ಪ್ರಾಣಿಗಳನ್ನು ಸೃಜಿಸಿದಾಗ ತೃಪ್ತನಾಗಲಿಲ್ಲ. ಆದರೆ ಮನುಷ್ಯನನ್ನು ಸೃಜಿಸಿದಾಗ ತೃಪ್ತಿಯಿಂದ "ಭಲೆ, ಸರಿಯಾಯಿತು" ಎಂದುಕೊಂಡನೆಂದು ಉಪನಿಷತ್ತು ನುಡಿಯುತ್ತದೆ. ಮಾನವನ ಹಿರಿಮೆಯ ವೈಶಿಷ್ಟ್ಯ ಯಾವುದರಲ್ಲಿದೆ? ರಕ್ತ, ಮಾಂಸ ಮತ್ತು ಮೂಳೆಯಿಂದ ಆವೃತವಾದ ಶರೀರವನ್ನು ತೆಗೆದುಕೊಂಡರೆ, ಅದರಲ್ಲಿ ಹೇಳಿಕೊಳ್ಳುವಂತಹುದು ಏನೂ ಇಲ್ಲ. ಅವನ ಚರ್ಮ ಎಕ್ಕಡಗಳನ್ನು ತಯಾರಿಸಲು ಸಹ ಉಪಯೋಗಕ್ಕೆ ಬರದು. ಕುರಿಯ ಚರ್ಮ ಒಳ್ಳೆಯ ಚಕ್ಕಳವಾಗುತ್ತದೆ. ಜಿಂಕೆಯ ಹಾಗೂ ಹುಲಿಯ ಚರ್ಮಗಳು ಜಪಾನುಷ್ಠಾನಗಳಲ್ಲಿ ಕುಳಿತುಕೊಳ್ಳಲು ಶ್ರೇಷ್ಠವೆಂದು ಪರಿಗಣಿಸಲ್ಪಟ್ಟಿವೆ. ಕುರಿಯ ತುಪ್ಪಟವು ಕಂಬಳಿಯೇ ಮೊದಲಾದ ಉಣ್ಣೆಯ ಬಟ್ಟೆಗಳನ್ನು ತಯಾರಿಸಲು ಉಪಯುಕ್ತವಾಗಿವೆ. ಮಾನವನ ಕೇಶವು ಅತ್ಯಂತ ಹೊಲಸಾಗಿದ್ದು ಅದನ್ನು ಮುಟ್ಟಿದರೆ ಕೈಯ್ಯನ್ನು ತೊಳೆಯಬೇಕಾಗುತ್ತದೆ. ಮಾನವನ ಉಗುರೂ ಸಹ ಅಶುದ್ಧ. ಆದರೆ ಕ್ರೂರ ಪ್ರಾಣಿಯಾದ ಹುಲಿಯ ಉಗುರುಗಳು ದೇವಾಲಯಗಳಲ್ಲಿಯೂ ಆಭರಣವಾಗಿ ಉಪಯೋಗವಾಗುತ್ತದೆ. ಮಾನವನ ಹಲ್ಲು ತೀರ ಅಸಹ್ಯವಾಗಿದ್ದು, ಆನೆಯ ದಂತವು ಅತ್ಯಂತ ಮೌಲ್ಯವುಳ್ಳದ್ದಾಗಿದೆ. ದನಗಳ ಗಂಜಲವೂ ಸಹ ಔಷಧಿಯ ಗುಣಹೊಂದಿದೆ. ಸಗಣಿಯು ಮನೆಯ ನೆಲವನ್ನು ಶುದ್ಧಗೊಳಿಸಲು ಉಪಯೋಗಕ್ಕೆ ಬರುತ್ತದೆ. ಮಾನವನ ಶರೀರದಲ್ಲಿ ಹೆಮ್ಮೆಪಡುವಂಥದ್ದೇನಿದೆ? ದೈಹಿಕ ಸೌಂದರ್ಯವೇ ಹೆಮ್ಮೆಗೆ ಕಾರಣವೆ? ನವಿಲು, ಗಿಣಿ, ಹುಲಿ, ಸಿಂಹಗಳೂ ಸಹ ಸೌಂದರ್ಯವುಳ್ಳ ಪ್ರಾಣಿಗಳೆಂದು ರಕ್ಷಿಸಲ್ಪಟ್ಟು ಪ್ರದರ್ಶನಕ್ಕಿಡಲ್ಪಟ್ಟಿರುವುದನ್ನು ಕಾಣುತ್ತೇವೆ. ಆದರೆ ಮನುಷ್ಯನನ್ನು–ಹೆಣ್ಣಾಗಲಿ ಗಂಡಾಗಲಿ–ದರ್ಶನೀಯ ವಸ್ತುವೆಂದು ಎಲ್ಲಿಯೂ ಪ್ರದರ್ಶನಕ್ಕಿಟ್ಟಿರುವುದಿಲ್ಲ. ಮಾನವನು ದೈಹಿಕ ಶಕ್ತಿಯ ವಿಷಯವಾಗಿ ಹೆಮ್ಮೆಪಡಬಹುದೆ? ಅನೇಕ ಮೃಗಗಳು ಅವನಿಗಿಂತ ಬಲಯುತವಾಗಿವೆ. ಅವನ ಕಣ್ಣುಗಳು ದೂರದರ್ಶಿಯಾಗಿದ್ದರೆ, ಹದ್ದಿನ



ಕಣ್ಣುಗಳು ಅತಿ ದೂರದರ್ಶಿಯಾಗಿವೆ; ಅವನ ಶ್ರವಣಶಕ್ತಿ ಸೂಕ್ಷ್ಮವೆಂದರೆ, ಹಾವಿನ ಕಿವಿ ಸೂಕ್ಷ್ಮತಮ; ಹಾವುಗಳಿಗೆ ಕಿವಿಯೇ ಇಲ್ಲವೆಂದೂ ಕಣ್ಣುಗಳಿಂದಲೇ ಶಬ್ದಗ್ರಹಣ ಮಾಡುತ್ತವೆಂದೂ ಹೇಳುತ್ತಾರೆ. ವಾಸನೆಯನ್ನು ಹಿಡಿಯುವುದರಲ್ಲಿ ಘ್ರಾಣೇಂದ್ರಿಯ ಚುರುಕಾಗಿದ್ದರೆ, ನಾಯಿಯ ಘ್ರಾಣೇಂದ್ರಿಯ ಅದನ್ನೂ ಮೀರಿಸುವಷ್ಟು ಚುರುಕಾಗಿದೆ. ಮಾನವ ತನ್ನ ಸಾಮರ್ಥ್ಯದ ಬಗ್ಗೆ ಹೆಮ್ಮೆಪಡಲು ಕಾರಣವೇ ಇಲ್ಲ. ಬುದ್ಧಿವಂತಿಕೆಯ ದೃಷ್ಟಿಯಿಂದ ತಾನು ಮೇಲಿನವನೆಂದು ಆತ ಸಾಧಿಸಿದಲ್ಲಿ, ನರಿಯು ಇನ್ನೂ ಅಧಿಕತಮವಾಗಿ ತನ್ನ ಬುದ್ಧಿಯ ಮೇಲ್ಮೆಯನ್ನು ಸಾಧಿಸಬಹುದು! ಮಾನವ ತನ್ನನ್ನು, ಶರೀರ, ಇಂದ್ರಿಯಗಳು ಮತ್ತು ಮನಸ್ಸು ಇವುಗಳಲ್ಲೇ ಇರುವುದಾಗಿ ತಿಳಿದಿದ್ದಲ್ಲಿ, ಅವನೂ ಪ್ರಾಣಿಯೇ ಎಂಬುದರಲ್ಲಿ ಸಂದೇಹವಿರದಿದ್ದರೂ, ಇತರ ಪ್ರಾಣಿಗಳಿಗಿಂತ ಆತನನ್ನು ಪ್ರತ್ಯೇಕಿಸಿ ಮೇಲಿರಿಸುವ ಅಂಶವೆಂದರೆ, ಎಲ್ಲ ಪ್ರಾಣಿಗಳಿಗೂ ಸಮಾನವಾಗಿದ್ದು ತನ್ನಲ್ಲೂ ಇರುವ ಕಾರಣಗಳಿಂದಲ್ಲ. ಆದರೆ ಎಲ್ಲ ಪ್ರಾಣಿಗಳಲ್ಲೂ ಇಲ್ಲದ, ತನ್ನಲ್ಲಿರುವ ಗುಣ ವಿಶೇಷದಿಂದ. ಆ ಗುಣವೇ ವಿವೇಕ, ಯುಕ್ತಾಯುಕ್ತ ಪರಿಜ್ಞಾನ. ಅದು ಯಾವುದು ಪುರಸ್ಕಾರಾರ್ಹ, ಯಾವುದು ತಿರಸ್ಕರಣೀಯವೆಂದರಿತುಕೊಳ್ಳುವ ಜಾಣತನವಷ್ಟೇ ಅಲ್ಲ. ಏಕೆಂದರೆ ಈ ಜಾಣತನ ಪ್ರಾಣಿಗಳಲ್ಲೂ ಇರುತ್ತದೆ. ಯಾವುದು ಸರಿ. ಯಾವುದು ತಪ್ಪು ಎಂಬ ತಿಳುವಳಿಕೆ, ನೈತಿಕ ಮೌಲ್ಯಮಾಪನ ಮಾಡುವ ಸಾಮರ್ಥ್ಯ ಮತ್ತು ಉತ್ತಮವಾದ ಜೀವನಾದರ್ಶವನ್ನು ಹೊಂದಿ ಅದಕ್ಕಾಗಿ ಪ್ರಯತ್ನಿಸುವ ದಕ್ಷತೆ ಅಗತ್ಯ. ಮಾನವನಲ್ಲಿ ಈ ತಿಳುವಳಿಕೆ, ಸಾಮರ್ಥ್ಯ ಮತ್ತು ದಕ್ಷತೆಗಳಿಗೆ ಅಭಾವವಿದ್ದಲ್ಲಿ ತಾನು ಮಾನವನಾಗಿ ಹುಟ್ಟಿರುವುದಕ್ಕೆ ಆತ ಹೆಮ್ಮೆ ಪಡಬೇಕಾದ್ದಿಲ್ಲ. ತನ್ನ ಕಾಲವನ್ನೆಲ್ಲಾ ಮೃಗತೃಷ್ಣಾ ತೃಪ್ತಿಗಾಗಿಯೇ ವಿನಿಯೋಗಿಸುತ್ತಾ, ಈ ತಿಳುವಳಿಕೆ, ಸಾಮರ್ಥ್ಯ ಮತ್ತು ದಕ್ಷತೆಗಳನ್ನು ಪಡೆಯಲಾಗಲಿ ಅಥವಾ ಅವುಗಳನ್ನು ಕುರಿತು ಆಲೋಚಿಸಲಾಗಲಿ ಆತನಿಗೆ ಸಮಯವಿರದಿದ್ದರೆ, ತಾನು ಮಾನವ ಜೀವನ ನಡೆಸುತ್ತಿದ್ದೇನೆಂದು ಹೇಳಿಕೊಳ್ಳಲು ಆತ ಅನರ್ಹ. ಮಾನವ ಜನ್ಮದ ಹಿರಿಮೆ ಮತ್ತು ಶ್ರೇಷ್ಠತೆಯನ್ನು ಕುರಿತು ಕ್ಷಣಕಾಲ ಚಿಂತಿಸುವ ಯಾವನಾದರೂ ಸಹ, ತನಗಿಂತ ಹೆಚ್ಚಲ್ಲದಿದ್ದರೂ ಸರಿಸಮವಾಗಿಯೇ ಇಂದ್ರಿಯತೃಪ್ತಿಯಲ್ಲಿ ಮುಳುಗಿರುವ ಮೃಗಗಳಂತೆ, ತಾನೂ ಸಹ ಲೌಕಿಕ ಸುಖಗಳಲ್ಲಿಯೇ ಮತ್ತನಾಗಿರಲು ಮತ್ತು ಅಂತಹ ಪ್ರಾಣಿಗಳೊಡನೆ ತನ್ನನ್ನು ಸೇರಿಸಿಕೊಳ್ಳಲು ನಾಚುತ್ತಾನೆ. ಅವನು ತನ್ನ ಬುದ್ಧಿಶಕ್ತಿಯನ್ನು, ಆಸೆ ಆಕಾಂಕ್ಷೆಗಳ ಪರಿಧಿಯ ವಿಸ್ತರಣಕ್ಕಾಗಿ ಮತ್ತು ಹೆಚ್ಚೆಚ್ಚು ಲೌಕಿಕ ಸುಖಗಳನ್ನು ಸಂಪಾದಿಸಲು ಬಳಸಿಕೊಂಡಲ್ಲಿ, ದೈವದತ್ತವಾದ ಶ್ರೇಷ್ಠ ವರವನ್ನು

ದುರುಪಯೋಗಪಡಿಸಿಕೊಂಡಂತೆ ಆಗುತ್ತದೆ. ತನ್ನನ್ನು ಮೃಗಗಳ ಮಟ್ಟದಿಂದ ಮೇಲೆತ್ತಿಕೊಳ್ಳಲು, ಬುದ್ಧಿಶಕ್ತಿಯನ್ನು ಬಳಸಿಕೊಳ್ಳಬೇಕು. ತನ್ನ ಆಲೋಚನೆ, ಮಾತು ಮತ್ತು ಕೃತಿಗಳನ್ನು ಇಲ್ಲಿಯೇ, ಈಗಲೇ ತಾನು ದೈವೀವ್ಯಕ್ತಿಯಾಗುವಂತೆ ಶ್ರುತಿಗೊಳಿಸಬೇಕು. ಎಲ್ಲ ಮತಗಳ ಸಾರವೂ ಇದೇ ಆಗಿದೆ. ನಮ್ಮ ಧರ್ಮವು ಮಾನವನ ಕರ್ತವ್ಯದ ಬಗ್ಗೆ ಹೆಚ್ಚು ಒತ್ತಿ ನುಡಿಯುತ್ತದೆ. ತನ್ನ ಜನ್ಮವನ್ನು ಉತ್ತಮಗೊಳಿಸಲು, ಮಾನವಜನ್ಮಕ್ಕಿಂತ ಹೆಚ್ಚಿನದಾದ ಅಸ್ತಿತ್ವಕ್ಕೆ ಅರ್ಹತೆ ಪಡೆಯಲು ಮತ್ತು ಅಂತಿಮವಾಗಿ ಯಾವ ಲೌಕಿಕ ಬಂಧನಕ್ಕೂ ವಶನಾಗದೆ ಪರಮಾರ್ಥ ತತ್ತ್ವದಲ್ಲಿ ತನ್ನ ಐಕ್ಯವನ್ನು ಕಂಡುಕೊಳ್ಳುವುದಕ್ಕಾಗಿ ಮಾನವನು ತನ್ನ ಜೀವಿತವನ್ನು ಉಪಯೋಗಿಸಬೇಕೆಂದು ನಮ್ಮ ಧರ್ಮವು ಸಾರುತ್ತದೆ.

ಪ್ರಾಣಿಗಳಿಗೆ ವಿವೇಚನಾಶಕ್ತಿ ಇರದುದರಿಂದ, ಅವುಗಳಿಗೆ ಇದು ಸರಿ, ಇದು ತಪ್ಪು ಎಂಬುದೇ ಇಲ್ಲ. ಅವು ಉದ್ವೇಗ ಮತ್ತು ಪ್ರೇರಣೆಯಿಂದ ಕ್ರಿಯಾಮಗ್ನವಾಗುತ್ತವೆ. ಇದಕ್ಕೆ ಈ ಪ್ರೇರಣೆ ಪ್ರಚೋದನೆಗಳನ್ನು ನಿರ್ಲಕ್ಷಿಸುವಷ್ಟು ಸಾಮರ್ಥ್ಯವಿಲ್ಲ. ಒಳಿತು ಕೆಡಕುಗಳು ಅವಕ್ಕೆ ಅರ್ಥವಾಗವು. ಪ್ರಾಣಿಗಳಿಗಾಗಿ, ಅವುಗಳ ಮಾರ್ಗದರ್ಶನಕ್ಕಾಗಿ ಕಾನೂನಾಗಲಿ ಶಾಸ್ತ್ರ ಗ್ರಂಥವಾಗಲಿ ಇಲ್ಲ. ಮನುಷ್ಯನನ್ನು ತಿವಿದು ಕೊಂದ ಗೂಳಿಯನ್ನಾಗಲಿ, ಹುಲಿಯನ್ನಾಗಲಿ ಬಂಧಿಸಿ, ಕೋರ್ಟಿಗೆ ಒಯ್ದು, ದೋಷಾರೋಪ ಹೊರಿಸಿ, ಶಿಕ್ಷೆಗೆ ಗುರಿ ಮಾಡುವುದಿಲ್ಲ. ಮೃಗಗಳಿಗಾಗಿ ಗಂಗಾಸ್ನಾನವಾಗಲಿ ಸೇತುಸ್ನಾನವಾಗಲಿ ಪ್ರಾಯಶ್ಚಿತ್ತವನ್ನಾಗಲಿ ಶಾಸ್ತ್ರಗಳು ವಿಧಿಸುವುದಿಲ್ಲ.

ಮಾನವನ ಕರ್ತವ್ಯ ಕುರಿತು ಇಷ್ಟೊಂದು ಗುರುತರವಾದ ಒತ್ತಡವೇಕೆ? ಎಂದು ಕೇಳಬಹುದು. ಈ ಭೂಮಿಯೊಂದೇ ಅನುಭವಗಮ್ಯವಾದ ಲೋಕವಲ್ಲ. ಬ್ರಹ್ಮಲೋಕದವರೆಗೆ ಸಂಖ್ಯಾತೀತವಾದಷ್ಟು ಲೋಕಗಳಿವೆ. ಇಲ್ಲಿ ನಡೆಸುವ ಸತ್ಯ ಧರ್ಮಗಳಿಂದ ಈ ಲೋಕಗಳಿಗೆ ಹೋಗಿ, ಅಲ್ಲಿ ಇನ್ನೂ ಶ್ರೇಷ್ಠತರವಾದ ಸುಖಗಳನ್ನನುಭವಿಸಿ, ಅವುಗಳಿಗಿಂತ ಶ್ರೇಷ್ಠತಮವಾದ ಸುಖವನ್ನು ಪಡೆಯಲು ಶ್ರಮಿಸಿ ಅಥವಾ ಜನನ ಮರಣಗಳ ಬಂಧನದಿಂದ ಬಿಡುಗಡೆಯನ್ನು ಪಡೆಯಲು ಯತ್ನಿಸಬಹುದು. ಆದರೆ ಆ ಲೋಕಗಳೆಲ್ಲವೂ ಕ್ರಿಯೆಯು ನಡೆಯುವಂಥಹ ಕರ್ಮಕ್ಷೇತ್ರಗಳಲ್ಲ; ಕೇವಲ ಫಲವನ್ನನುಭವಿಸಬಹುದಾದ ಸ್ಥಳಗಳು. ಶಾಸ್ತ್ರವಿಹಿತವಾದ ಯಾವ ಕರ್ಮಗಳನ್ನು ಆ ಉನ್ನತ ಲೋಕಗಳಲ್ಲಿ ನಡೆಸಲು ಸಾಧ್ಯವಿಲ್ಲ. ಪಕ್ಷಿಯು ತಾನೆಷ್ಟೇ ಎತ್ತರದಲ್ಲಿ ಹಾರಾಡುತ್ತಿರಲಿ, ಆಹಾರವನ್ನುಂಡು, ಇನ್ನೂ ಎತ್ತರಕ್ಕೆ ಹಾರುವ ಶಕ್ತಿಗಳಿಸಲು, ಕೆಳಕ್ಕಿಳಿದೇ ತೀರಬೇಕು. ಹಾಗೆಯೇ ಉತ್ತಮ ಲೋಕಗಳಲ್ಲಿರುವವರು, ಇಲ್ಲಿ ಸತ್ಕರ್ಮ ನಡೆಯಿಸಿ ಪುಣ್ಯಾರ್ಜನೆ



ಮಾಡಿರುವುದರಿಂದ ಇಲ್ಲಿ ಸಂದಿರುವರು. ಆ ಪುಣ್ಯಸಂಗ್ರಹವನ್ನೆಲ್ಲಾ ಸುಖಸಂತೋಷಗಳಲ್ಲಿ ಕಳೆದ ನಂತರ ಮತ್ತೆ ಭೂಮಿಗೆ ಬರಲೇಬೇಕಾಗುತ್ತದೆ, ಪುಣ್ಯಸಂಚಯ ಮಾಡಿ ಪುನಃ ಉತ್ತಮಲೋಕಕ್ಕೆ ಹೋಗಲು. ಅವೆಲ್ಲವೂ ಸುಖ, ಹರ್ಷದ ಅನುಭವವನ್ನು ತಂದುಕೊಡುವ ಲೋಕಗಳಾದ್ದರಿಂದ, ಮನಸ್ಸು ಸುಖ, ಹರ್ಷವೀವ ಅನೇಕ ವಸ್ತುಗಳಲ್ಲಿ ಮಗ್ನವಾಗಿ, ಬೇರೆ ವಿಷಯಗಳತ್ತ ತಿರುಗದು. ಒಂದುವೇಳೆ ಇತರ ವಿಷಯಗಳತ್ತ ಅದರ ಗಮನ ಹರಿದರೂ ಮೊದಲೇ ಹೇಳಿದಂತೆ ಆ ಲೋಕಗಳಲ್ಲಿ ಕರ್ಮ ನಡೆಸುವ ಅನುಕೂಲತೆಗಳಿಲ್ಲ.

ಬಂಧವಿಮುಕ್ತಿಗಾಗಿ ಪಡೆದುಕೊಳ್ಳಬೇಕಾದ ಸರ್ವಶ್ರೇಷ್ಠ ಜ್ಞಾನಾರ್ಜನೆಗಂತೂ ಆ ಲೋಕಗಳಲ್ಲಿ ಸಿಕ್ಕುವ ಸೌಲಭ್ಯಗಳು ತೀರಾ ಕಡಿಮೆ. ಅಂತಹ ಜ್ಞಾನವನ್ನು ಭೂಲೋಕದಲ್ಲಾಗಲಿ, ಬ್ರಹ್ಮಲೋಕದಲ್ಲಾಗಲಿ ಪಡೆಯಬಹುದೆಂದು ಉಪನಿಷತ್ತು ಸಾರುತ್ತದೆ. ಇತರ ಮಧ್ಯವರ್ತೀ ಲೋಕಗಳಾದ ಗಂಧರ್ವ, ಪಿತೃ, ದೇವ ಲೋಕಗಳಲ್ಲಿ ಅದು ದೊರಕುವುದಿಲ್ಲ. ಬ್ರಹ್ಮಲೋಕಕ್ಕೆ ಹೋಗಲು ಅತ್ಯಂತ ಶ್ರೇಷ್ಠವಾದ ಕರ್ಮ ಮತ್ತು ಉಪಾಸನೆಗಳಲ್ಲಿ ತೊಡಗಬೇಕು. ಆ ಕರ್ಮ ಉಪಾಸನೆಗಳಲ್ಲಿ ಸಂಭವಿಸಬಹುದಾದ ವಿಘ್ನಗಳನ್ನು ಕುರಿತು ಚಿಂತಿಸಿದರೆ, ಆ ಯತ್ನವನ್ನೂ ಮತ್ತು ಆ ಲೋಕಕ್ಕೆ ಹೋಗುವ ಆಕಾಂಕ್ಷೆಯನ್ನೂ ಕೈಬಿಡುವಂತೆ ಮಾಡಿಬಿಡುತ್ತವೆ. ಎಲ್ಲ ಕರ್ಮಗಳನ್ನೂ ಅನುಭವಿಸಿ ಬ್ರಹ್ಮಲೋಕಕ್ಕೆ ಹೋದರೂ ಅಲ್ಲಿಯೂ ವೇದಾಂತಾಭ್ಯಾಸಮಾಡಬೇಕು. ಜಾಗ್ರತೆಯಾಗಿಯೇ ಆತ್ಮ ಸಾಕ್ಷಾತ್ಕಾರಮಾಡಿಕೊಂಡರೂ ಸಹ ತಕ್ಷಣ ಮುಕ್ತಿಸಿಕ್ಕದು. ಬಂಧಮುಕ್ತಿಗೆ ನಮ್ಮ ಪೂರ್ವಾರ್ಜಿತ ಕರ್ಮಫಲ ಸಂಗ್ರಹವು ವ್ಯಯವಾಗುವವರೆಗೆ– ಎಂದರೆ ಈ ಕಲ್ಪದ ಕೊನೆಯವರೆಗೆ–ಕಾಯಬೇಕು.

ಆ ಲೋಕಗಳಲ್ಲಿ ಇತರ ಅನಾನುಕೂಲಗಳೂ ಇವೆ. ಹುಟ್ಟು, ಬೆಳವಣಿಗೆ, ಬದಲಾವಣೆ, ಕ್ಷೀಣಿಸುವಿಕೆ ಮತ್ತು ಸಾವು ಇವಾವುವೂ ಅಲ್ಲಿಲ್ಲ. ಮತ್ತು ಅಲ್ಲಿರುವವರಿಗೆ ರೋಗರುಜಿನ, ಹಸಿವು ಬಾಯಾರಿಕೆ, ನಮಗಿರುವಂತೆ ನೋವು, ಇತ್ಯಾದಿಗಳಾವುವೂ ಇರದುದರಿಂದ ನೈಜ ಜ್ಞಾನಾರ್ಜನೆಗೆ ಪೂರ್ವಭಾವೀ ಆವಶ್ಯಕತೆಯಾದ ವೈರಾಗ್ಯ ಅಥವಾ ವಿಷಯಪರಾಙ್ಮುಖತೆ ಇವುಗಳನ್ನು ಆರ್ಜಿಸುವ ಸಂಭವವೇ ಅಲ್ಲಿ ಇಲ್ಲ. ಅಂತಹ ಜ್ಞಾನಾರ್ಜನೆಗೆ ಈ ದ್ವೈತಜಗತ್ತು ಮಿಥ್ಯೆಯಾಗಿ ಗೋಚರಿಸುತ್ತದೆಯೆಂಬ ಸ್ಥಿರನಂಬಿಕೆ ಬೇಕು. ನೈಜ ಅಸ್ತಿತ್ವವಿಲ್ಲದ ವಸ್ತು ಹೇಗೆ ಗೋಚರಿಸುತ್ತದೆ? ಈ ಪ್ರಶ್ನೆಗೆ ಉತ್ತರವು, ಹಗ್ಗದಲ್ಲಿನ ಹಾವಿನಂತೆ, ಕಂಬದಲ್ಲಿನ ಕಳ್ಳನಂತೆ, ಮರೀಚಿಕೆಯಲ್ಲಿನ ನೀರಿನಂತೆ, ಚಿಪ್ಪಿನಲ್ಲಿರುವ

ಬೆಳ್ಳಿಯಂತೆ, ಇತ್ಯಾದಿ ಪ್ರಾಪಂಚಿಕ ವಸ್ತುಗಳಲ್ಲಿ ದೊರಕುತ್ತದೆ. ಆ ಉತ್ತಮ ಲೋಕಗಳಲ್ಲಿ ವೇದಾಂತ ಬೋಧೆಮಾಡುವ ಉಪದೇಶಕನು ಇಂತಹ ಉದಾಹರಣೆಗಳನ್ನು ಕೊಡಲಾರನು. ಕಾರಣ ಅಲ್ಲಿ ಇವೆಲ್ಲಾ ಕಾಣಸಿಗವು ಮತ್ತು ಆ ಲೋಕಗಳಲ್ಲಿ ಕತ್ತಲಿಲ್ಲ, ನೆರಳಿಲ್ಲ, ಭ್ರಮೆಯನ್ನು ಉಂಟುಮಾಡುವ ವಸ್ತುಗಳೇ ಅಲ್ಲಿ ಇಲ್ಲ. ಕನಸುಗಳು, ಅವೆಷ್ಟೇ ವಾಸ್ತವತೆಯಂತಿರಲಿ ಭ್ರಮೆಯೆಂಬುದನ್ನು ಈ ಲೋಕದಲ್ಲಿ ಬೆರಳುಮಾಡಿ ಹೇಳಬಹುದು. ಬಾಹ್ಯ ವಸ್ತುಗಳನ್ನು ಅವಲಂಬಿಸದ ನೈಜವಾದುದೋ, ಭ್ರಮಾತ್ಮಕವಾದುದೋ ಒಂದು ಸುಖವುಂಟೆಂದೂ., ಆ ಸುಖವು ಯಾವ ಇಂದ್ರಿಯಗ್ರಹಣಶಕ್ತಿಗೂ ಸಿಕ್ಕದೆ ಅತೀತವಾಗಿದೆಯೆಂದೂ ಗಾಢನಿದ್ರೆಯ ನಿತ್ಯಾನುಭವದ ಉದಾಹರಣೆಯನ್ನು ಈ ಲೋಕದಲ್ಲಿ ಕೊಡಬಹುದು. ಉತ್ತಮ ಲೋಕಗಳಲ್ಲಿ ಇರುವವರಿಗೆ ಈ ನಿದ್ರಾನುಭವವೇ ಇಲ್ಲ. ಅವರ ರೆಪ್ಪೆಗಳು ಅಲುಗಾಡವೆಂದೂ ಹೇಳುತ್ತಾರೆ. ಆದ್ದರಿಂದ ಅವರು ಸ್ವಪ್ನ ಅಥವಾ ನಿದ್ರೆಯೆಂದರೆ ಏನೆಂದೇ ಅರಿಯರು. ಅಂತಹ ದೃಷ್ಟಾಂತಗಳನ್ನು ನಿರೂಪಿಸದೆ, ಅವರಿಗೆ ವೇದಾಂತಬೋಧೈಯನ್ನು ಮನದಟ್ಟುಮಾಡಿಕೊಡುವುದಾದರೂ ಹೇಗೆ?

ಪೂರ್ವಜನ್ಮಗಳಲ್ಲಿ ಸಂಗ್ರಹಿಸಿದ ಪುಣ್ಯಕ್ಕಾಗಿ ನಾವು ಕೃತಜ್ಞರಾಗಿರಬೇಕು. ಮಾನವಜನ್ಮದ ವರ ಪಡೆದು ಜ್ಞಾನಾರ್ಜನೆಗೆ ಸುಯೋಗ್ಯವಾದ ಈ ಜಗತ್ತಿನಲ್ಲಿ ಆಧ್ಯಾತ್ಮಸಾಧನೆಗೆ ಪರಮ ಯೋಗ್ಯವಾದ ಪವಿತ್ರ ಭರತಭೂಮಿಯಲ್ಲಿ, ಪೂರ್ವದ ಮಹಾ ಸಂತಶ್ರೇಷ್ಠರ, ಋಷಿಶ್ರೇಷ್ಠರ ಭವ್ಯ ಪರಂಪರೆಯಲ್ಲಿ ಹುಟ್ಟಿರುವುದಕ್ಕಾಗಿ ಇನ್ನೂ ಹೆಚ್ಚು ಕೃತಜ್ಞರಾಗಿರಬೇಕು. ಈಗ ನಮಗೆ ದೊರಕಿರುವ ಅಮೂಲ್ಯವಾದ ಸಾಧನ ಸೌಲಭ್ಯಗಳನ್ನು ವ್ಯರ್ಥಮಾಡಬಾರದು. ಅವುಗಳ ಸದುಪಯೋಗ ಪಡೆಯಬೇಕು. ಹೆಜ್ಜೆ ಹೆಜ್ಜೆಗೂ ಶಾಸ್ತ್ರದ ಆಜ್ಞೆಗಳನ್ನು ಪರಿಪಾಲಿಸುತ್ತಾ, ಈ ಜೀವನದಲ್ಲಿಯೇ ಅತ್ಯಂತ ಶ್ರೇಷ್ಠವಾದುದನ್ನು ಅರಿಯಬೇಕು. ನಮ್ಮ ಪ್ರಯತ್ನಗಳು ಪ್ರಾಮಾಣಿಕವೂ ನಿಷ್ಕಪಟವೂ ಆಗಿದ್ದಲ್ಲಿ, ಪ್ರಗತಿಯ ಮಾರ್ಗದಲ್ಲಿ ದೇವರು ಖಂಡಿತವಾಗಿಯೂ ಸುಲಲಿತವಾಗಿ ಮುನ್ನಡೆಸಿ, ದ್ವೈತವಲ್ಲದ ಪರಮಾನಂದದ ಆತ್ಮಸಾಕ್ಷಾತ್ಕಾರಕ್ಕೆ ನಮ್ಮನ್ನು ಒಯ್ಯುವನು.

* * * *